Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ–19 | ಸಂಚಿಕೆ–31 | ಜುಲೈ 28–ಆಗಸ್ಟ್ 3, 2025 | ಪುಟ 16 | ರೂ.10
Volume-19 | Issue-31 | July 28-Aug 3, 2025 | Pages:16 | Price: 10/-



ಲಾಲ್ ಸಲಾಂ ಕಾಮ್ರೇಡ್ ವಿ.ಎಸ್.ಅಚ್ಯುತಾನಂದನ್



ವಿಶ್ವವಿದ್ಯಾಲಯವು ಕೇಸರಿ ತೋಟವಲ್ಲ

ವಲಸೆ ಮತ್ತು ವರಕೀಯತೆ ರಾಜಕಾರಣ

ಡೊನೇಷನ್ ಮಾಫಿಯಾಗೆ ಕಡಿವಾಣ ಯಾಕಿಲ್ಲ?

‘ಹೂತುಹಾಕಲಾದ’ ಸತ್ಯ ಹೊರಬರಬೇಕು

6 ದಶಕಗಳು ತೋಟ ಕಾರ್ಮಿಕ ಚಳುವಳಿಯನ್ನು ಮುನ್ನಡೆಸಿದ ವಿ.ಸುಕುಮಾರ್ ಅವರಿಗೆ ಈಗ 80 ವರ್ಷ

ಕರ್ನಾಟಕದ ಮಲೆನಾಡು ಪ್ರದೇಶಗಳಲ್ಲಿರುವ ಕಾಫಿ ತೋಟಗಳಲ್ಲಿ, ಆರಂಭದ ಕಾಲಘಟ್ಟದಲ್ಲಿ ಕಾರ್ಮಿಕರಿಂದ ಗುಲಾಮರಿಗಿಂತ ಕ್ಕೆಟ್ಟದಾಗಿ ದುಡಿಸಿಕೊಳ್ಳಲಾಗುತ್ತಿತ್ತು. ಇವರ ದುಡಿಮೆಗೆ ಸರಿಯಾದ ಕೂಲಿ, ಮತ್ತಿತರೆ ಸೌಲಭ್ಯಗಳನ್ನು ಕೇಳುವಂತೆಯೇ ಇರಲಿಲ್ಲ. ಈ ಕಾರ್ಮಿಕರು 1956ರಲ್ಲಿ ಸಿಐಟಿಯು ಅಡಿಯಲ್ಲಿ "ಕರ್ನಾಟಕ ಪ್ರೆವೆನ್ಸಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್" ಸ್ಥಾಪಿಸಿಕೊಳ್ಳುತ್ತಾರೆ. ಅಲ್ಲಿಂದ ಮಲೆನಾಡು ಭಾಗದಲ್ಲಿ ಕೆಂಬಾವುಟದ ನೇತೃತ್ವದ ಕಾರ್ಮಿಕ ಚಳುವಳಿ ಆರಂಭವಾಗುತ್ತದೆ. ಮಾಲೀಕರು ಮತ್ತು ಮಾಲಿಕರ ಗೂಂಡಾಗಳಿಂದ ತೀರ್ವತರವಾದ ದಾಳಿಗಳನ್ನು ಎದುರಿಸಿ ನಿಂತ ವಿ.ಸುಕುಮಾರ್ ಅವರು, ಆರು ದಶಕಗಳ ಕಾಲ ತೋಟ ಕಾರ್ಮಿಕರ ಚಳುವಳಿಯನ್ನು ಮುನ್ನಡೆಸಿದ್ದಾರೆ. ಕಾರ್ಮಿಕರ ಸಂಬಳ, ಸವಲತ್ತುಗಳು ಮಾತ್ರವಲ್ಲದೆ, ಅವರ ದಿನನಿತ್ಯದ ಬದುಕಿನ ಅಗತ್ಯಗಳನ್ನು ಪೂರೈಸಲು ಮತ್ತು ಘನತೆಯ ಬದುಕನ್ನು ರೂಪಿಸಲು ಹಲವು ಹೋರಾಟಗಳನ್ನು ಮುನ್ನಡೆಸಿದ್ದಾರೆ.

– ಹೆಚ್.ಎಸ್.ನವೀನ್ ಕುಮಾರ್

ಮಲೆನಾಡು ಎಂದರೆ ಇಲ್ಲಿಯ ಅಚ್ಚ ಹಸಿರು, ಪ್ರಕೃತಿ ಸೌಂದರ್ಯ, ಕಾಫಿ ತೋಟಗಳು. ಈ ಸೌಂದರ್ಯವನ್ನು ಸವಿಯಲು ಕಣ್ಣೆರಡು ಸಾಲದು. ಈ ಪ್ರಕೃತಿ ಸೌಂದರ್ಯದ ಜೊತೆಗೆ ಬಿಸಿಬಿಸಿ ಕಾಫಿ ಕೈಯಲ್ಲಿದ್ದರೆ ಸ್ವರ್ಗಕ್ಕೆ ಕಿಚ್ಚು ಹಚ್ಚಿದಂತೆಯೇ ಲೆಕ್ಕ. ಕಾಫಿ ಎನ್ನುವುದು ಇಲ್ಲಿ ಮಾತ್ರವಲ್ಲ, ಜಗತ್ತಿನ ಎಲ್ಲೆಡೆಗಳಲ್ಲೂ ಒಂದು ಪ್ರಮುಖ ಪಾನೀಯವಾಗಿದೆ. ಅದರಲ್ಲೂ ಸ್ನೇಹ ಬೆಸೆಯಲು, ಮಾತು ಮುಂದುವರೆಸಲು, ಎಲ್ಲಕ್ಕಿಂತ ಮುಖ್ಯವಾಗಿ ಬೆಳಗೆದ್ದ ಕೂಡಲೇ ಒಂದು ಲೋಟ ಕಾಫಿ ಇಲ್ಲದೇ ಬಹುತೇಕರ ದಿನಚರಿಗಳು ಆರಂಭವಾಗುವುದಿಲ್ಲ.

ಇಷ್ಟನ್ನೆಲ್ಲಾ ಹೇಳಲು ಒಂದು ಕಾರಣವಿದೆ. ನಾವು ಪ್ರತಿ ದಿನ ಕುಡಿಯುವ ಕಾಫಿ, ಬೆಟ್ಟದಿಂದ ನಮ್ಮ ಬಟ್ಟಲಿಗೆ ಬರುವ ಹಿಂದಿನ ಕಥೆ ಅತ್ಯಂತ ರೋಚಕವಾದದ್ದು. ಮಾತ್ರವಲ್ಲ ಇದರ ಹಿಂದೆ ಸಾವಿರಾರು ಕೈಗಳ ಶ್ರಮ ಅಡಗಿರುತ್ತದೆ. ಕಾಫಿಯನ್ನು ತೋಟಗಳಲ್ಲಿ ಬೆಳಯುವಾಗಿನಿಂದ ಹಿಡಿದು ಅದನ್ನು ಸಂಸ್ಕರಿಸಿ, ಪುಡಿ ರೂಪದಲ್ಲಿ ನಮ್ಮ ಮನೆಗೆ ಬರುವವರೆಗಿನ ಕೆಲಸಗಳಲ್ಲಿ ತೊಡಗಿರುವ ಕಾರ್ಮಿಕರ ಬದುಕು, ಬೆಳಗೆದ್ದು ಎಸಿ ರೂಂನಲ್ಲಿ ಕುಳಿತು ಕಾಫಿ ಹೀರುವವರಿಗೆ ಸುಲಭದಲ್ಲಿ ಅರ್ಥವಾಗುವುದಿಲ್ಲ. ಅದಕ್ಕಾಗಿ ಅದರ ಹಿನ್ನೆಲೆಯನ್ನು ಸ್ವಲ್ಪ ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಬೇಕಿದೆ.

ಈಗ ನಾನು ಯಾರ ಬಗ್ಗೆ ಮಾತನಾಡಲು ಹೊರಟಿದ್ದೇನೆಂಬುದು ನಿಮಗೆ ಅಂದಾಜಾಗಿರುತ್ತದೆ. ಹೌದು ಕಾಫಿ ತೋಟಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಬಗ್ಗೆಯೇ. ಅದೇ ಸಂದರ್ಭದಲ್ಲಿ ಅವರನ್ನು ಮನುಷ್ಯರಂತೆ ಕಾಣಲು, ಅವರಿಗೂ ದುಡಿಮೆಯ ಪಾಲನ್ನು ದಕ್ಕಿಸಿಕೊಡಲು ಹೋರಾಡಿದ ಕಾರ್ಮಿಕ ಚಳುವಳಿ ಮತ್ತು ಅದರ ನಾಯಕರ ಬಗ್ಗೆಯೂ ಮಾತನಾಡಲು ಹೊರಟಿದ್ದೇನೆ. ಇನ್ನೂ ಹೆಚ್ಚು ಲಂಬಿಸದೇ ನೇರವಾಗಿ ವಿಷಯಕ್ಕೆ ಬರುತ್ತೇನೆ.

ದೇಶದ ಶೇ. 70ರಷ್ಟು ಕಾಫಿ ಮೂರು ಜಿಲ್ಲೆಗಳಲ್ಲಿಯೇ ಉತ್ಪಾದನೆ

ಕರ್ನಾಟಕದ ಮಲೆನಾಡು ಪ್ರದೇಶಗಳಾದ ಚಿಕ್ಕಮಗಳೂರು, ಹಾಸನ, ಕೊಡಗಿನಲ್ಲಿ ಕಾಫಿಯನ್ನು ಹೆಚ್ಚು ಬೆಳೆಯಲಾಗುತ್ತದೆ. ದೇಶದ ಶೇಖಡಾ 70ರಷ್ಟು ಕಾಫಿ ಉತ್ಪಾದನೆ ಈ ಮೂರು ಜಿಲ್ಲೆಗಳಲ್ಲಿಯೇ ನಡೆಯುತ್ತದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಕಾಫಿ ಉತ್ಪಾದನೆ ಮಾಡಲು ಅಷ್ಟೇ ದೊಡ್ಡ ಪ್ರಮಾಣದ ಮಾನವ ಸಂಪನ್ಮೂಲವೂ ಬೇಕು. ಅದಕ್ಕಾಗಿ ಈ ಮೂರು ಜಿಲ್ಲೆಗಳಲ್ಲಿ ಕಾಫಿ ಉದ್ಯಮದ ಮೇಲೆ ಅವಲಂಬಿತರಾಗಿ ಲಕ್ಷಾಂತರ ಕಾರ್ಮಿಕರು ದುಡಿಯುತ್ತಿದ್ದಾರೆ.

ಕರ್ನಾಟಕಕ್ಕೆ ಬಾಬಾಬುಡನ್ ಸಂತ ವಿದೇಶದಿಂದ ಏಳು ಬೀಜಗಳನ್ನು ತಂದು ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್ ಗಿರಿಯಲ್ಲಿ ನೆಟ್ಟು, ಮೊದಲಿಗೆ ಕಾಫಿಯನ್ನು ಅಭಿವೃದ್ಧಿಪಡಿಸಿದ ಎಂಬ ಮಾತಿದೆ. ಆ ನಂತರ ಸ್ಥಳೀಯ ಭೂಮಾಲಕರು ಮತ್ತು ಬ್ರಿಟೀಷರು ಈ ಭಾಗದಲ್ಲಿ ಕಾಫಿ ತೋಟಗಳನ್ನು ಅಭಿವೃದ್ಧಿಪಡಿಸಿದರು. ಅಕ್ಷರಶಃ ಕಾಡೇ ಆಗಿರುತ್ತಿದ್ದ ಕಾಫಿ ತೋಟಗಳಲ್ಲಿ ಕೆಲಸ ಮಾಡುವುದೆಂದರೆ ಅದು ಅತ್ಯಂತ ಸವಾಲಿನ ಕೆಲಸ. ಇಂತಹ ಅಪಾಯಕಾರಿ ಕೆಲಸಗಳಿಗೆ ಸ್ಥಳೀಯರು ಬರುತ್ತಿರಲಿಲ್ಲ. ಮಾತ್ರವಲ್ಲ ಇವರಿಗೆ ಕಾಫಿ ತೋಟಗಳಲ್ಲಿ ಕೆಲಸ ಮಾಡುವ ಅನುಭವವೂ ಇರುತ್ತಿರಲಿಲ್ಲ.

1956ರಲ್ಲಿ ಸಂಘ ರಚಿಸಿಕೊಂಡ ಕಾರ್ಮಿಕರು

ಇಂತಹ ಸಂದರ್ಭದಲ್ಲಿ ಕೇರಳ, ತಮಿಳುನಾಡು ಮತ್ತು ಮಂಗಳೂರು ಭಾಗಗಳಿಂದ ಜನರನ್ನು ಕರೆತಂದು ತೋಟಗಳಲ್ಲಿ ಕೆಲಸ ಮಾಡಿಸುತ್ತಿದ್ದರು. ಆರಂಭದ ಕಾಲಘಟ್ಟದಲ್ಲಿ ಗುಲಾಮರಿಗಿಂತ ಕ್ಕೆಟ್ಟದಾಗಿ ಈ ಕಾರ್ಮಿಕರಿಂದ ದುಡಿಸಿಕೊಳ್ಳಲಾಗುತ್ತಿತ್ತು. ಇವರ ದುಡಿಮೆಗೆ ಸರಿಯಾದ ಕೂಲಿ ಇರುತ್ತಿರಲಿಲ್ಲ. ಸರಿಯಾದ ಕೂಲಿಯೇ ಇಲ್ಲದ ಮೇಲೆ ಇನ್ನು ಇತರೆ ಸೌಲಭ್ಯಗಳನ್ನು ಕೇಳುವಂತೆಯೇ ಇಲ್ಲ. ಇಂತಹ ಸಂದರ್ಭದಲ್ಲಿ ಸಕಲೇಶಪುರದ ಟಾಟಾ ಟೀ ಎಸ್ಟೇಟ್‌ನಲ್ಲಿ ಕೆಲಸಮಾಡುತ್ತಿದ್ದ ತಮಿಳುನಾಡು ಮೂಲದ ಕಾರ್ಮಿಕರು ಮಾಲೀಕರ ಶೋಷಣೆಯನ್ನು ಸಹಿಸಲಾರದೆ, ಸಂಘ ಕಟ್ಟಿಕೊಳ್ಳಬೇಕೆಂಬ ನಿರ್ಧಾರಕ್ಕೆ ಬಂದರು. ಆಗ ಕೋಲಾರದ ಕೆಜಿಎಫ್‌ನಲ್ಲಿ ಕಮ್ಯೂನಿಸ್ಟ್ ಶಾಸಕರಾಗಿದ್ದ ಕೆ.ಎಸ್.ವಾಸನ್ ಅವರನ್ನು ಸಂಪರ್ಕಿಸಿ, 1956ರಲ್ಲಿ "ಕರ್ನಾಟಕ ಪ್ರೆವೆನ್ಸಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್" ಸ್ಥಾಪಿಸಿಕೊಳ್ಳುತ್ತಾರೆ. ಇಲ್ಲಿಂದ ಮಲೆನಾಡು ಭಾಗದಲ್ಲಿ ಕೆಂಬಾವುಟದ ನೇತೃತ್ವದ ಕಾರ್ಮಿಕ ಚಳುವಳಿ ಆರಂಭವಾಗುತ್ತದೆ.

ಚಳುವಳಿಯನ್ನು 6 ದಶಕಗಳ ಕಾಲ ಮುನ್ನಡೆಸಿದರು

ಇಂತಹ ಒಂದು ಚಳುವಳಿಯನ್ನು 6 ದಶಕಗಳ ಕಾಲ ಮುನ್ನಡೆಸಿದ ಪ್ರಮುಖ ನಾಯಕರಲ್ಲಿ ವಿ.ಸುಕುಮಾರ್‌ರವರು ಪ್ರಮುಖರು. ಸುಕುಮಾರ್ ಅವರ ತಂದೆ ವೇಲಾಯುದನ್ ಕೇರಳದಿಂದ ಚಿಕ್ಕಮಗಳೂರಿನ ತೋಟಗಳಿಗೆ ಕಾರ್ಮಿಕರನ್ನು ಕರೆತಂದು ಕೆಲಸಕ್ಕೆ ಬಿಡುತ್ತಿರುತ್ತಾರೆ. ಆನಂತರ ಅಲ್ಲಿಯೇ ನೆಲೆನಿಂತು ಮೇಸ್ತ್ರಿ ಕೆಲಸವನ್ನು ಮುಂದುವರೆಸುತ್ತಾರೆ. ವೇಲಾಯುಧನ್ ಮತ್ತು ವಳ್ಳಿಯಮ್ಮ ದಂಪತಿಗಳಿಗೆ 1945ರ ನವೆಂಬರ್ 11 ರಂದು ಹುಟ್ಟಿದವರೇ ಸುಕುಮಾರ್. ತಮ್ಮ ಬಾಲ್ಯ ಮತ್ತು ವಿದ್ಯಾಭ್ಯಾಸವನ್ನು ತೋಟ ಕಾರ್ಮಿಕರ ನಡುವೆಯೇ ಚಿಕ್ಕಮಗಳೂರಿನ ಮಹಲ್ ಪ್ರದೇಶದಲ್ಲಿ ಪೂರೈಸುವ ಸುಕುಮಾರ್‌ರವರು, ತೋಟಕಾರ್ಮಿಕರ ಕಷ್ಟಗಳನ್ನು ನೋಡುತ್ತಲೇ ಬೆಳೆದರು. ಅವರು ವಾಸವಾಗಿದ್ದ ಪಕ್ಕದ ತೋಟದಲ್ಲಿ ನಡೆಯುವ ಒಂದು ಗಲಾಟೆಯಿಂದಾಗಿ 1964ರಲ್ಲಿ ಇವರಿಗೆ ಕೆಂಬಾವುಟದ ತೋಟಕಾರ್ಮಿಕರ ಸಂಪರ್ಕ ಸಿಕ್ಕಿ, ಅಲ್ಲಿಂದ ಇಲ್ಲಿಯವರೆಗೂ ನಿರಂತರವಾಗಿ

....ಪುಟ 4ರಿಂದ

ತಮ್ಮ ಇಡೀ ಜೀವನವನ್ನು ಕಾರ್ಮಿಕರ ಹೇಳಿಗೆಗಾಗಿಯೇ ಮುಡಿಪಿಟ್ಟಿದ್ದಾರೆ.

ಕಾರ್ಮಿಕರು ಸಂಘಟಿತರಾಗಿ ಹಲವು ಹೋರಾಟಗಳನ್ನು ನಡೆಸಿದರು

ಸುಕುಮಾರ್‌ರವರೇ ಹೇಳಿಕೊಳ್ಳುವಂತೆ, ಆ ಕಾರ್ಮಿಕರು ಅತ್ಯಂತ ಹೀನಾಯವಾಗಿ ಹಂದಿಗೂಡುಗಳಿಗಿಂತ ಕೆಟ್ಟದಾಗಿರುವ ಗುಡಿಸಲುಗಳಲ್ಲಿ ಉಳಿದುಕೊಂಡು ತೋಟದ ಕೆಲಸ ಮಾಡುತ್ತಿದ್ದರು. ಈ ಕಾರ್ಮಿಕರು ಸಂಘಟಿತರಾಗಿ, ಹತ್ತು ಹಲವು ಸಮರಧೀರ ಹೋರಾಟಗಳನ್ನು ನಡೆಸಿ ತಮ್ಮ ಹಕ್ಕುಗಳನ್ನು ಪಡೆದುಕೊಂಡರು. ಇದರಿಂದಾಗಿ, ಅವರ ಬದುಕು ಇರುವುದರಲ್ಲಿ ಸ್ವಲ್ಪ ಉತ್ತಮವಾಯಿತು. ಮಾತ್ರವಲ್ಲ, ಮಾಲೀಕರು ಎಂದರೆ ಅವರನ್ನು ತಲೆಯೆತ್ತಿಯೂ ನೋಡದ ಕಾರ್ಮಿಕರು, ಕಾರ್ಮಿಕರನ್ನು ಪ್ರಾಣಿಗಳಿಗಿಂತ ಕಡೆಯಾಗಿ ನಡೆಸಿಕೊಳ್ಳುತ್ತಿದ್ದ ಮಾಲೀಕರು, ಸಂಘಟಿತ ಹೋರಾಟದ ನಂತರ ಒಂದೇ ಟೇಬಲಿನ ಮೇಲೆ ಅದೇ ಕಾರ್ಮಿಕರೆದುರು ಕುಳಿತು ಮಾತುಕತೆ ಮಾಡಬೇಕಾದ ಒಂದು ಸಂದರ್ಭವನ್ನು ನಿರ್ಮಾಣ ಮಾಡುವುದರಲ್ಲಿ ಸಿಐಟಿಯು ನೇತೃತ್ವದ ತೋಟ ಕಾರ್ಮಿಕರ ಸಂಘ ಮತ್ತು ಅದಕ್ಕೆ ನಾಯಕತ್ವ ನೀಡಿದ್ದ ಸುಕುಮಾರ್ ಸೇರಿದಂತೆ ಹಲವರ ಪರಿಶ್ರಮ ಕಾರ್ಮಿಕರಿಗೆ ಆತ್ಮಭಲವನ್ನು ಹೆಚ್ಚಿಸಿತು.

ಕಾರ್ಮಿಕರ ಸಂಬಳ, ಸವಲತ್ತುಗಳು ಮಾತ್ರವಲ್ಲದೆ, ಅವರ ದಿನನಿತ್ಯದ ಬದುಕಿನ ಅಗತ್ಯಗಳನ್ನು ಪೂರೈಸಲು ಮತ್ತು ಘನತೆಯ ಬದುಕನ್ನು ರೂಪಿಸಲು ಹಲವು ಹೋರಾಟಗಳನ್ನು ನಡೆಸಿದ್ದಾರೆ. ಈ ಸಂದರ್ಭದಲ್ಲಿ ಮಾಲೀಕರು ಮತ್ತು ಅವರ ಗೂಂಡಾಗಳಿಂದ ತೀರ್ವತರವಾದ ದಾಳಿಗಳನ್ನು ಸುಕುಮಾರ್ ಮತ್ತು ಸಂಘಡಿಗರು ಎದುರಿಸಿದ್ದಾರೆ. ಇಷ್ಟೆಲ್ಲಾ ಆದರೂ ಕಾರ್ಮಿಕರ ಪರವಾಗಿ ಅಚಲವಾದ ದೃಡತೆ ಬರಲು ನನ್ನ ಮೇಲೆ ಕಮ್ಯೂನಿಸ್ಟ್ ಸಿದ್ಧಾಂತ ಮತ್ತು ಆ ಚಳುವಳಿಯ ಪ್ರಭಾವವೇ ಕಾರಣವೆಂದು ಸುಕುಮಾರ್ ಅವರೇ ಹೇಳುತ್ತಾರೆ.

ಕಾಫಿ ಕ್ಯೂರಿಂಗ್‌ಗಳಲ್ಲಿನ ಕಾರ್ಮಿಕರ ಸಂಘಟನೆ

ಹಾಸನ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳ ತೋಟಕಾರ್ಮಿಕರನ್ನು ಸಂಘಟಿಸುವುದರ ಜೊತೆಗೆ, ಕಾಫಿ ಕ್ಯೂರಿಂಗ್‌ಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಮತ್ತು ಇತರೆ ಸಂಕಷ್ಟದಲ್ಲಿರುವ ಎಲ್ಲಾ ರೀತಿಯ ಕಾರ್ಮಿಕರನ್ನು ಸಂಘಟಿಸಿ, ಅವರಿಗೆ ನ್ಯಾಯ ಕೊಡಿಸುವ ಮೂಲಕ ನಿಜವಾದ ಮಲೆನಾಡ ಕಾರ್ಮಿಕ ನಾಯಕರಾಗಿ ಸುಕುಮಾರ್ ರೂಪುಗೊಂಡರು. ಕರ್ನಾಟಕ ಪ್ರೆವೆನ್ಸಿಯಲ್ ಪ್ಲಾಂಟೇಷನ್ ಕಾರ್ಮಿಕರ ಪ್ರಧಾನ ಕಾರ್ಯದರ್ಶಿ, ಅಧ್ಯಕ್ಷರು, ಆಲ್ ಇಂಡಿಯಾ ಫ್ಲಾಂಟೇಷನ್ ವರ್ಕರ್ಸ್ ಫೆಡರೇಷನ್‌ನ ಉಪಾಧ್ಯಕ್ಷರಾಗಿ, ಸಿಐಟಿಯುವಿನ ಅಖಿಲ ಭಾರತ ಜನರಲ್ ಕೌನ್ಸಿಲ್ ಸದಸ್ಯರಾಗಿ, 1964ರಿಂದ ಇಲ್ಲಿಯವರೆಗೂ ಸಿಪಿಐ(ಎಂ)ನ ಸದಸ್ಯರಾಗಿ, ಮಲೆನಾಡು ಪ್ರದೇಶ ಸಮಿತಿಯ ಪಕ್ಷದ ಕಾರ್ಯದರ್ಶಿಯಾಗಿ, ರಾಜ್ಯ ಸಮಿತಿ ಸದಸ್ಯರಾಗಿ ಕೆಲಸ ಮಾಡಿದ್ದಾರೆ.

ಇಂದು ಆಧುನಿಕ ಜೀತಪದ್ಧತಿಯಲ್ಲಿ ದುಡಿಸಿಕೊಳ್ಳಲಾಗುತ್ತಿದೆ

ಜಾಗತೀಕರಣ, ಉದಾರೀಕರಣ ನೀತಿಗಳಿಂದಾಗಿ ಕೃಷಿ ಆಧುನೀಕರಣಗೊಳ್ಳುತ್ತಿದೆ. ಆಲೋಚನಾ ವಿಧಾನಗಳು ಬದಲಾಗುತ್ತಿವೆ. ಜೀವನ ಶೈಲಿ ಬದಲಾಗುತ್ತಿದೆ. ಆದರೆ ತೋಟಕಾರ್ಮಿಕರ ಬದುಕು ಮತ್ತು ಅವರ ಕೆಲಸ ಇನ್ನೂ ಸರಿಸುಮಾರು ಹಾಗೆಯೇ ಇದೆ. ಶಿವರಾಮಕಾರಂತರು ತಮ್ಮ ಕಾದಂಬರಿ 'ಚೋಮನ ದುಡಿ'ಯಲ್ಲಿ ಕಟ್ಟಿಕೊಟ್ಟಿರುವ ತೋಟ ಕಾರ್ಮಿಕರ ಸ್ಥಿತಿಯನ್ನು ಒಮ್ಮೆ ಎಲ್ಲರೂ ಓದಬೇಕು. ಈ ಕಾರ್ಮಿಕರನ್ನು ಖಾಯಂ ಆಗಿ ನೇಮಕಮಾಡಿಕೊಳ್ಳದೇ, ಗುತ್ತಿಗೆ ಆಧಾರದಲ್ಲಿ ಆಧುನಿಕ ಜೀತಪದ್ಧತಿಯಲ್ಲಿ ದುಡಿಸಿಕೊಳ್ಳಲಾಗುತ್ತಿದೆ. ಇಂತಹ ಹತ್ತು ಹಲವು ಸವಾಲುಗಳನ್ನು, ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅದಕ್ಕಾಗಿ ಚಳುವಳಿಯನ್ನು ರೂಪಿಸಲು ಸುಕುಮಾರ್ ಅವರ 80 ನೇ ವರ್ಷಾಚರಣೆಯ ಕಾರ್ಯಕ್ರಮವನ್ನು ಸದುಪಯೋಗಪಡಿಸಿಕೊಳ್ಳಲಾಗುತ್ತಿದೆ. ಅವರ ಅನುಭವಗಳ ಆಧಾರದಲ್ಲಿ ಮುಂದಿನ ಯುವ ತಲೆಮಾರು ಜನಚಳುವಳಿಗಳಲ್ಲಿ ಹೆಚ್ಚೆಚ್ಚು ತೊಡಗಿಸಿಕೊಂಡು, ಶೋಷಣಾ ಮುಕ್ತ ಸಮಾಜದ ನಿರ್ಮಾಣಕ್ಕೆ ದುಡಿಯುತ್ತಾರೆ ಎಂದು ಆಶಿಸೋಣ. ಈಗ 80 ವರ್ಷಗಳನ್ನು ಪೂರೈಸಿರುವ ಸಂದರ್ಭದಲ್ಲಿ ಇದೇ ಜುಲೈ 26 ರಂದು "ಮಲೆನಾಡ ಕಾರ್ಮಿಕ ನಾಯಕ ಕಾಮ್ರೇಡ್ ವಿ.ಸುಕುಮಾರ್ ಅಭಿನಂದನೆ" ಕಾರ್ಯಕ್ರಮ ಹಾಸನದಲ್ಲಿ ಆಯೋಜನೆಗೊಂಡಿತ್ತು. ಆ ಕಾರ್ಯಕ್ರಮದಲ್ಲಿ ಸುಕುಮಾರ್ ಅವರ ಹೋರಾಟದ ಬದುಕು ಮತ್ತು ಪ್ಲಾಂಟೇಷನ್ ಕಾರ್ಮಿಕ ಚಳುವಳಿಯ ಇತಿಹಾಸವನ್ನು ಒಳಗೊಂಡ ಪುಸ್ತಕವನ್ನೂ ಬಿಡುಗಡೆ ಮಾಡಲಾಯಿತು.





ಹೂತು ಹಾಕಲಾದ ಸತ್ಯ ಹೊರ ಬರಬೇಕು

ಧರ್ಮಸ್ಥಳ ಪರಿಸರದಲ್ಲಿ ಹೂತುಹಾಕಲಾಗಿರುವ ಶವಗಳನ್ನು ಹೊರತೆಗೆದು ಕ್ರೂರ ಸತ್ಯವನ್ನು ಅನಾವರಣಗೊಳಿಸಬೇಕು ಎಂಬ ಸಾರ್ವಜನಿಕ ಆಗ್ರಹಕ್ಕೆ ಸರ್ಕಾರ ಕೊನೆಗೂ ಮಣಿದು ಎಸ್‌ಐಟಿ ರಚಿಸಿದೆ. ಅನುಮಾನಾಸ್ಪದವಾದ ನೂರಾರು ಶವಗಳನ್ನು 'ಮೇಲಿನವರ' ಆದೇಶದಂತೆ ಖುದ್ದಾಗಿ ತಾನೇ ಹೂತು ಹಾಕಿದ್ದು ಅವುಗಳನ್ನು ತೋರಿಸುವುದಾಗಿ 'ಅನಾಮಧೇಯ' ವ್ಯಕ್ತಿ ಹೇಳಿದ್ದ. ಈ ಬಗ್ಗೆ ನ್ಯಾಯಾಲಯದ ಮುಂದೆ ವಿಧಾನಕ್ಕೆ ಅನುಗುಣವಾಗಿ ಹೇಳಿಕೆ ದಾಖಲಿಸಿ, ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದ. ಇದಾಗಿ ಹದಿನೈದು ದಿನಗಳಾದರೂ ಏನೊಂದೂ ಅಗತ್ಯ ಕ್ರಮಗಳನ್ನೇ ಕೈಗೊಳ್ಳದ ಇಲಾಖೆ, ಸಬೂಬುಗಳನ್ನು ಹೇಳುತ್ತಲೇ ಕಾಲ ತಳ್ಳಿದ್ದು ಮತ್ತು ಸಾಕ್ಷಿ ಒದಗಿಸಲಿದ್ದ ದೂರುದಾರನನ್ನೇ ಅಪರಾಧಿಯಾಗಿಸುವ ಅಧಿಕಾರಿಗಳ ಹೇಳಿಕೆ, ಗೃಹ ಸಚಿವರ ಹಾರಿಕೆ ಉತ್ತರಗಳು ಇಡೀ ಪ್ರಕರಣವನ್ನು ಮುಚ್ಚಿಹಾಕಲು ಸಂಚು ನಡೆದಿದೆ, ಸರ್ಕಾರ ಶಾಮೀಲಾಗಿದೆ ಎಂಬ ಅನುಮಾನವನ್ನು ಹುಟ್ಟುಹಾಕಿತ್ತು. ಈ ಹಿಂದೆಯೂ ಸರ್ಕಾರ ಹಾಗೆಯೇ ನಡೆದುಕೊಂಡಿದ್ದನ್ನು ತಳ್ಳಿ ಹಾಕಲು ಸಾಧ್ಯವಿಲ್ಲ. ಇತ್ತೀಚಿನ ನಿದರ್ಶನವಾಗಿ ಸಿಬಿಐ ನ್ಯಾಯಾಲಯವು ಸೌಜನ್ಯ ಕೊಲೆ ಪ್ರಕರಣದಲ್ಲಿ ನೀಡಿದ ತೀರ್ಪು, ತನಿಖಾ ವರದಿ ಹಿನ್ನೆಲೆಯಲ್ಲಿ ಪ್ರಕರಣದ ಮರು ತನಿಖೆಗೆ ಹೋರಾಟದ ಒತ್ತಡ ಬಂದಾಗ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ ಧರ್ಮಾಧಿಕಾರಿಗಳಿಗೆ ಬೆಂಬಲದ ಅಭಯ ನೀಡಿದ್ದರು. ಯಾವುದೇ ಸರ್ಕಾರಗಳಿದ್ದಾಗಲೂ ಧರ್ಮಸ್ಥಳ ಪರಿಸರದಲ್ಲಿನ ಕ್ರಿಮಿನಲ್ ಪ್ರಕರಣಗಳಲ್ಲಿ ನ್ಯಾಯ ದೊರೆಯುವ ಬಗ್ಗೆ ಸಾರ್ವಜನಿಕವಾಗಿ ಅನುಮಾನ ಇದ್ದೇ ಇದೆ ಎಂಬುದನ್ನು ನಿರ್ಲಕ್ಷಿಸಲಾಗದು.

ಈ ಭಾಗದಲ್ಲಿ ನಡೆಯುತ್ತಿರುವ ಹೋರಾಟಕ್ಕೆ ಹಲವು ಆಯಾಮಗಳಿಗೆ ಹೋರಾಡುವವರ ಚಿಂತನೆಗಳಲ್ಲಿ ವೈವಿದ್ಯತೆ ಇದೆ. ವಿಳಂಬದ ಬಳಿಕ ಸರ್ಕಾರ ಎಸ್‌ಐಟಿ ಅನ್ನು ರಚಿಸಿರುವುದರ ಹಿಂದೆ ಪ್ರಗತಿಪರ ಜನ ಸಂಘಟನೆಗಳು, ಆ ಪರಿಸರದಲ್ಲಿ ಹೋರಾಟ ನಡೆಸುತ್ತಿರುವ ವ್ಯಕ್ತಿಗಳು, ಶಕ್ತಿಗಳು, ನ್ಯಾಯವಾದಿಗಳು, ನಿವೃತ್ತ ನ್ಯಾಯಮೂರ್ತಿಗಳ ಒತ್ತಡ, ಮುಖ್ಯವಾಗಿ, ಪ್ರಧಾನ ಸುದ್ದಿ ವಾಹಿನಿಗಳು ಬಾಯಿ ಮುಚ್ಚಿ ಕುಳಿತಿರುವಾಗ ಸಾಮಾಜಿಕ ಜಾಲತಾಣದ ಮಾಧ್ಯಮಗಳು ವಹಿಸಿದ ಪಾತ್ರ ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆಯ ಹೋರಾಟದಲ್ಲಿ ಭರವಸೆ ಹುಟ್ಟಿಸಿದೆ. ಈ ಮಾಧ್ಯಮಗಳು ವಹಿಸಿದ ಪಾತ್ರ ಆಶಾದಾಯಕ. ಆದರೆ 'ಸ್ಥಾಪಿತ ಹಿತಾಸಕ್ತಿಗಳು' ಈ ಎಲ್ಲ ಮಾಧ್ಯಮಗಳ ಬಾಯಿಗೆ ಬೀಗಹಾಕಲು ನ್ಯಾಯಾಲಯವನ್ನು ಬಳಸಿಕೊಳ್ಳುತ್ತಿರುವುದು ಆತಂಕಕಾರಿಯೂ ಕೂಡ.

ಎಸ್‌ಐಟಿ ತಂಡ ಮತ್ತು ಅದರ ನೇತೃತ್ವ ವಹಿಸಿರುವ ಅಧಿಕಾರಿಗಳ ಬಗ್ಗೆ ಸಾರ್ವಜನಿಕ ವಿಶ್ವಾಸ ಮತ್ತು ಪ್ರಶಂಸೆ ಇರುವುದಾದರೂ ಈ ಪ್ರಕರಣಗಳಲ್ಲಿ ಇರಬಹುದಾದ ಅನುಮಾನಿತ ವ್ಯಕ್ತಿ–ಶಕ್ತಿಗಳ ಪ್ರಭಾವದೆದುರು ಪ್ರಕರಣ ಭೇಧಿಸಿ, ಸತ್ಯ ಹೊರತರುವುದು ಅತ್ಯಂತ ಸವಾಲಿನ ಕೆಲಸವಾಗಿದೆ. ಆ 'ಪಾಳೇಗಾರಿ ಪ್ರಭಾವಿಗಳು' ಆ ಮಾಫಿಯಾ ಈಗಿನ ತನಿಖೆ ಮತ್ತು ಫಲಿತಾಂಶವನ್ನು ಹಳ್ಳಹಿಡಿಸಲು ಎಂತಹ ಮಟ್ಟಕ್ಕೂ ಹೋಗಬಹುದು ಎಂಬ ಆತಂಕ ಇದ್ದೇ ಇದೆ. ಇಂತಹ ಸನ್ನಿವೇಶದಲ್ಲಿ ತನಿಖಾ ತಂಡ ನಿಷ್ಪಕ್ಷಪಾತವಾಗಿ, ನಿಷ್ಠುರವಾಗಿ, ನಿರ್ಭಯವಾಗಿ ಕಾನೂನು ಮತ್ತು ಸಂವಿಧಾನದ ಹಾದಿಯಲ್ಲಿ ಕಾರ್ಯ ನಿರ್ವಹಿಸಬೇಕಿದೆ. ಈ ರೀತಿ ಅಧಿಕಾರಿಗಳು ಕರ್ತವ್ಯ ನಿರ್ವಹಿಸಲು ಸರ್ಕಾರ ಮನಃಪೂರ್ವಕ ಬೆಂಬಲವನ್ನು, ಮುಕ್ತ ಅವಕಾಶಗಳನ್ನು ನೀಡಬೇಕಾಗುತ್ತದೆ. ಜನರಿಂದ ಚುನಾಯಿತವಾದ, ಸಂವಿಧಾನ ಬದ್ಧ ಸರ್ಕಾರದಿಂದ ಜನತೆ ಇದನ್ನೇ ನಿರೀಕ್ಷಿಸುವುದು. ಇಂತಹ ನಿರ್ಣಾಯಕ ಸಂದರ್ಭದಲ್ಲಿ ಭಾರೀ ಬಲಾಢ್ಯ ಸ್ಥಾಪಿತ ಹಿತಾಸಕ್ತಿಗಳ ಕಡೆಗೆ ನಿಲ್ಲದೇ ಜನತೆಯ ಪರವಾಗಿ, ಸಂವಿಧಾನ, ಕಾನೂನು ಬದ್ಧತೆ, ನ್ಯಾಯದ ಪರವಾಗಿ ಧೃಡವಾಗಿ ನಿಲ್ಲ ಬೇಕಾಗುತ್ತದೆ. ಇದು ಸಿದ್ಧರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ದೊಡ್ಡ ಸತ್ವ ಪರೀಕ್ಷೆ ಯಾಗಿದೆ.

ಬೆಳ್ತಂಗಡಿ ತಾಲೂಕು, ಧರ್ಮಸ್ಥಳ ಗ್ರಾಮದ ಪರಿಸರದಲ್ಲಿನ ಪಾಳೇಗಾರಿ ದೌರ್ಜನ್ಯ, ಅತ್ಯಾಚಾರ, ಕೊಲೆಯಂತಹ ಪ್ರಕರಣಗಳ ಬಗ್ಗೆ ರಾಜ್ಯದ ಮತ್ತು ದೇಶದ ಜನತೆಯಲ್ಲಿ ಸರಿಯಾದ ಗ್ರಹಿಕೆ, ಜಾಗೃತಿಯೂ ಮುಖ್ಯವಾಗಿದೆ. ಇಲ್ಲಿ ನಡೆಯುವ ಅಮಾನುಷ ಕೃತ್ಯಗಳು ಹಲವು ದಶಕಗಳಿಂದ ನಡೆಯುತ್ತಲೇ ಬಂದಿವೆಯಾದರೂ, ಒಂದು ತಾರ್ಕಿಕ ಅಂತ್ಯವನ್ನು ಕಂಡಿಲ್ಲ. ಮೇಲಾಗಿ ಭಾವನಾತ್ಮಕವಾದ ವಿಷಯಗಳನ್ನು ಎತ್ತಿ ಹಾದಿ ತಪ್ಪಿಸುವ, ಇಲ್ಲವೇ ರಕ್ಷಣೆ ಪಡೆಯುವ ಪ್ರಯತ್ನಗಳಿಗೂ ಕಡಿಮೆ ಇಲ್ಲ. ಈ ಗ್ರಾಮವು ಒಂದು ಪ್ರಶಿದ್ಧ ಧಾರ್ಮಿಕ ಕ್ಷೇತ್ರವಾಗಿದ್ದು ಧಾರ್ಮಿಕ ನಂಬಿಕೆ, ಶ್ರದ್ದೆಗಳಿಗೆ ಚ್ಯುತಿ ಬರದಂತೆ ತನಿಖೆ ನಡೆಯಬೇಕಾಗುತ್ತದೆ. ಅದೇ ಹೊತ್ತಿನಲ್ಲಿ ಕೆಲವು ಸ್ಥಾಪಿತ ಹಿತಾಸಕ್ತಿಗಳು ಜನತೆಯ ಮುಗ್ಧಭಕ್ತಿ, ನಂಬಿಕೆಗಳನ್ನು ದುರ್ಬಳಕೆ ಮಾಡಿಕೊಳ್ಳದಂತೆಯೂ ಎಚ್ಚರ ವಹಿಸಬೇಕಾಗುತ್ತದೆ. ವ್ಯಕ್ತಿಗಳು ಯಾವುದೇ ಸ್ಥಾನದಲ್ಲಿರಲಿ, ಎಷ್ಟೇ ದೊಡ್ಡವರಿರಲಿ, ಕಾನೂನು, ಸಂವಿಧಾನದ ಮುಂದೆ ಸಮಾನರು, ಕಾನೂನಾತ್ಮಕ ಕ್ರಮಗಳಿಗೆ ಮೀರಿದವರಲ್ಲ ಎಂಬ ಅರಿವು ಎಲ್ಲರಲ್ಲಿ ಇರಬೇಕು, ಅಂತಹ ಸ್ಪಷ್ಟ ಸಂದೇಶ ರವಾನೆ ಆಗಬೇಕು.

ದುರುದೃಷ್ಟಕರವಾದ ಬೆಳವಣಿಗೆ ಎಂದರೆ ಅಧಿಕೃತ ವಿರೋಧ ಪಕ್ಷವಾದ ಬಿಜೆಪಿಯು ಈ ವಿಷಯದಲ್ಲಿ ನ್ಯಾಯ ನಿಷ್ಪಕ್ಷಪಾತತೆಯನ್ನು ಹೊಂದದೆ, ನ್ಯಾಯ ದೊರಕಿಸಲು ಹೊರಾಡುವ ಸಂಸ್ಥೆಗಳು, ವ್ಯಕ್ತಿಗಳು ಮತ್ತು ಸರ್ಕಾರದ ವಿರುದ್ಧ ಕತ್ತಿ ಎತ್ತಿದೆ. ಇಲ್ಲಿ ನಡೆದಿರುವ ಅಮಾನುಷ ಪ್ರಕರಣಗಳ ಸತ್ಯಾಸತ್ಯತೆಯನ್ನು ತಿಳಿಯಲು ಬೆಂಬಲವಾಗಿ ನಿಲ್ಲಬೇಕಾಗಿರುವ ರಾಜಕೀಯ ಪಕ್ಷವೊಂದು ಇಡೀ ತನಿಖೆಯ ಉದ್ದೇಶವನ್ನೇ ವಿಕೃತಗೊಳಿಸಿ, ಜನತೆಯನ್ನು ಎತ್ತಿ ಕಟ್ಟುವ ಪ್ರಯತ್ನಕ್ಕೆ ಇಳಿದಿದೆ. ಅಗಾಧವಾಗಿರುವ ಕ್ರಿಮಿನಲ್ ಕೃತ್ಯಗಳ ತನಿಖೆಯನ್ನು ಕಾನೂನಾತ್ಮಕ ಸೂಕ್ತ ಕ್ರಮ ಎಂದು ಗಣಿಸದೇ, ಅದಕ್ಕೆದುರಾಗಿ ಧರ್ಮರಕ್ಷಣೆಯ ಹೆಸರಿನ ಗುರಾಣಿ ಹಿಡಿದು, ಜನರ ಧಾರ್ಮಿಕ ಮನೋಭಾವವನ್ನು ದುರ್ಬಳಕೆ ಮಾಡಿಕೊಳ್ಳಲು ಹೊರಟಿದೆ. 'ತನಿಖೆ ನಡೆಯಬೇಕು, ಸತ್ಯ ಹೊರ ಬರಬೇಕು' ಎನ್ನುತ್ತಲೇ ಅದರಿಂದ ಧಾರ್ಮಿಕ ನಂಬಿಕೆಗಳಿಗೆ ಧಕ್ಕೆ ಆಗುವುದು ಎಂಬ ಮಾತನ್ನು ಆಡುತ್ತಿರುವುದು ಅದು ಏನನ್ನು ಮುಚ್ಚಿ ಹಾಕಲು ಬಯಸುತ್ತಿದೆ, ಯಾವ ಶಕ್ತಿಗಳನ್ನು ರಕ್ಷಿಸಲು ಯತ್ನಿಸುತ್ತಿದೆ ಎನ್ನುವುದು ಎದ್ದು ತೋರುತ್ತಿದೆ. ಬಿಜೆಪಿ ಪಕ್ಷವು ಅಮಾಯಕ ಜನರ ಹತ್ಯೆ, ಅತ್ಯಾಚಾರ, ದೌರ್ಜನ್ಯಗಳನ್ನು ತಡೆಯುವುದಕ್ಕೆ ಬದಲಾಗಿ ಅದನ್ನು ನಡೆಸುವ ಪಾಳೇಗಾರಿ ಮಾಫಿಯಾ ಶಕ್ತಿಗಳ ಪರವಾಗಿ ಇದೆಯೇ ಎಂಬ ಸಾರ್ವಜನಿಕ ಅನುಮಾನ ಹೆಚ್ಚುತ್ತಿದೆ. ಬಿಜೆಪಿ ಪಕ್ಷ ಮತ್ತು ಸಂಘ ಪರಿವಾರ ಎಷ್ಟೇ ದೊಡ್ಡ ಮಾತುಗಳಾಡಿದರೂ ಅಂತಿಮವಾಗಿ ಅದರ ನಿಜಹೂರಣ ಏನು ಎಂಬುದು ಮತ್ತೊಮ್ಮೆ ಬಯಲಾಗಿದೆ.

ಶತಮಾನಗಳಿಂದಲೂ ನಡೆದುಕೊಂಡೆ ಬಂದಿರುವ ದೌರ್ಜನ್ಯ ದಮನಕಾಂಡಗಳ ವಿರುದ್ಧ ನಿರಂತರವಾಗಿ ಹೋರಾಟ ನಡೆಸಿದ ಇತಿಹಾಸವು ಈ ಭಾಗದ ಜನತೆಗೆ ಇದೆ. ಪ್ರಮುಖವಾಗಿ, ಹಲವು ದಶಕಗಳಿಂದಲೂ ಇಲ್ಲಿನ ಪಾಳೆಗಾರಿ ಶಕ್ತಿ–ವ್ಯಕ್ತಿಗಳ ದೌರ್ಜನ್ಯ ಬಿಗಿಹಿಡಿತದ ವಿರುದ್ಧ ಕಮ್ಯೂನಿಸ್ಟ್ ಚಳುವಳಿ, ಪ್ರಜಾಸತ್ತಾತ್ಮಕ ಸಾಮೂಹಿಕ ಸಂಘಟನೆಗಳು ನಿರಂತರವಾಗಿ ತ್ಯಾಗ ಬಲಿದಾನದಿಂದ ಹೋರಾಟ ನಡೆಸುತ್ತಾ ಬಂದಿವೆ. ಈ ಕಾರಣಕ್ಕಾಗಿಯೇ ಎಂಬತ್ತರ ದಶಕದಲ್ಲಿ ನಡೆದ ಪದ್ಮಲತಾ ಕಗ್ಗೊಲೆ, ಅದರ ವಿರುದ್ಧ ನಡೆದ ಆಂದೋಲನ, ಸೌಜನ್ಯ ಪ್ರಕರಣದ ವಿರುದ್ಧದ ಹೋರಾಟಗಳು ಇತ್ತೀಚಿನವು. ಹಿಂದೆ ಭೂಮಿ ಹಕ್ಕಿಗಾಗಿ ಪ್ರಾಂತ ರೈತ ಸಂಘದ ವಿವಿಧ ಹೋರಾಟಗಳು, ಎಳಚಿತ್ತಾಯರ ಮೇಲೆ ನಡೆದ ದೌರ್ಜನ್ಯ, ಕೊಲೆ ಯತ್ನಗಳು, ಚುನಾವಣಾ ಸ್ಪರ್ದೆಯ ಹಕ್ಕಿಗಾಗಿ ನಡೆದ ಸಂಘರ್ಷ, ಸ್ಪರ್ದೆ, ಸ್ವಸಹಾಯ ಸಂಘಗಳ ಹೆಸರಿನಲ್ಲಿ ಶೋಷಣೆ, ಸುಲಿಗೆ ವಿರುದ್ಧ, ಇತ್ಯಾದಿ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಇಲ್ಲಿನ ಸಮಾಜವನ್ನು ಊಳಿಗಮಾನ್ಯ ವ್ಯವಸ್ಥೆಗೆ ಬದಲಿಯಾಗಿ ಪ್ರಜಾಪ್ರಭುತ್ವೀಯ ವ್ಯವಸ್ಥೆ ಸ್ಥಾಪನೆಗಾಗಿ ನಡೆದ ವರ್ಗ ಹೋರಾಟಗಳು ಅವು. ಅದು ಈಗಲೂ ಜಾರಿಯಲ್ಲಿದೆ.

ಎಸ್‌ಐಟಿ ರಚನೆ, ಅದು ಕಾರ್ಯರಂಗಕ್ಕೆ ಇಳಿದಿರುವುದು ಜನಸಾಮಾನ್ಯರಲ್ಲಿ, ನೊಂದವರಲ್ಲಿ, ಬಲಿಯಾದ ಕುಟುಂಬಗಳಲ್ಲಿ ಆಸಾದಾಯಕ ಭರವಸೆ ಮೂಡಿಸಿದೆ. ಇಲ್ಲಿ ಹೂತ ಶವಗಳನ್ನು ಹೊರತೆಗೆದು ಅದರ ಮೂಲ ಹುಡುಕುವುದು ಆದ್ಯ ಕರ್ತವ್ಯ ಆಗಿರುವಾಗಲೇ, ಕಾನೂನು, ಆಡಳಿತ ಸಂಸ್ಥೆಗಳನ್ನೇ ಬಳಸಿ ತನಿಖೆ ತಿರುಚಿದ, ಮುಚ್ಚಿ ಹಾಕಿದ ಪ್ರಕರಣಗಳ ಮರು ಪರಿಶೀಲನೆ, ತನಿಖೆಗೆ ಜೀವ ನೀಡುವುದೂ ಅಗತ್ಯ. ಪದ್ಮಲತಾ ಕೇಸ್, ಸೌಜನ್ಯ ಕೇಸ್‌ನಲ್ಲಿ ಸಿಬಿಐ ನ್ಯಾಯಾಲಯದ ತೀರ್ಪು, ವರದಿಯ ಮುಂದುವರಿಕೆ, ಅನನ್ಯ ಭಟ್ ಕೊಲೆ ಕೇಸ್, ವೇದವಲ್ಲಿ, ಮಾವುತನ ಹತ್ಯೆ, ಜೋಸೆಫ್ ಅನುಮಾನಾಸ್ಪದ ಸಾವು, ಇತ್ಯಾದಿ ನೂರಾರು ಸರಣಿ ಕೇಸ್‌ಗಳನ್ನೂ ತನಿಖೆಯ ವ್ಯಾಪ್ತಿಗೆ ತರುವುದು ಅಗತ್ಯವಿದೆ.

ಹೂತು ಹಾಕಿರುವ ಸತ್ಯವನ್ನು ಬಯಲಿಗೆಳೆಯಲು, ಕಾಡುತ್ತಿದ್ದ ಪಾಪ ಪ್ರಜ್ಞೆಯನ್ನು ಕಳೆದುಕೊಳ್ಳಲು, ಪ್ರಾಣದ ಹಂಗು ತೊರೆದು ಬಂದಿರುವ ವ್ಯಕ್ತಿಗೆ ಪೂರ್ಣ ಸ್ವಾತಂತ್ರ್ಯ ಮುಕ್ತ ಅವಕಾಶವನ್ನು ಕಲ್ಪಿಸಬೇಕು. ಮಾತ್ರವಲ್ಲ, ಈ ವ್ಯಕ್ತಿಯ ಮತ್ತು ಕುಟುಂಬದ ಸಂರಕ್ಷಣೆ ಸರ್ಕಾರದ ಹೊಣೆ. ಈ ವಿಷಯದಲ್ಲಿ ಯಾವ ಕಾರಣಕ್ಕೂ ಕಿಂಚಿತ್ತೂ ಎಚ್ಚರ ತಪ್ಪುವಂತಿಲ್ಲ ಎಂಬುದನ್ನು ಸರ್ಕಾರದ ಆಡಳಿತ ನೆನಪಿಡಬೇಕು.

ಈ ಎಲ್ಲವೂ ಯಶಸ್ವಿಯಾಗಬೇಕಾದಲ್ಲಿ ಸಾರ್ವಜನಿಕರ ಎಚ್ಚರ, ಜಾಗೃತಿ, ಒತ್ತಡ ಸದಾ ಅತ್ಯಗತ್ಯ. ಈ ಹೋರಾಟ ಹಿಮ್ಮೆಟ್ಟಬಾರದು, ಮುಂದೆ ಸಾಗಬೇಕು. ತಾರ್ಕಿಕ ಅಂತ್ಯ ಕಾಣಬೇಕು.

ಧರ್ಮಸ್ಥಳ: ಅಸಹಜ ಸಾವುಗಳ ಪ್ರಕರಣಗಳ ತನಿಖೆಗೆ ಎಸ್‌ಐಟಿ ರಚನೆ: ಸಿಪಿಐ(ಎಂ) ಸ್ವಾಗತ

ಪ್ರಾರಂಭಿಕ ಹಂತದಲ್ಲೇ ಪ್ರಶ್ನೆಗೆ ಒಳಪಟ್ಟು ಹಲವು ಅನುಮಾನಗಳನ್ನು ಹುಟ್ಟುಹಾಕಿದ್ದ ಧರ್ಮಸ್ಥಳದ ಸುತ್ತ ನಡೆದ ಹಲವು ಅಸಹಜ ಸಾವುಗಳ ಪ್ರಕರಣಗಳ ತನಿಖೆಗೆ, ಎಸ್‌ಐಟಿ ರಚಿಸಿರುವ ರಾಜ್ಯ ಸರಕಾರದ ಕ್ರಮವನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಸ್ವಾಗತಿಸಿದೆ. ಈ ಪ್ರಕರಣಗಳ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಯಬೇಕೆಂದು ಪಕ್ಷ ಒತ್ತಾಯಿಸಿದೆ.

80ರ ದಶಕದಲ್ಲಿ ನಡೆದ ಪದ್ಮಲತಾ ಪ್ರಕರಣದ ಸಂದರ್ಭದಿಂದಲೇ ಸಿಪಿಐ(ಎಂ) ಅಲ್ಲಿನ ವಿದ್ಯಮಾನಗಳಿಗೆ ವಿರೋಧ ವ್ಯಕ್ತಪಡಿಸಿದೆ. ಹಲವು ಹಂತಗಳ ಹೋರಾಟವನ್ನೂ ಮಾಡಿದೆ. ಆ ನಂತರವಷ್ಟೇ ಸಿಬಿಐ ತನಿಖೆಗೆ ಒಪ್ಪಿಸಲಾಗಿತ್ತು.

ಹಲವು ವರ್ಷಗಳ ಹಿಂದೆ ಪ್ರಕರಣಗಳು ನಡೆದಿವೆ, ಉದ್ದೇಶಪೂರ್ವಕವಾಗಿ ಸಾಕ್ಷಿನಾಶ ಮಾಡಲಾಗಿದೆ. ಇವುಗಳಲ್ಲಿ ಕುಖ್ಯಾತವಾಗಿದ್ದ ಪ್ರಕರಣಗಳಿರುವುದರಿಂದ ಕೂಲಂಕುಷವಾದ ತನಿಖೆ ನಡೆಯಬೇಕಿದೆ.

ಈ ಹಿನ್ನೆಲೆಯಲ್ಲಿ, ಎಸ್‌ಐಟಿ ಸ್ಥಳೀಯವಾಗಿ ಪ್ರಾರಂಭದ ದಿನಗಳಿಂದ ಪ್ರಕರಣಗಳ ಬೆನ್ನು ಹತ್ತಿ ಹೋರಾಟ, ಪ್ರತಿಭಟನೆಗಳನ್ನು ಮಾಡಿದ ಸಂಘ ಸಂಸ್ಥೆಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಿಷ್ಪಕ್ಷಪಾತ ತನಿಖೆ ನಡೆಸಬೇಕು.

ನಿರ್ದಿಷ್ಟ ಕಾಲಮಿತಿಯಲ್ಲಿ ತನಿಖೆ ನಡೆದು ಸತ್ಯವನ್ನು ಹೊರಗೆಳೆಯಬೇಕು. ಸಿಬಿಐ ನ್ಯಾಯಾಲಯದ ತೀರ್ಪು ಸೂಚಿಸಿರುವಂತೆ ಸೌಜನ್ಯ ಪ್ರಕರಣದಲ್ಲಿ ಪ್ರಾಥಮಿಕ ಹಂತದಲ್ಲಿ ತನಿಖೆಯ ದಾರಿ ತಪ್ಪಿಸಲು, ಸಾಕ್ಷಿ ನಾಶಮಾಡಿದ ತನಿಖಾಧಿಕಾರಿಗಳನ್ನು ತೀವ್ರ ತನಿಖೆಗೆ ಒಳಪಡಿಸಬೇಕು.


ನ್ಯಾಯದ ಪರ ನಿಂತು, ಸತ್ಯವನ್ನು ಹೊರಗೆಳೆದು, ನಿಜವಾದ ಆರೋಪಿಗಳನ್ನು ಮತ್ತು ಅವರ ರಕ್ಷಣೆಗೆ ನಿಂತವರನ್ನು ಶಿಕ್ಷೆಗೆ ಒಳಪಡಿಸಬೇಕು ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಒತ್ತಾಯಿಸಿದೆ.

ಬಿಹಾರದ ಎಸ್‌ಐಆರ್ ಪ್ರಕ್ರಿಯೆಯಲ್ಲಿ 'ಅಕ್ರಮ'ಗಳ ವಿಡಿಯೋ ಪ್ರಸಾರ: ಹಿರಿಯ ಪತ್ರಕರ್ತರ ಮೇಲೆ ಎಫ್‌ಐಆರ್‌ಗೆ ಡಿಜಿಟಲ್ ಪತ್ರಿಕೆಗಳು, ಪತ್ರಕರ್ತರ ಸಂಘಟನೆಗಳ ಖಂಡನೆ

ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಯಲ್ಲಿ ನಡೆಯುತ್ತಿದೆ ಎನ್ನಲಾದ ಅಕ್ರಮಗಳನ್ನು ಬಹಿರಂಗಪಡಿಸಿದ ವಿಡಿಯೋಗಾಗಿ ಪ್ರಸಿದ್ಧ ಸ್ವತಂತ್ರ ಪತ್ರಕರ್ತ ಅಜಿತ್ ಅಂಜುಮ್ ಅವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಇದನ್ನು ಕೂಡಲೇ ಹಿಂಪಡೆಯಬೇಕು, ಏಕೆಂದರೆ ಇದು ಸ್ವತಂತ್ರ ಪತ್ರಕಾರಿತೆಯ ಮೇಲಿನ ಮತ್ತು ಸತ್ಯವನ್ನು ತಿಳಿಯುವ ಸಾರ್ವಜನಿಕರ ಹಕ್ಕಿನ ಮೇಲೆ ನೇರ ಪ್ರಹಾರ ಎಂದು ಡಿಜಿಟಲ್ ಸುದ್ದಿ ಮಾಧ್ಯಮಗಳ ಸಮೂಹ ಸಂಘಟನೆ ಡಿಜಿಪಬ್ ಮತ್ತು ಮತ್ತು ಪ್ರೆಸ್ ಕ್ಲಬ್ ಆಫ್ ಇಂಡಿಯಾ (ಪಿಸಿಐ) ಮತ್ತು ಭಾರತೀಯ ಮಹಿಳಾ ಪ್ರೆಸ್ ಪಡೆ (ಐಡಬ್ಲ್ಯೂಪಿಸಿ) ಮುಂತಾದ ಪತ್ರಕರ್ತರ ಸಂಘಟನೆಗಳು ಒತ್ತಾಯಿಸಿವೆ.

ಲಕ್ಷಾಂತರ ವೀಕ್ಷಕರು ವೀಕ್ಷಿಸುವ ಯೂಟ್ಯೂಬ್ ಚಾನೆಲ್ ಅನ್ನು ನಡೆಸುತ್ತಿರುವ ಬಿಹಾರದ ಪ್ರಶಸ್ತಿ ವಿಜೇತ ಪತ್ರಕರ್ತ ಅಜಿತ್ ಅಂಜುಮ್ ಬುಡಮಟ್ಟದಿಂದ ವರದಿಗಳನ್ನು ಮಾಡುತ್ತಿರುವವರು. ಬೇಗುಸರಾಯ್‌ನ ಬಲಿಯಾ ಪೊಲೀಸ್ ಠಾಣೆಯಲ್ಲಿ ಜುಲೈ 13 ರಂದು ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಅವರು ತಪ್ಪು ಮಾಹಿತಿಯನ್ನು ಹರಡುತ್ತಿದ್ದಾರೆ ಎಂದು ಆರೋಪಿಸಲಾಗಿದೆ.

ಈ ಎಫ್‌ಐಆರ್ ಕೇವಲ ಒಬ್ಬ ವ್ಯಕ್ತಿಯ ಮೇಲಿನ ದಾಳಿಯಲ್ಲ ಎಂದು ಡಿಜಿಪಬ್ ಹೇಳಿಕೆಯಲ್ಲಿ ತಿಳಿಸಿದೆ, ಬೇಗುಸರಾಯ್‌ನಲ್ಲಿ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಯ ಕುರಿತು ವರದಿ ಮಾಡುವಾಗ, ಅಜಿತ್ ಅಂಜುಮ್ ಸ್ಥಳೀಯ ಜನರು ತಮ್ಮೊಂದಿಗೆ ಹಂಚಿಕೊಂಡಿದ್ದನ್ನು ನಿಖರವಾಗಿ ಎತ್ತಿ ತೋರಿಸಿದರು. ಅವರ ಪ್ರಕಾರ, ಅವರು ಎಸ್‌ಐಆರ್‌ಗೆ ಸಂಬಂಧಿಸಿದ ಸಂಗತಿಗಳನ್ನು ಹೊರತರಲು ಪ್ರಯತ್ನಿಸುತ್ತಿದ್ದರು. ಆದಾಗ್ಯೂ, ಈ ಪ್ರಾಮಾಣಿಕ ಪ್ರಯತ್ನವು ಸರ್ಕಾರ ಮತ್ತು ಆಡಳಿತವನ್ನು ಅಸಮಾಧಾನಗೊಳಿಸಿದಂತೆ ಕಾಣುತ್ತದೆ ಎಂದು ಡಿಜಿಪಬ್ ಹೇಳಿದೆ.



ಅಜಿತ್ ಅಂಜುಮ್

ಎಫ್‌ಐಆರ್‌ಗೆ ಮೊದಲು ಹೊರಡಿಸಿದ್ದ ಬೇಗುಸರಾಯ್ ಜಿಲ್ಲಾಡಳಿತದ ಪತ್ರಿಕಾ ಪ್ರಕಟಣೆಯಲ್ಲಿ ಅಂಜುಮ್‌ರದ್ದು "ದಾರಿತಪ್ಪಿಸುವ" ವರದಿ ಎಂದಿತ್ತು ಎಂಬ ಸಂಗತಿಯತ್ತ ಡಿಜಿಪಬ್ ಗಮನ ಸೆಳೆದಿದೆ.

"ಈ ಅಸ್ಪಷ್ಟ ಆರೋಪಗಳು ವಿಶ್ವಾಸಾರ್ಹವೂ ಅಲ್ಲ ಅಥವಾ ಎಫ್‌ಐಆರ್‌ಗೆ ಸಾಕಷ್ಟು ಕಾರಣವೂ ಅಲ್ಲ. ಅಧಿಕಾರಿಗಳು ಒಂದೋ ಪತ್ರಕರ್ತರ ಪ್ರಶ್ನೆಗಳಿಗೆ ನಿಖರ ಮತ್ತು ವಾಸ್ತವಿಕ ಮಾಹಿತಿಯನ್ನು ಒದಗಿಸಲು ಕಲಿಯಬೇಕು, ಇಲ್ಲವಾದರೆ ಪತ್ರಕರ್ತರು ಸ್ವಂತವಾಗಿ ಪಾರದರ್ಶಕತೆಯನ್ನು ಒದಗಿಸಬೇಕಾದ, ಆದರೆ ಸಾಮಾನ್ಯವಾಗಿ ಕೊಡದ ಪ್ರಜಾಪ್ರಭುತ್ವ ಯಂತ್ರದಿಂದ ಯಾವುದೇ ಸಹಕಾರವಿಲ್ಲದೆ ಮಾಹಿತಿಯನ್ನು ಕಂಡುಕೊಂಡಾಗ ಪಕ್ಕಕ್ಕೆ ಸರಿಯಬೇಕು" ಎಂದು ಅಭಿಪ್ರಾಯಪಟ್ಟಿರುವ ಹೇಳಿಕೆಯು, ಈ ಕ್ರಮವು ಪತ್ರಿಕಾರಂಗದ ಬಾಯಿ ಮುಚ್ಚಿಸುವ ಮತ್ತು ಅಪಥ್ಯವಾದ ಸತ್ಯಗಳನ್ನು ನಿಗ್ರಹಿಸುವ ವ್ಯವಸ್ಥಿತ ಮತ್ತು ಉದ್ದೇಶಪೂರ್ವಕ ಪ್ರಯತ್ನದಂತೆ ಕಾಣುತ್ತದೆ ಎಂದು ಹೇಳಿದೆ.

"ನಮ್ಮ ಅಭಿಪ್ರಾಯದಲ್ಲಿ, ಈ ಎಫ್‌ಐಆರ್ ಸಾಂಸ್ಥಿಕ ವೈಫಲ್ಯಗಳನ್ನು ಮುಚ್ಚಿಹಾಕುವ ಪ್ರಯತ್ನವಲ್ಲದೆ ಬೇರೇನೂ ಅಲ್ಲ. ನಾವಿದನ್ನು ಬಲವಾಗಿ ವಿರೋಧಿಸುತ್ತೇವೆ. ನಾವು ಅಜಿತ್ ಅಂಜುಮ್ ಮತ್ತು ಸತ್ಯವನ್ನು ಮಾತನಾಡುವ ಧೈರ್ಯ ಹೊಂದಿರುವ ಪ್ರತಿಯೊಬ್ಬ ಪತ್ರಕರ್ತರೊಂದಿಗೆ ನಿಲ್ಲುತ್ತೇವೆ" ಎಂದು ಡಿಜಿಪಬ್ ಹೇಳಿದೆ.

"ಎಫ್‌ಐಆರ್ ಅಂಜುಮ್‌ರನ್ನು ಮಾತ್ರವಲ್ಲ, ಬುಡಮಟ್ಟದಿಂದ ವರದಿ ಮಾಡಲು ಧೈರ್ಯ ಮಾಡುವ ಎಲ್ಲಾ ಸ್ವತಂತ್ರ ಪತ್ರಕರ್ತರನ್ನು ಬೆದರಿಸುವ" ಪ್ರಯತ್ನವಾಗಿದೆ. ಪಿಸಿಐ ಮತ್ತು ಐಡಬ್ಲ್ಯೂಪಿಸಿ, ಅಂಜುಮ್ ಜವಾಬ್ದಾರಿಯುತ ಮತ್ತು ಪ್ರಭಾವಶಾಲಿ ವರದಿಗಳನ್ನು ಕೊಡುವ ದೀರ್ಘಕಾಲದ ದಾಖಲೆಯನ್ನು ಹೊಂದಿದ್ದಾರೆ ಎಂದು ಎತ್ತಿ ತೋರಿಸುತ್ತಾ, ಅವರು ತಮ್ಮ ವೀಡಿಯೋದಲ್ಲಿ ಬೆಳಕಿಗೆ ತಂದ ಎಸ್‌ಐಆರ್‌ನಲ್ಲಿನ ಕೆಲವು ಅಕ್ರಮಗಳ ಬಗ್ಗೆ ಸ್ಪಷ್ಟೀಕರಣವನ್ನು ನೀಡುವ ಬದಲು, ಆಡಳಿತವು ಕಾನೂನು ಕ್ರಮ ತೆಗೆದುಕೊಳ್ಳಲು ನಿರ್ಧರಿಸಿದೆ, ಇದರ ಪರಿಣಾಮವಾಗಿ ಒಬ್ಬ ಹಿರಿಯ ಪತ್ರಕರ್ತರ ವಿರುದ್ಧ ಎಫ್‌ಐಆರ್ ದಾಖಲಿಸಿದೆ ಎನ್ನುತ್ತ, 'ಅಧಿಕಾರಿಗಳು ಕ್ರಮಬದ್ಧವಾಗಿ ನಡೆದುಕೊಳ್ಳಬೇಕು ಮತ್ತು ಪತ್ರಕರ್ತರಾಗಿ ಮತ್ತು ನಾಗರಿಕರಾಗಿ ಅಂಜುಮ್ ಅವರ ಹಕ್ಕುಗಳನ್ನು ಸಂಪೂರ್ಣವಾಗಿ ರಕ್ಷಿಸಬೇಕು' ಎಂದು ಕರೆ ನೀಡಿವೆ.


ಜುಲೈ 12ರಂದು ಅಪ್‌ಲೋಡ್ ಮಾಡಲಾದ ಅಂಜುಮ್ ಅವರ ವೀಡಿಯೊ, ಭಾರತ ಚುನಾವಣಾ ಆಯೋಗವು ಬಿಹಾರದಲ್ಲಿ ಪ್ರಾರಂಭಿಸಿದ ಎಸ್‌ಐಆರ್ ಪ್ರಕ್ರಿಯೆಯ ಸಮಯದಲ್ಲಿ, ಬಲಿಯಾದಲ್ಲಿನ ಒಂದು ಕೇಂದ್ರದಲ್ಲಿ ಹೇಗೆ ಹಲವಾರು ಮತದಾರರ ನಮೂನೆಗಳು ಅಪೂರ್ಣವಾಗಿದ್ದವು ಮತ್ತು ಆಯೋಗ ಕೇಳಿರುವ ಅಗತ್ಯ ದಾಖಲೆಗಳು ಅಥವಾ ಫೋಟೋಗಳಿಲ್ಲದೆ ಅಪ್‌ಲೋಡ್ ಮಾಡಲಾಗುತ್ತಿತ್ತು ಎಂಬುದನ್ನು ತೋರಿಸಿದೆ. ಅವರ ವಿರುದ್ಧ ಕ್ರಿಮಿನಲ್ ಅತಿಕ್ರಮಣ, ಕಾನೂನುಬದ್ಧ ಆದೇಶವನ್ನು ಉಲ್ಲಂಘಿಸುವುದು, ಸಾರ್ವಜನಿಕ ಸೇವಕರು ತಮ್ಮ ಕರ್ತವ್ಯವನ್ನು ಮಾಡದಂತೆ ತಡೆಯುವುದು ಮತ್ತು ಧಾರ್ಮಿಕ ಭಾವನೆಗಳನ್ನು ನೋಯಿಸಲು ಪ್ರಯತ್ನಿಸುವುದು ಮುಂತಾದ ಸೆಕ್ಷನ್‌ಗಳ ಅಡಿಯಲ್ಲಿ ಮತ್ತು ಜನತಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಆದರೆ, ಅಂಜುಮ್ ಅವರು ತಮ್ಮ ವರದಿಗಳಿಗೆ ತಾವು ಬದ್ಧರಾಗಿರುವುದಾಗಿ ಹೇಳಿದ್ದಾರೆ. ಈ ವರದಿಗಳು ಚುನಾವಣೆಯ ಪ್ರಜಾಪ್ರಭುತ್ವ ಪ್ರಕ್ರಿಯೆಗೆ ಹಾನಿ ಮಾಡುವ ಅಕ್ರಮಗಳನ್ನು ಮಾತ್ರ ಎತ್ತಿ ತೋರಿಸುತ್ತಿದ್ದವು ಎಂದಿರುವ ಅವರು "ನಾನು, ಜಾಗೃತ ಪತ್ರಕರ್ತನಾಗಿ, ಭಾರತ ಚುನಾವಣಾ ಆಯೋಗದ ನಿಯಮಗಳನ್ನು ಹೇಗೆ ಪಾಲಿಸಲಾಗುತ್ತಿಲ್ಲ ಎಂಬುದನ್ನು ತೋರಿಸಿದ್ದೇನೆ. ನಾನು ಯಾರ ಗುರುತನ್ನೂ ಬಹಿರಂಗಪಡಿಸಿಲ್ಲ, ಅಥವಾ ಗಣನೆ ಫಾರ್ಮ್‌ಗಳ ಯಾವುದೇ ಹತ್ತಿರದ ಚಿತ್ರಗಳನ್ನು ತೋರಿಸಿಲ್ಲ. "ಅವರು ತಮ್ಮ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಬದಲು ನನ್ನ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಆದರೆ ನಾನು ಹೆದರುವವನಲ್ಲ" ಎನ್ನುತ್ತ ತಾನು ಸೂಕ್ತ ಕಾನೂನು ಪ್ರಕ್ರಿಯೆಯನ್ನು ಅನುಸರಿಸುತ್ತೇನೆ ಮತ್ತು ಅಗತ್ಯವಿದ್ದರೆ ಕಾನೂನಿನ ಪರಿಹಾರಗಳನ್ನು ಪಡೆಯಲು ಪ್ರಯತ್ನಿಸುತ್ತೇನೆ ಎಂದಿದ್ದಾರೆ.

ಕಾಫಿಯ ಕಿಮ್ಮತ್ತು ಕಾಫಿ ಕಾರ್ಮಿಕರಿಗೂ ಸಿಗಲಿ!

ನಮ್ಮ ದೇಶದಲ್ಲಿ ಇತಿಹಾಸ ರಾಜ ಮಹಾರಾಜರುಗಳ ಮತ್ತು ಆಧುನಿಕ ಕಾಲದಲ್ಲಿ ಅಧಿಕಾರ ವಹಿಸಿದ ನಾಯಕರ ಸುತ್ತವೇ ಗಿರಕಿ ಹೊಡೆಯುತ್ತದೆ. ಸಾಮಾನ್ಯ ಜನತೆಯ ಬದುಕು, ಅವರು ಅದಕ್ಕಾಗಿ ನಡೆಸುವ ಹೋರಾಟ ಇತಿಹಾಸದ ಭಾಗವಾಗುವುದೇ ಇಲ್ಲ. ಅದರಲ್ಲೂ ಕಾರ್ಮಿಕರ ಬದುಕು, ಹೋರಾಟಗಳಿಗೂ ಇತಿಹಾಸಕ್ಕೂ ಗಾವುದದೂರ. ಆದರೆ ಇವು ಇಲ್ಲದೆ ನಮ್ಮ ಇತಿಹಾಸ ಪೂರ್ಣವಾಗುವುದಿಲ್ಲ.

ಕಾಫಿ ನಮ್ಮೆಲ್ಲರ ಬದುಕಿನ ಅನಿವಾರ್ಯ ಭಾಗ. ಕರ್ನಾಟಕದಲ್ಲಿ ದೇಶದ ಕಾಫಿ ಉತ್ಪಾದನೆಯ ಶೇ.70ರಷ್ಟು ಬೆಳೆಯುತ್ತದೆ. ಆದರೆ ಅದನ್ನು ಬೆಳೆದು ತಯಾರಿಕೆಯ ಪ್ರಕ್ರಿಯೆಯಲ್ಲಿ ತೊಡಗುವ ಕರ್ನಾಟಕದ ಕಾಫಿ ಪ್ಲಾಂಟೇಷನ್ ಮತ್ತಿತರ ಕಾರ್ಮಿಕರ ಬದುಕು, ಬವಣೆಗಳ ಬಗ್ಗೆ ನಮಗೆಷ್ಟು ತಿಳಿದಿದೆ? ಅವರ ಹೋರಾಟಗಳು ನಮ್ಮ ಇತಿಹಾಸದಲ್ಲಿ



ದಾಖಲಾಗಿವೆಯೇ? ಈ ಪುಸ್ತಕ ಅಂತಹ ಒಂದು ವಿಶಿಷ್ಟ ಪ್ರಯತ್ನ. ಈ ಪುಸ್ತಕದ ಒಂದು ಬರಹದ ಲೇಖನದ ತಲೆಬರಹ ಹೇಳುವಂತೆ ಕಾಫಿಗಿರುವ ಕಿಮ್ಮತ್ತು ಅದನ್ನು ತಮ್ಮ ಕಠಿಣ ಶ್ರಮದಿಂದ ಬೆಳೆಯುವ ಕಾಫಿ ಪ್ಲಾಂಟೇಷನ್ ಕಾರ್ಮಿಕರಿಗಿಲ್ಲ. ಕಾಫಿಗಿರುವ ಕಿಮ್ಮತ್ತು ಕಾಫಿ ಪ್ಲಾಂಟೇಶನ್ ಕಾರ್ಮಿಕರಿಗೂ ಸಿಗಬೇಕು ಎಂದು ನಡೆದ ಹಲವು ದಶಕಗಳ ಹೊರಾಟದ ಇತಿಹಾಸ ಇಲ್ಲಿದೆ. ಈ ಹೋರಾಟವನ್ನು ಸಂಘಟಿಸಿದ ಕರ್ನಾಟಕ ಪ್ರೊವೆನ್ಸಿಯಲ್ ಪ್ಲಾಂಟೇಶನ್ ವರ್ಕರ್ಸ್ ಯೂನಿಯನ್ ಇತಿಹಾಸ ಇಲ್ಲಿದೆ.

ಈ ಯೂನಿಯನ್ ಮತ್ತು ಪ್ಲಾಂಟೇಶನ್ ಕಾರ್ಮಿಕರ ಹೋರಾಟಕ್ಕೆ ತಮ್ಮ ಬದುಕನ್ನು ಮುಡಿಪಾಗಿಟ್ಟ ವಿ.ಸುಕುಮಾರ್ ಅವರ ಬದುಕಿನ ಕತೆಯೂ ಇಲ್ಲಿದೆ. ಈಗ 80 ವರ್ಷದ ಇಳಿವಯಸ್ಸಿನಲ್ಲೂ ಸಕ್ರಿಯವಾಗಿರುವ ಅವರು ತಮ್ಮ ಬದುಕಿನ ಆರು ದಶಕಗಳನ್ನು ಕಾಫಿಗಿರುವ ಕಿಮ್ಮತನ್ನು ಕಾಫಿ ಪ್ಲಾಂಟೇಶನ್ ಕಾರ್ಮಿಕರೂ ಪಡೆಯುವ ಹೋರಾಟಕ್ಕೆ ಮುಡಿಪಾಗಿಟ್ಟವರು. ಇಲ್ಲಿ ಅವರ ಸ್ಫೂರ್ತಿದಾಯಕ ಬದುಕಿನ ಕತೆಯೂ ಇದೆ. ಪ್ಲಾಂಟೇಶನ್ ಕಾರ್ಮಿಕರ ಯೂನಿಯನ್ ಭಾರತದ ಅತಿದೊಡ್ಡ ಕೇಂದ್ರೀಯ ಕಾರ್ಮಿಕ ಸಂಘಟನೆ ಸಿಐಟಿಯು ಜತೆ ಸಂಯೋಜಿತವಾಗಿದ್ದು, ವಿ.ಸುಕುಮಾರ್ ಅದರ ನಾಯಕರೂ ಆಗಿದ್ದರಿಂದ ಇಲ್ಲಿ ಮಲೆನಾಡು ಕರ್ನಾಟಕದ ಕಾರ್ಮಿಕ ಚರಿತ್ರೆಯೂ ಇದೆ. ಅವರು ಸಿಪಿಐ(ಎಂ) ಮಲೆನಾಡು ಸಮಿತಿಯ ಕಾರ್ಯದರ್ಶಿಯೂ ಪ್ರಮುಖ ನಾಯಕರೂ ಆಗಿದ್ದರಿಂದ, ಈ ಪ್ರದೇಶದ ಕಮ್ಯುನಿಸ್ಟ್ ಚಳುವಳಿಯ ಚರಿತ್ರೆಯೊಂದಿಗೆ ಅವರ ಬದುಕು ಕೆಲಸ ಹಾಸು ಹೊಕ್ಕಾಗಿದೆ. ಹೀಗೆ ವಿ.ಸುಕುಮಾರ್ ಅವರ ಪರಿಚಯ, ಪ್ಲಾಂಟೇಶನ್ ಕಾರ್ಮಿಕರ ಯೂನಿಯನ್, ಮಲೆನಾಡಿನ ಕಾರ್ಮಿಕ ಮತ್ತು ಕಮ್ಯುನಿಸ್ಟ್ ಚಳುವಳಿಯ ಇತಿಹಾಸಗಳನ್ನು ಒಳಗೊಂಡಿರುವ ಈ ಪುಸ್ತಕ ಕರ್ನಾಟಕದ ಇತಿಹಾಸಕ್ಕೊಂದು ವಿಶಿಷ್ಟ ಸೇರ್ಪಡೆ.


ಕ್ರಿಯಾ ಮಾಧ್ಯಮದ ಪರವಾಗಿ

ವಲಸೆ ಮತ್ತು ಪರಕೀಯತೆ ರಾಜಕಾರಣ

ಇತ್ತೀಚೆಗೆ ಸ್ವಲ್ಪ ಸಮಯದಿಂದ ದೇಶದಾದ್ಯಂತ ಆಘಾತದ ಅಲೆಗಳು ಅಪ್ಪಳಿಸುತ್ತಿವೆ. ದೊಡ್ಡ ಪ್ರಮಾಣದ ಬಂಗಾಳಿ ವಲಸಿಗ ಕಾರ್ಮಿಕರನ್ನು ಬಾಂಗ್ಲಾದೇಶಿಗರೆಂದು ಕರೆಯುತ್ತಿರುವುದು ಕಳವಳದ ವಿಚಾರವಾಗಿದೆ. ಬಂಗಾಳಿ ಮಾತನಾಡುವವರು ಮತ್ತು ಮುಸ್ಲಿಮರನ್ನು ಒಟ್ಟಾಗಿ 'ಮಾರಕ' ಮಾರ್ಕರ್ ಎಂದು ಹೇಳಿ, ಅವರನ್ನು ತನ್ನಿಂತಾನೇ 'ಕಾನೂನುಬಾಹಿರ ಬಾಂಗ್ಲಾದೇಶಿ ನುಸುಳುಕೋರ' ಎಂದು ಬ್ರಾಂಡ್ ಮಾಡಲಾಗುತ್ತಿದೆ. ಇದೊಂದು ಸುಳ್ಳು ನಿರೂಪಣೆಯಾಗಿದೆ. ಪೌರತ್ವ ತಿದ್ದುಪಡಿ ಕಾನೂನು (ಸಿಎಎ) ರೂಪಿಸಲು ಕೂಡ ಇದೇ ರೀತಿಯ ತಪ್ಪು ಪರಿಕಲ್ಪನೆಯೇ ಕಾರಣವಾಗಿದೆ. ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಶ್ವ ಶರ್ಮಾ ಈ ಅಪಪ್ರಚಾರದ ಮುಂಚೂಣಿಯಲ್ಲಿದ್ದಾರೆ. ಸಿಎಎಗೆ ಅಸ್ಸಾಂ ಜನರು ತೋರಿದ ಪ್ರತಿರೋಧದ ಬಗ್ಗೆ ಶರ್ಮಾಗೆ ಖಂಡಿತವಾಗಿಯೂ ಅರಿವಿರಬೇಕು. ತನ್ನ ಅಪಪ್ರಚಾರದ ಪ್ರಸ್ತುತ ನಿಲುವನ್ನು ಪ್ರತಿಪಾದಿಸುವಾಗ ಈಗ ಬಹುಶಃ ಆ ಪ್ರತಿರೋಧವನ್ನೇ ಅವರು ಪರೋಕ್ಷವಾಗಿ ಪ್ರಸ್ತಾಪಿಸುತ್ತಿರಬೇಕು. ಬಂಗಾಳಿ ಮಾತನಾಡುವವರು ಬಾಂಗ್ಲಾದೇಶೀಯರು ಎಂದು ಗುರುತಿಸಲು ನೆರವಾಗುತ್ತದೆ ಎಂದು ಹೇಳುವ ಮಟ್ಟಕ್ಕೆ ಅವರು ಬಂದಿದ್ದಾರೆ. ಎರಡರ ಮಧ್ಯೆಯೂ ಅವಿನಾಭಾವ ಸಂಬಂಧವಿದೆ ಎಂದು ಹೇಳುವುದು ಅವರ ಈ ಮಾತಿನ ಅರ್ಥವಾಗಿದೆ. ಈ ಅಸಾಂವಿಧಾನಿಕ ಟಿಪ್ಪಣಿಗೆ ವ್ಯಕ್ತವಾದ ಆಕ್ರೋಶಕ್ಕೆ ಪ್ರತಿಕ್ರಿಯೆಯಾಗಿ ಶರ್ಮಾ ಹೀಗೆಂದು ಒಪ್ಪಿಕೊಂಡಿದ್ದಾರೆ: 'ಕಾನೂನುಬದ್ಧವಾಗಿ ಅವರೆಲ್ಲರೂ ವಿದೇಶಿಯರಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಅಸ್ಸಾಮಿನ ಜನರಾದ ನಾವು, ವಿಶೇಷವಾಗಿ ಹಿಂದೂಗಳು ನಮ್ಮದೇ ನೆಲದಲ್ಲಿ ಹೋಪ್‌ಲೆಸ್ ಅಲ್ಪಸಂಖ್ಯಾತರಾಗುತ್ತಿದ್ದೇವೆ. ಕೇವಲ 60 ವರ್ಷ ಕಾಲಾವಧಿಯಲ್ಲಿ ಇದು ನಡೆದಿದೆ. ನಾವು ನಮ್ಮ ಸಂಸ್ಕೃತಿ, ನಮ್ಮ ಭೂಮಿ, ನಮ್ಮ ದೇವಾಲಯಗಳನ್ನು ಕಳೆದುಕೊಂಡಿದ್ದೇವೆ. ಕಾನೂನು ನಮಗೆ ಯಾವುದೇ ಪರಿಹಾರ ನೀಡುತ್ತಿಲ್ಲ. ಹಾಗಾಗಿ ನಾವು ಹತಾಶರಾಗಿದ್ದೇವೆ–ಪ್ರತೀಕಾರಕ್ಕಾಗಿ ಅಲ್ಲ, ಬದಲಿಗೆ ಪುನರುತ್ಥಾನಕ್ಕಾಗಿ'.

ಆದರೆ, ಈ ಹತಾಶೆಯ ದನಿಯಲ್ಲಿ ಪಶ್ಚಾತ್ತಾಪದ ಲವಲೇಶದ ಸುಳಿವೂ ಇಲ್ಲ. ಬಂಗಾಳಿ ಮಾತನಾಡುವ ವಲಸೆ ಕಾರ್ಮಿಕರು ಬಾಂಗ್ಲಾದೇಶಿಗಳೆಂಬ ಊಹೆಯ ಆಧಾರದಲ್ಲಿ ಅವರ ವಿರುದ್ಧ ನಡೆಸುವ ಆಕ್ರಮಣಕಾರಿ ಪ್ರಚಾರವು ತೀರಾ ಟೊಳ್ಳಾಗಿದೆ. ಈ ನತದೃಷ್ಟ ಜನರನ್ನು ಗಡಿಯಾಚೆ ವಾಪಸ್ ಕಳಿಸುವ ಎಲ್ಲ ಪ್ರಯತ್ನಗಳ ಸಂದರ್ಭಗಳಲ್ಲಿ ಯಾವುದೇ ದಾಖಲೆಗಳನ್ನು ಒದಗಿಸಲು ಅಧಿಕಾರಿಗಳು ವಿಫಲರಾಗಿದ್ದರಿಂದ ಈಗ ಈ ರೀತಿ ಮಾಡಲಾಗುತ್ತಿದೆ ಎನ್ನುವುದು ವಾಸ್ತವಾಂಶವಾಗಿದೆ. ಅವರನ್ನು, ಆಗಾಗ ಬುಲ್ಡೋಜರ್‌ಗಳನ್ನು ಕೂಡ ಬಳಸಿ ಅವರ ಜಾಗದಿಂದ ತೆರವು ಗೊಳಿಸುವುದು ಇದರ ಹಿಂದಿನ ನಿಜವಾದ ಉದ್ದೇಶವೆನ್ನುವುದು ಸ್ಪಷ್ಟವಾಗಿದೆ. ತೆರವು ಮಾಡಿದ ಆ ಜಾಗಗಳನ್ನು ಕಾರ್ಪೋರೇಟ್ ಭೂಗಳ್ಳರಿಗೆ ಹಸ್ತಾಂತರಿಸಲಾಗುತ್ತದೆ ಹಾಗೂ ಇನ್ನಷ್ಟು ಭೂಸಂಬಂಧಿತ ಹಗರಣಗಳಿಗೆ ಸಹಕರಿಸಲಾಗುತ್ತಿದೆ.

ಅಷ್ಟು ಮಾತ್ರವಲ್ಲದೆ, ವಿಶೇಷವಾಗಿ ವಿಧಾನಸಭೆಯ ಚುನಾವಣೆಯ ಹಿನ್ನೆಲೆಯಲ್ಲಿ; ರಾಜ್ಯದ ಬಹು–ಜನಾಂಗೀಯ, ವೈವಿಧ್ಯಮಯ ಜನರ ನಡುವೆ ಧ್ರುವೀಕರಣವನ್ನು ಆಳಗೊಳಿಸಲು ಈ ಅಪಪ್ರಚಾರ ನೆರವಾಗುತ್ತದೆ. ಅಂತಿಮವಾಗಿ, ರಾಜ್ಯ ಸರಕಾರದ ಭಾರಿ ವೈಫಲ್ಯಗಳಿಂದ ಸಾರ್ವಜನಿಕರ ಗಮನವನ್ನು ಬೇರೆಡೆ ಸೆಳೆಯಲು ಈ ವಿವಾದಗಳು ನೆರವಾಗುತ್ತವೆ.



1971ರ ನಂತರ ಬಾಂಗ್ಲಾದೇಶದಿಂದ ವಲಸೆ ಮುಂದುವರಿದಿತ್ತು ಎನ್ನುವುದನ್ನು ನಿರಾಕರಿಸಲಾಗದು. ಆದರೆ, ರಾಜ್ಯವು ಅಕ್ರಮ ವಲಸೆಗಾರರಿಂದ 'ತುಂಬಿ ತುಳುಕುತ್ತಿದೆ' ಎಂಬ ಅಪಾಯಕಾರಿಯಾದ ಹೇಳಿಕೆಗಳು ಕಳೆದ ಕೆಲವು ದಶಕಗಳಲ್ಲಿ ಅಸ್ಸಾಂ ಜನಸಂಖ್ಯೆ ಬೆಳವಣಿಗೆ ವಿಚಾರದಲ್ಲಿ ಅಖಿಲ ಭಾರತ ಜನಸಂಖ್ಯೆ ಬೆಳವಣಿಗೆ ದರಕ್ಕೆ ಹೋಲಿಸಿದರೆ ಇಳಿಕೆ ಪ್ರವೃತ್ತಿಯನ್ನು ದಾಖಲಿಸಿದೆ ಎಂಬ ವಾಸ್ತವತೆಗೆ ವ್ಯತಿರಿಕ್ತವಾಗಿದೆ. 'ಕಾನೂನುಬಾಹಿರ' ವಲಸಿಗರು ಈ ವಲಯದಲ್ಲಿ ತುಂಬಿದ್ದಾರೆ ಎಂಬ ಅಬ್ಬರದ ಮಾತು ಬಹುತೇಕವಾಗಿ ಈ ವಲಯದಲ್ಲಿ ಮುಸ್ಲಿಮರ ಸಂಖ್ಯೆ ಹೆಚ್ಚುತ್ತಿರುವುದರಿಂದ ಉಲ್ಬಣಗೊಳ್ಳುತ್ತಿರುವಂತೆ ಕಾಣುತ್ತಿದೆ. ಅವರೆಲ್ಲರನ್ನು 'ಅಕ್ರಮ' ವಲಸಿಗರೆಂದು ಭಾವಿಸಲಾಗುತ್ತಿದೆ.

ಅಸ್ಸಾಂನಲ್ಲಿ ವಸಾಹತುಶಾಹಿಗಳ ಕಾಲದಲ್ಲೇ ಮಹತ್ವದ ಹಾಗೂ ಬದಲಾಯಿಸಲಾಗದಂಥ ಜನಸಂಖ್ಯಾ ಪ್ರವೃತ್ತಿ ನಡೆದಿತ್ತು ಎನ್ನುವುದನ್ನು ಜನಸಂಖ್ಯಾ ಅಧ್ಯಯನಗಳು ಸಾಬೀತುಪಡಿಸಿವೆ. ಪೂರ್ವ ಬಂಗಾಳದಿಂದ ಸತತವಾಗಿ ವಲಸೆ ಬಂದಿರುವುದು ಅದಕ್ಕೆ ಕಾರಣ ಎಂದಿವೆ. 1901 ಮತ್ತು 1941ರ ನಡುವಿನ ವಸಾಹತುಶಾಹಿ ಆಡಳಿತದಿಂದ ಉತ್ತೇಜನ ದೊರೆತ ಈ ವಲಸೆಯು ಈ ವಲಯದ ಜನಸಂಖ್ಯಾ ಸ್ವರೂಪವನ್ನೇ ಬದಲಾಯಿಸಿದೆ. ಚುನಾವಣೆ ಆಯೋಗದ ಮಾತನ್ನು ನಂಬಲೇಬೇಕೆಂದಾದರೆ ಒಂದು ತಾರ್ಕಿಕ ಪ್ರಶ್ನೆ ಎದುರಾಗುತ್ತದೆ: 'ವಿಭಜನೆಗೆ ಮುನ್ನ ಅಸ್ಸಾಂನಲ್ಲಿ ನೆಲೆಸಿದ ಲಕ್ಷಾಂತರ ಪೂರ್ವ ಬಂಗಾಳಿ ಮುಸ್ಲಿಮರ ವಂಶಸ್ಥರು ಎಲ್ಲಿ ಹೋದರು?'

ಆದ್ದರಿಂದ, ಶರ್ಮಾರ ಪ್ರತಿಪಾದನೆಗಳು ಆರ್‌ಎಸ್‌ಎಸ್‌ನ ಜನಾಂಗೀಯ ಮತ್ತು ಧರ್ಮ ಆಧಾರಿತ ವಿಶಾಲ ಅಭಿಯಾನಕ್ಕೆ ಅನುಗುಣವಾಗಿಯೇ ಇವೆ. ಜನಗಣತಿ ಅಂಕಿಅಂಶಗಳು ಬೇರೆಯೇ ವಾಸ್ತವತೆಯನ್ನು ತೋರಿಸುತ್ತವೆ: 1991–2001 ಮತ್ತು 2001–2011ರ ದಶಕಗಳಲ್ಲಿ ಭಾರತಕ್ಕೆ ಆಗಮಿಸಿದ ವಿದೇಶಿ ವಲಸಿಗರನ್ನು ಹೋಲಿಸಿದರೆ ಬಾಂಗ್ಲಾದೇಶಿ ವಲಸಿಗರ ಸಂಖ್ಯೆ 2.79 ಲಕ್ಷದಿಂದ 1.72 ಲಕ್ಷಕ್ಕೆ ಇಳಿದಿದೆ ಎನ್ನುವುದನ್ನು ತೋರಿಸುತ್ತದೆ. ಅಂದರೆ ಇದು ಸರಿಸುಮಾರು ಶೇಕಡ 50ರಷ್ಟು ಕುಸಿತವಾಗಿದೆ. ಆದರೆ ಸುಳ್ಳು ಸುದ್ದಿ ಮತ್ತು ವೈರಲ್ ವಾಟ್ಸ್ಆ್ಯಪ್ ಫಾರ್ವರ್ಡ್‌ಗಳ ಈ ಯುಗದಲ್ಲಿ ಈ ವಸ್ತುನಿಷ್ಠ ದತ್ತಾಂಶಗಳ ಬಗ್ಗೆ ಯಾರು ತಲೆ ಕೆಡಿಸಿಕೊಳ್ಳುತ್ತಾರೆ?

ನಿಲೋತ್ಪಲ ಬಸು

ಇಂಥ ವಿದ್ಯಮಾನವು ಅಸ್ಸಾಂಗೆ ಮಾತ್ರ ಸೀಮಿತವಾಗಿಲ್ಲ. ದೇಶದಾದ್ಯಂತ, ಅದರಲ್ಲೂ ವಿಶೇಷವಾಗಿ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಬಂಗಾಳಿ ಮಾತನಾಡುವ ಮುಸ್ಲಿಮರನ್ನು ಅಕ್ರಮ ಬಾಂಗ್ಲಾದೇಶಿ ವಲಸಿಗರೆಂದು ಸಮೀಕರಿಸುವ ಪ್ರಚಾರ ವ್ಯಾಪಕವಾಗಿದೆ. ಜನರಿಗೆ ಕಿರುಕುಳ ನೀಡಲಾಗುತ್ತಿದೆ. ದಾಖಲೆಗಳ ಸೂಕ್ತ ಪರಿಶೀಲನೆಯಿಲ್ಲದೆ ಹಿಂಸೆಗೆ ಒಳಪಡಿಸಲಾಗುತ್ತಿದೆ. ಪಶ್ಚಿಮ ಬಂಗಾಳದಲ್ಲಿ ಸುಮಾರು 2.47 ಕೋಟಿ ಮುಸ್ಲಿಮರಿದ್ದಾರೆ. ಅಂದರೆ ರಾಜ್ಯದ ಒಟ್ಟು 9.13 ಕೋಟಿ ಜನಸಂಖ್ಯೆಯ ಶೇಕಡ 27.01ರಷ್ಟಿದ್ದಾರೆ. ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿಯನ್ನು ನೋಡಿದರೆ, ಆ ಪೈಕಿ ಅನೇಕ ಜನರು ಉದ್ಯೋಗ ಹುಡುಕಿಕೊಂಡು ರಾಜ್ಯದ ಗಡಿ ದಾಟಿ ಹೋಗುವುದು ಸಹಜವೇ ಆಗಿದೆ. ಅಂತಾರಾಜ್ಯ ವಲಸೆಯಲ್ಲಿ ಅವರ ಪ್ರಮಾಣ ಗಣನೀಯವಾಗಿದೆ.

ಪೌರತ್ವ ಸಾಬೀತಿಗೆ ಒಂದೇ ಒಂದು ದಾಖಲೆಪತ್ರಗಳಿಲ್ಲದೆ ಮತ್ತು ಆಧಾರ್ ಅಥವಾ ರೇಷನ್ ಕಾರ್ಡ್ ಮತ್ತು ಮತದಾರರ ಗುರುತಿನ ಚೀಟಿ (ಎಪಿಕ್) ಮುಂತಾದ ಇತರ ಎಲ್ಲ ಪ್ರೂಫ್‌ಗಳನ್ನು ನಿರ್ಲಕ್ಷಿಸಿರುವಾಗ ಈ ಜನರು ಒಳಪಡುವ ಯಾತನೆಯನ್ನು ಹೆಚ್ಚಿಗೆ ವಿವರಿಸಬೇಕಿಲ್ಲ. ಅವರ ಅಪಾಯಕಾರಿ ಪರಿಸ್ಥಿತಿಯು ಕೋವಿಡ್–19 ಲಾಕ್‌ಡೌನ್ ವೇಳೆ ಬಹಿರಂಗಗೊಂಡಿತ್ತು. ವಲಸೆ ಕಾರ್ಮಿಕರು ನೂರಾರು ಕಿಲೋಮೀಟರ್ ನಡೆದುಕೊಂಡು ಹೋದ ಆಘಾತಕಾರಿ ಚಿತ್ರಗಳು ನಮ್ಮ ಕಣ್ಣ ಮುಂದಿವೆ. ಚಕ್ರವಿರುವ ಸೂಟ್‌ಕೇಸ್ ಮೇಲೆ ಮಗುವನ್ನು ಕೂರಿಸಿಕೊಂಡು ಎಳೆದುಕೊಂಡು ಹೋಗುತ್ತಿರುವ ತಾಯಿ, ರೈಲು ಹರಿದು ಮೃತಪಟ್ಟ ವಲಸಿಗರ ಪಳೆಯುಳಿಕೆಗಳು–ಇವೇ ಮೊದಲಾದ ದೃಶ್ಯಗಳು ನಮ್ಮ ಸಾಮೂಹಿಕ ಸ್ಮರಣೆಯನ್ನು ಕಾಡುತ್ತವೆ.

ವಲಸೆ ಕಾರ್ಮಿಕರು ಜಾಗತಿಕ ಬಂಡವಾಳವಾದದ ಅವಿಭಾಜ್ಯ ಅಂಶ ಎನ್ನುವುದನ್ನು ಕಾಣಲು ನಾವು ಇತಿಹಾಸವನ್ನು ಆಳವಾಗಿ ಹೊಕ್ಕು ನೋಡಬೇಕಾದ ಅಗತ್ಯವೇನೂ ಇಲ್ಲ. ವಸಾಹತುಗಳು, ಅರೆ–ವಸಾಹತುಗಳು ಮತ್ತು ಆರ್ಥಿಕವಾಗಿ ದುರ್ಬಲವಾದ ಪ್ರದೇಶಗಳ ಕಾರ್ಮಿಕರ ಮೇಲೆ ಬಂಡವಾಳವಾದವು ನಿಂತಿದೆ. 19ನೇ ಶತಮಾನದ ಎರಡನೇ ಭಾಗವು ಚಹಾ, ಕಾಫಿ, ಕಬ್ಬು, ರಬ್ಬರ್ ಪ್ಲಾಂಟೇಶನ್‌ಗಳ ಉತ್ಕರ್ಷಕ್ಕೆ ಸಾಕ್ಷಿಯಾಗಿತ್ತು. ದೊಡ್ಡ ಪ್ರಮಾಣದ ರೈಲ್ವೆ ಮತ್ತು ಟೆಲಿಗ್ರಾಫ್ ಮಾರ್ಗಗಳ ನಿರ್ಮಾಣ ಆಗ ನಡೆದಿತ್ತು. ಆಧುನಿಕ ಗಣಿಗಾರಿಕೆಗೂ ಆ ಕಾಲಘಟ್ಟ ಸಾಕ್ಷಿಯಾಗಿತ್ತು. ಅದು ಶ್ರಮಿಕರ ಅಭೂತಪೂರ್ವ ಚಲನೆಯ ಯುಗವೂ ಆಗಿತ್ತು. ಅದರ ಪರಿಣಾಮವಾಗಿ ವಲಸೆಯನ್ನು ನಿಯಂತ್ರಿಸುವ ಹಾಗೂ ನಿರ್ವಹಿಸಲು, ತನ್ನ ರಾಜಕೀಯ ಮತ್ತು ಆರ್ಥಿಕ ಮಹತ್ವವನ್ನು ಮಾನ್ಯ ಮಾಡುವ ವ್ಯವಸ್ಥೆಗಳನ್ನು ಪ್ರಭುತ್ವವು ಅಭಿವೃದ್ಧಿ ಪಡಿಸಿತು.

21ನೇ ಶತಮಾನದಲ್ಲಿ ಹಣಕಾಸು ಪ್ರೇರಿತ ಜಾಗತೀಕರಣದಿಂದ ಸಂಘರ್ಷ–ಪ್ರಧಾನ ನಿರಾಶ್ರಿತತೆ ಮತ್ತು ಅಂತರ್‌ದೇಶೀಯ ಕಾರ್ಮಿಕರ ಹರಿವು ಇವುಗಳಿಂದಾಗಿ ವಲಸೆಯು ಹೊಸ ತುರ್ತು ವಿಷಯವಾಗಿ ಮುನ್ನೆಲೆಗೆ ಬಂದಿದೆ. ಆದಾಗ್ಯೂ ಈ ಪ್ರವೃತ್ತಿಯ ಜತೆ ಜತೆಯಲ್ಲೇ ಅತಿ–ಬಲಪಂಥೀಯ ಸಿದ್ಧಾಂತಗಳು ವಲಸೆಯನ್ನು ಅಸ್ಮಿತೆ ಆಧಾರಿತ ಧ್ರುವೀಕರಣಕ್ಕಾಗಿ ಒಂದು ಅನುಕೂಲಕರ ಸಾಧನವನ್ನಾಗಿ ಮಾಡಿಕೊಳ್ಳುತ್ತಿವೆ.

'ಜಾಗತಿಕ ಆರ್ಥಿಕತೆಯಲ್ಲಿ ಅಂತಾರಾಷ್ಟ್ರೀಯ ವಲಸಿಗರು ನಿರ್ಣಾಯಕ ಪಾತ್ರವನ್ನು ವಹಿಸುತ್ತಿದ್ದಾರೆ. 2022ರ ಜಾಗತಿಕ ಶ್ರಮಿಕರಲ್ಲಿ ವಲಸಿಗರ ಪಾಲು ಶೇಕಡ 4.7ರಷ್ಟಿತ್ತು. ಅವರಲ್ಲಿ ಬಹುತೇಕರು ಹೆಚ್ಚು–ಆದಾಯದ ದೇಶಗಳು ಮತ್ತು ವಿಶೇಷವಾಗಿ ಆರೈಕೆ ಮಾಡುವಂಥ ಸೇವಾ ವಲಯಗಳಲ್ಲಿ ಕೆಲಸದಲ್ಲಿ ತೊಡಗಿದ್ದರು' ಎಂದು ವಿಶ್ವ ಕಾರ್ಮಿಕ ಸಂಸ್ಥೆ (ಐಎಲ್‌ಒ) 2024ರ ಡಿಸೆಂಬರ್ ವರದಿಯಲ್ಲಿ ಒತ್ತಿ ಹೇಳಿದೆ. ಹಾಗಿದ್ದರೂ ಈ ಆರ್ಥಿಕ ವಾಸ್ತವತೆಗಳನ್ನು ನಿರ್ಲಕ್ಷಿಸುವ ರಾಜಕಾರಣ ಮುಂದೊತ್ತುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಭಯ ಹಾಗೂ ದ್ವೇಷವನ್ನು ಪ್ರೇರೇಪಿಸುವ ನಿಟ್ಟಿನಲ್ಲಿ ರೂಪಿಸಲಾಗುವ 'ಹೊರತುಪಡಿಸುವ ನೀತಿಗಳು' ಹೆಚ್ಚು ವೇಗ ಪಡೆದುಕೊಳ್ಳುತ್ತಿವೆ. ಡೊನಾಲ್ಡ್ ಟ್ರಂಪ್‌ರ ನೀತಿಗಳು 'ಹೊರತುಪಡಿಸುವಿಕೆ ಮತ್ತು ಇತರರು' ಪರಿಕಲ್ಪನೆಗೆ ಮಾದರಿಯಾಗಿದೆ. ವಲಸೆ ಮತ್ತು ವಲಸೆ ಕಾರ್ಮಿಕರನ್ನು ಕ್ರಿಮಿನಲ್‌ಗೊಳಿಸುವುದನ್ನು ಖಂಡತುಂಡವಾಗಿ ತಿರಸ್ಕರಿಸಬೇಕಿದೆ.

ಇಂದು ಈ ಜಾಗತಿಕ ಬೆಳವಣಿಗೆಗಳಿಂದ ಭಾರತವನ್ನು ಪ್ರತ್ಯೇಕಿಸಿ ನೋಡಲಾಗದು. ಆರ್‌ಎಸ್‌ಎಸ್ ಹಿಂದುತ್ವ ಸಿದ್ಧಾಂತವು ಪ್ರಬಲವಾದ ಕಾರ್ಪೋರೇಟ್ ಕೋಮುವಾದಿ ಮೈತ್ರಿಯ ಕೇಂದ್ರವಾಗಿರುವುದರಿಂದ ಬಂಗಾಳಿ ಮಾತನಾಡುವ ದುಡಿಯುವ ಜನರ ಮೇಲೆ ದಾಳಿಗಳು ನಡೆಯಬಹುದಾಗಿದೆ. ಪ್ರಸ್ತುತ ಆಡಳಿತವು ಜನಾಂಗೀಯ, ಭಾಷಾ ಮತ್ತು ಸಾಂಸ್ಕೃತಿಕ ವೈವಿಧ್ಯತೆಗೆ ವೈರಿಯಾಗಿದೆ. ಸಾಮ್ರಾಜ್ಯಶಾಹಿ ವಿರೋಧಿ ಸ್ವಾತಂತ್ರ್ಯ ಹೋರಾಟದ ಮೂಲಕ ಕಟ್ಟಲಾದ ಭಾರತದ ಪರಿಕಲ್ಪನೆಯ ಹೃದಯಕ್ಕೇ ಅದು ಏಟು ಕೊಡುತ್ತಿದೆ. ಹಕ್ಕುಗಳು ಮತ್ತು ಮಾನವೀಯತೆಯ ಈ ಕುಸಿತದ ವಿರುದ್ಧದ ಹೋರಾಟವನ್ನು ಯಾರೇ ಒಬ್ಬ ವ್ಯಕ್ತಿ ಮುಂದಕ್ಕೊಯ್ಯಲಾಗದು. ನಾವೆಲ್ಲರೂ ಒಟ್ಟಾಗಿ, ನಾವು ಜನರು ಒಗ್ಗಟ್ಟಿನಿಂದ ಕಾರ್ಯಾಚರಿಸಬೇಕು.

ಅನು:ವಿಶ್ವ

ಆಗಸ್ಟ್ 13 ರಂದು 'ಕಾರ್ಪೊರೇಟ್‌ಗಳೇ ಭಾರತ ಬಿಟ್ಟು ತೊಲಗಿ' ದಿನ– ಎಸ್‌ಕೆಎಂ ಕರೆ

ಆಗಸ್ಟ್ 13, 2015ನ್ನು 'ಕಾರ್ಪೊರೇಟ್‌ಗಳೇ ಭಾರತ ಬಿಟ್ಟು ತೊಲಗಿ' ದಿನ ಎಂದು ದೇಶಾದ್ಯಂತ ಸಾಮೂಹಿಕ ಪ್ರತಿಭಟನೆಗಳನ್ನು ನಡೆಸಲು ಸಂಯುಕ್ತ ಕಿಸಾನ್ ಸಭಾ (ಎಸ್‌ಕೆಎಂ) ಕರೆ ನೀಡಿದೆ.

ನರೇಂದ್ರ ಮೋದಿ ಸರ್ಕಾರವು ಅಮೆರಿಕದೊಂದಿಗೆ ಭಾರತೀಯ ಅರ್ಥವ್ಯವಸ್ಥೆಯನ್ನು, ವಿಶೇಷವಾಗಿ ಕೃಷಿ ಮತ್ತು ಹೈನುಗಾರಿಕೆ ವಲಯವನ್ನು ಅಮೆರಿಕಾಕ್ಕೆ ತೆರೆದುಕೊಡುವ 'ಮುಕ್ತ ವ್ಯಾಪಾರ ಒಪ್ಪಂದ'ಕ್ಕೆ (ಎಫ್‌ಟಿಎ) ಸಹಿ ಹಾಕಬೇಕೆಂಬ ಅಮೆರಿಕದ ಆದೇಶಗಳಿಗೆ ಶರಣಾಗುತ್ತಿದೆ ಎಂಬ ಎಸ್‌ಕೆಎಂನ ಗಂಭೀರ ಆತಂಕಗಳ ಹಿನ್ನೆಲೆಯಲ್ಲಿ ಈ ಕರೆ ನೀಡಲಾಗಿದೆ. ಈ ಎಫ್‌ಟಿಎ ಆಗಸ್ಟ್ 1, 2025 ರಿಂದ ಜಾರಿಗೆ ಬರಲಿದೆ.

ಜುಲೈ 20ರಂದು ನಡೆದ ಆನ್‌ಲೈನ್ ಸರ್ವಸದಸ್ಯ ಸಭೆಯು, ಅಂತಹ ಕ್ರಮವು ದೇಶದ ಹಿತಾಸಕ್ತಿಗಳಿಗೆ ಹಾನಿ ಮಾಡುವುದಲ್ಲದೆ ಜನರ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಅಭಿಪ್ರಾಯ ಪಟ್ಟಿರುವುದಾಗಿ, ಸಭೆಯ ನಂತರ ಜುಲೈ 21ರಂದು ನೀಡಿದ ಎಸ್‌ಕೆಎಂ ಪತ್ರಿಕಾ ಹೇಳಿಕೆ ತಿಳಿಸಿದೆ.

ಈ ಪತ್ರಿಕಾ ಹೇಳಿಕೆಯಲ್ಲಿ, ಅಮೆರಿಕದ ಒತ್ತಡಗಳನ್ನು ಸ್ವೀಕರಿಸುವ ಮತ್ತು ಜಿಎಂ ಆಹಾರಗಳು ಸೇರಿದಂತೆ ಆಹಾರ ಮತ್ತು ಡೈರಿ ವಸ್ತುಗಳನ್ನು ಅಮೆರಿಕಾದಿಂದ ಆಮದುಗಳನ್ನು ಮತ್ತು ಆಹಾರ ಮಾರುಕಟ್ಟೆಯಲ್ಲಿ ಅಮೆರಿಕನ್ ಬಹುರಾಷ್ಟ್ರೀಯ ಕಂಪನಿಗಳ ನುಸುಳಿಕೆಯನ್ನು ಹೆಚ್ಚಿಸುವ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ನಡೆಗಳ ವಿರುದ್ಧ ಸಾಮೂಹಿಕ ಕಾರ್ಯಾಚರಣೆಗಳ ಸರಣಿಯನ್ನು ಪ್ರಕಟಿಸಲಾಗಿದೆ. ರೈತರು ಆಗಸ್ಟ್ 13, 2025ರಂದು ಟ್ರ್ಯಾಕ್ಟರ್/ಮೋಟಾರ್ ವಾಹನ ಮೆರವಣಿಗೆಗಳು ಮತ್ತು ಪ್ರತಿಭಟನಾ ಪ್ರದರ್ಶನಗಳನ್ನು ಆಯೋಜಿಸುವ ಮೂಲಕ ಮತ್ತು ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಪ್ರಧಾನಿ ನರೇಂದ್ರ ಮೋದಿಯವರ ಪ್ರತಿಕೃತಿಗಳನ್ನು ಸುಡುವ ಮೂಲಕ 'ಕಾರ್ಪೊರೇಟ್'ಗಳು ಭಾರತ ಬಿಟ್ಟು ತೊಲಗಿ' ಎಂಬ ಘೋಷಣೆಯನ್ನು ಮೊಳಗಿಸುತ್ತಾರೆ ಎಂದು ತಿಳಿಸಲಾಗಿದೆ.

ಅಲ್ಲದೆ, ಹೆಚ್ಚಿನ ವಿದ್ಯುತ್ ಸುಂಕ ಹೇರಿಕೆ, ಸ್ಮಾರ್ಟ್ ಮೀಟರ್‌ಗಳು ಮತ್ತು 10 ವರ್ಷಗಳ ನಂತರ ಟ್ರ್ಯಾಕ್ಟರ್‌ಗಳ ಮೇಲಿನ ನಿಷೇಧದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಇವೆಲ್ಲದರ ವಿರುದ್ಧ ಆಗಸ್ಟ್ 15ರಿಂದ ರಾಷ್ಟ್ರೀಯ ಅಭಿಯಾನ ಆರಂಭವಾಗಲಿದ್ದು, ಸೆಪ್ಟೆಂಬರ್ 26ರಂದು ಬೃಹತ್ ಕಾರ್ಮಿಕ–ರೈತ ಪ್ರತಿಭಟನೆ ನಡೆಸಲು ಯೋಜಿಸಲಾಗಿದೆ.

ಜುಲೈ 20, 2025ರಂದು ನಡೆದ ಎಸ್‌ಕೆಎಂನ ಈ ಸರ್ವಸದಸ್ಯ ಸಭೆಯಲ್ಲಿ 12 ರಾಜ್ಯಗಳಿಂದ 37 ರೈತ ಸಂಘಟನೆಗಳ 106 ಪ್ರತಿನಿಧಿಗಳು ಭಾಗವಹಿಸಿದ್ದರು ಎಂದು ಹೇಳಿಕೆ ತಿಳಿಸಿದೆ. ಅಶೋಕ ಧವಳೆ, ದರ್ಶನ್ ಪಾಲ್, ಯುದ್ವೀರ್ ಸಿಂಗ್, ಆಶಿಶ್ ಮಿತ್ತಲ್, ಬಡಗಲಪುರ ನಾಗೇಂದ್ರ, ಸುನಿಲಂ, ರೇವುಲಾ ವೆಂಕಯ್ಯ, ಪುರುಷೋತ್ತಮ ಶರ್ಮಾ ಮತ್ತು ಸತ್ಯವಾನ್ ಇದ್ದ ಅಧ್ಯಕ್ಷ ಮಂಡಳಿ ಕಲಾಪಗಳನ್ನು ನಡೆಸಿತು. ಹನ್ನನ್ ಮೊಲ್ಲಾ ಪ್ರತಿನಿಧಿಗಳನ್ನು ಸ್ವಾಗತಿಸಿದರು, ರಾಜನ್ ಕ್ಷೀರಸಾಗರ್ ಕಾರ್ಯಸೂಚಿಯನ್ನು ಮಂಡಿಸಿದರು. ಅಶೋಕ್ ಧವಳೆ ಸಮಾರೋಪ ಭಾಷಣ ಮಾಡಿದರು.

ಪಂಜಾಬ್‌ನ ಎಸ್‌ಕೆಎಂ ಘಟಕಗಳು ಜುಲೈ 30 ರಂದು ಎಲ್ಲಾ ಜಿಲ್ಲೆಗಳಲ್ಲಿ ಟ್ರ್ಯಾಕ್ಟರ್ ರ‍್ಯಾಲಿಗಳನ್ನು ನಡೆಸಲಿವೆ. ಮತ್ತು ಆಗಸ್ಟ್ 24ರಂದು ಎಎಪಿ ಸರ್ಕಾರದ ಹೊಸ 'ಭೂಮಿ ಸಂಚಯನ ನೀತಿ'ಯ ವಿರುದ್ಧ ಬೃಹತ್ ಮಹಾಪಂಚಾಯತ್ ನಡೆಸಲಿವೆ.

ಅದಾನಿ ಗುಂಪಿನ ಕಲ್ಲಿದ್ದಲು ಗಣಿಗಳಿಗಾಗಿ ತಮ್ಮ ಭೂಮಿಯನ್ನು ಬಲವಂತವಾಗಿ ಸ್ವಾಧೀನಪಡಿಸಿಕೊಳ್ಳುವುದನ್ನು ವಿರೋಧಿಸಿ ಪ್ರತಿಭಟಿಸುತ್ತಿರುವ ಸಿಂಗ್ರೌಲಿ ಬುಡಕಟ್ಟು ರೈತರೊಂದಿಗೆ ಸಭೆ ಸಂಪೂರ್ಣ ಸೌಹಾರ್ದವನ್ನು ವ್ಯಕ್ತಪಡಿಸಿತು.

ಈ ವರ್ಷದ ನವೆಂಬರ್ 26, 2020–21ರ ಐತಿಹಾಸಿಕ ರೈತರ ಹೋರಾಟದ 5ನೇ ವಾರ್ಷಿಕಾಚರಣೆಯ ದಿನ. ಅಂದು ನವದೆಹಲಿಯಲ್ಲಿ ಮತ್ತು ರಾಜ್ಯಗಳ ರಾಜಧಾನಿಗಳಲ್ಲಿ ಬೃಹತ್ ಕಾರ್ಮಿಕ–ರೈತ ಪ್ರತಿಭಟನಾ ಕಾರ್ಯಾಚರಣೆಯನ್ನು ಎಸ್‌ಕೆಎಂ ಕಾರ್ಮಿಕರ ಮತ್ತು ಕೃಷಿ ಕೂಲಿಕಾರರ ಸಂಘಟನೆಗಳೊಂದಿಗೆ ಸಂಯೋಜಿಸಲು ಸಭೆ ನಿರ್ಧರಿಸಿದೆ. ಆಗಸ್ಟ್ 15ರಿಂದ ನವೆಂಬರ್ 26 ರವರೆಗೆ ಕಾರ್ಪೊರೇಟ್–ಕೋಮುವಾದಿ ಶಕ್ತಿಗಳ ವಿರುದ್ಧ ರಾಷ್ಟ್ರೀಯ ಅಭಿಯಾನವನ್ನು ರಾಷ್ಟ್ರೀಯ ಏಕತೆ ಮತ್ತು ಜನರ ಏಕತೆಗಾಗಿ ಯೋಜಿಸಲಾಗುವುದು, ಇದು ಕಾರ್ಮಿಕ–ರೈತ ಏಕತೆ ಮತ್ತು ಹಿಂದೂ–ಮುಸ್ಲಿಂ ಏಕತೆಯ ಎರಡು ಸ್ತಂಭಗಳ ಮೇಲೆ ವಿವಿಧ ಧರ್ಮಗಳು ಮತ್ತು ನಂಬಿಕೆಗಳ ಜಾತ್ಯತೀತ ಏಕತೆ ಮತ್ತು ಇಡೀ ದುಡಿಯುವ ಜನರ ವರ್ಗ ಏಕತೆಗೆ ದಾರಿ ಮಾಡಿಕೊಡುತ್ತದೆ.

ಈ ಕೆಳಗಿನ ಹಕ್ಕೊತ್ತಾಯಗಳನ್ನು ಈ ಅಭಿಯಾನದಲ್ಲಿ ಎತ್ತಲಾಗುವುದು:

1. ಕೃಷಿ ವಲಯ/ಆಹಾರಧಾನ್ಯ ಉತ್ಪಾದನೆ ಮತ್ತು ಡೈರಿ ವಲಯಕ್ಕೆ ಹಾನಿಮಾಡುವ ಯಾವುದೇ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಮತ್ತು ಅಗ್ಗದ ಆಮದುಗಳು ಬೇಡವೇ ಬೇಡ.
2. ಒಕ್ಕೂಟ ಹಕ್ಕುಗಳನ್ನು ದುರ್ಬಲಗೊಳಿಸುವ ಮತ್ತು ಸರ್ಕಾರಿ ಕೃಷಿ ಮಾರುಕಟ್ಟೆಗಳ ಕಾರ್ಪೊರೇಟ್ ಸ್ವಾಧೀನವನ್ನು ಉತ್ತೇಜಿಸುವ ಕಾರ್ಪೊರೇಟ್ ಪರ ಎನ್‌ಪಿಎಫ್‌ಎಎಂ ರದ್ದುಗೊಳ್ಳಬೇಕು.
3. ಎಲ್ಲಾ ಬೆಳೆಗಳಿಗೆ ಖಾತರಿಪಡಿಸಿದ ಸಂಗ್ರಹಣೆಯೊಂದಿಗೆ ಸಿ2+50% ಸೂತ್ರದಂತೆ ಎಂಎಸ್‌ಪಿ
4. ರೈತರ ಆತ್ಮಹತ್ಯೆಗಳನ್ನು ತಡೆಗಟ್ಟಲು ಎಲ್ಲಾ ವಿಭಾಗಗಳ ರೈತರು ಮತ್ತು ಕೃಷಿ ಕೂಲಿಕಾರರಿಗೆ ಸಮಗ್ರ ಸಾಲ ಮನ್ನಾ.
5. ವಿವೇಚನಾರಹಿತ ಭೂಸ್ವಾಧೀನ, ಭೂಮಿ ಸಂಚಯನ ಯೋಜನೆಗಳು, ಕೈಗಾರಿಕಾ ಮಾಡೆಲ್ ಟೌನ್‌ಶಿಪ್‌ಗಳಿಗೆ ನಕಾರ ಮತ್ತು ಎಲ್‌ಎಆರ್‌ಆರ್ ಕಾಯ್ದೆ 2013 ರ ಸರಿಯಾದ ಅನುಷ್ಠಾನ.
6. ವಿದ್ಯುತ್ ಖಾಸಗೀಕರಣ, ಸ್ಮಾರ್ಟ್ ಮೀಟರ್‌ಗಳ ಅಳವಡಿಕೆ ಬೇಡವೇ ಬೇಡ– ಎಲ್ಲಾ ಗ್ರಾಮೀಣ ಮನೆಗಳಿಗೆ 300 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಒದಗಿಸಬೇಕು.

ಖಾಸಗಿ ವೆಚ್ಚಗಳ ಅಸಮಾನತೆಯಲ್ಲಿ ಇಳಿಕೆಯೆಂದು... ಪುಟ 13 ರಿಂದ

(ಬೇರೆ ಬೇರೆ ವರಮಾನ ಗುಂಪುಗಳ ಧಾನ್ಯ ಸೇವನೆಯ ಏರಿಕೆಯು ಭಾರತದ ಮಟ್ಟಿಗೂ ನಿಜ), ಭಾರತವು ವಿಶ್ವ ಹಸಿವಿನ ಸೂಚ್ಯಂಕದ 125 ದೇಶಗಳಲ್ಲಿ ಕೆಳಗಿನ 107ನೇ ಸ್ಥಾನದಲ್ಲಿರುವುದು ಸಾಧ್ಯವಿಲ್ಲ. ಭಾರತದ ಮಹಿಳೆಯರಲ್ಲಿ ರಕ್ತಹೀನತೆಯ ಪ್ರಕರಣಗಳು ಏರಿಕೆಯಾಗುವುದು ಸಾಧ್ಯವಿಲ್ಲ. ಹಿಂದಿನ ಯೋಜನಾ ಆಯೋಗವು ಬಡತನವನ್ನು ವ್ಯಾಖ್ಯಾನಿಸಲು ಬಳಸುತ್ತಿದ್ದ ಕ್ಯಾಲೋರಿ ಮಾನದಂಡ ಮಟ್ಟಕ್ಕಿಂತ ಕೆಳಗಿನ ಸೇವನೆಯ ಜನಸಂಖ್ಯೆಯ ಶೇಕಡಾವಾರು ಹೆಚ್ಚಾಗುವುದು ಸಾಧ್ಯವಿಲ್ಲ. ಸರ್ಕಾರದ ದತ್ತಾಂಶಗಳೇ ಹೇಳುವ ಪ್ರಕಾರ ಆರೋಗ್ಯ ಸೂಚಕಗಳು ಹದಗೆಡುತ್ತಿರುವ ಅಂಶದೊಂದಿಗೆ ಜಿಡಿಪಿ ಬೆಳವಣಿಗೆಯ ದಾವೆಯನ್ನು ಸಮನ್ವಯಗೊಳಿಸುವ ಏಕೈಕ ಮಾರ್ಗವೆಂದರೆ, ವರಮಾನಗಳ ಹಂಚಿಕೆ ಹದಗೆಡುತ್ತಿದೆ ಎಂದು ಭಾವಿಸಿಕೊಳ್ಳುವುದೇ ಆಗುತ್ತದೆ. ಈ ಅಂಶವನ್ನು ವಿಶ್ವಬ್ಯಾಂಕ್ ಹೇಳುವಂತೆ ಜಿನಿ ಗುಣಾಂಕದ ಚಲನೆಯು ತೋರಿಸದೆ ಹೋದರೆ, ವರಮಾನಗಳ ಅಸಮತೆಯನ್ನು ಅಳೆಯಲು ಜಿನಿ ಗುಣಾಂಕವು ಒಂದು ತಪ್ಪು ವಿಧಾನವಾಗುತ್ತದೆ.

ಥಾಮಸ್ ಪಿಕೆಟ್ಟಿ ಮತ್ತು ಇತರರು ನಡೆಸುತ್ತಿರುವ ಸಂಸ್ಥೆಯ ವಿಶ್ವ ಅಸಮಾನತೆ ಡೇಟಾಬೇಸ್‌ನ ಅಂಕಿಅಂಶಗಳು ಸೂಚಿಸುವುದು ಇದನ್ನೇ. ರಾಷ್ಟ್ರೀಯ ವರಮಾನದಲ್ಲಿ ಉನ್ನತ ವರ್ಗಗಳು ಹೊಂದಿರುವ ಪಾಲಿನ ಮೂಲಕ ಅಳೆಯಲ್ಪಟ್ಟ ವರಮಾನ ಅಸಮಾನತೆಯು ತೀವ್ರವಾಗಿ ಏರುತ್ತಿರುವುದನ್ನು ಅವರು ತೋರಿಸುತ್ತಾರೆ. ಅವರ ಅಂಕಿಅಂಶಗಳ ಪ್ರಕಾರ, 2023–24ರಲ್ಲಿ ರಾಷ್ಟ್ರೀಯ ವರಮಾನದಲ್ಲಿ ದೇಶದ ಜನಸಂಖ್ಯೆಯ ಮೇಲ್ತುದಿಯ ಶೇ. ಒಂದರಷ್ಟು ಮಂದಿಯು ಹೊಂದಿದ ಪಾಲು ಶೇ. 23ರಷ್ಟಿದ್ದು, ಅದು ಕಳೆದ ನೂರು ವರ್ಷಗಳ ಕಾಲದಲ್ಲಿ ಇದುವರೆಗೆ ಕಂಡ ಅತ್ಯಧಿಕ ಮಟ್ಟವಾಗಿದೆ!

ಅಗತ್ಯ ಸೇವೆಗಳ ಖಾಸಗೀಕರಣದ ಪರಿಣಾಮ

ಸರ್ಕಾರದ ದಾವೆಗಳ ಬಗ್ಗೆ ಮಾಡಿರುವ ಈ ಟೀಕೆಗಳಲ್ಲಿ ಒಂದು ಪ್ರಮುಖ ಅಂಶ ಬೆಳಕಿಗೆ ಬಂದಿಲ್ಲ. ನವ ಉದಾರವಾದದ ಪ್ರಮುಖವಾದ ಒಂದು ಲಕ್ಷಣವೆಂದರೆ, ಅದು ಸಾರ್ವಜನಿಕ ಉದ್ಯಮಗಳ ಖಾಸಗೀಕರಣವೇ. ಕೆಲ ವರ್ಷಗಳ ಹಿಂದೆ ಸಾರ್ವಜನಿಕ ವಲಯವು ಒದಗಿಸುತ್ತಿದ್ದ ಶಿಕ್ಷಣ ಮತ್ತು ಆರೋಗ್ಯದಂತಹ ಅಗತ್ಯ ಸೇವೆಗಳನ್ನು ಖಾಸಗೀಕರಣ ಮಾಡಲಾಗಿದೆ. ಈ ಬದಲಾವಣೆಯು ವರಮಾನ ಹಂಚಿಕೆಯ ಮೇಲೆ ಪ್ರಮುಖ ಪರಿಣಾಮಗಳನ್ನು ಬೀರುತ್ತದೆ. ಅವುಗಳನ್ನು ಈ ಕೆಳಗೆ ಕಾಣಬಹುದು.

ಈಗ ನಾವು ವರಮಾನ ಹಂಚಿಕೆಯು, ಅದನ್ನು ಅಳೆಯಲು ಯಾವ ಅಳತೆಯ ವಿಧಾನವನ್ನು ಬಳಸಿದಾಗಲೂ, ಬದಲಾಗದೆ ಉಳಿಯುವ ಎರಡು ದಿನಾಂಕಗಳ ನಡುವಿನ ಅವಧಿಯನ್ನು ನೋಡೋಣ. ಜನಸಂಖ್ಯೆಯ ಬೇರೆ ಬೇರೆ ಬೇರೆ ವಿಭಾಗಗಳು ವರಮಾನವನ್ನು ಆರಂಭಿಕ ವರ್ಷದಲ್ಲಿ ಬೇರೆ ಬೇರೆ ಸರಕುಗಳ ಮೇಲೆ ಖರ್ಚು ಮಾಡುತ್ತಿದ್ದವು: ಉನ್ನತ ವರಮಾನದ ಗುಂಪುಗಳು ದುಬಾರಿ ಖಾಸಗಿ ಆರೋಗ್ಯ ರಕ್ಷಣೆಗಾಗಿ ಖರ್ಚು ಮಾಡಿದರೆ, ಬಡವರು ಅಗ್ಗದ ಸಾರ್ವಜನಿಕ ಆರೋಗ್ಯ ರಕ್ಷಣೆ ಪಡೆಯುತ್ತಿದ್ದರು. ಈಗ, ಆರಂಭಿಕ ಮತ್ತು ಅಂತಿಮ ವರ್ಷಗಳ ನಡುವೆ ಸಾರ್ವಜನಿಕ ಆರೋಗ್ಯ ಸೇವೆಗಳು ಒಂದು ವೇಳೆ ಕ್ಷೀಣಿಸಿದ್ದರೆ, ಶ್ರೀಮಂತರಲ್ಲದ ಅನೇಕ ಮಂದಿ ಖಾಸಗಿ ಆರೋಗ್ಯ ಸೇವೆಗಳ ಮೊರೆ ಹೋಗುವುದು ಅನಿವಾರ್ಯವಾಗುತ್ತದೆ. ಆಗ, ಈ ಎರಡು ದಿನಾಂಕಗಳ ನಡುವೆ ಕೆಳ ತುದಿಯಲ್ಲಿ ನಿಜ ವರಮಾನವು ಇಳಿಕೆಯಾಗುವಷ್ಟು ಕೆಟ್ಟದಾಗಿದ್ದರೂ ಹಣ ವರಮಾನ ಹಂಚಿಕೆಯು ಬದಲಾಗದೆ ಉಳಿಯುತ್ತಿತ್ತು (ನಮ್ಮಲ್ಲಿ ಲಭ್ಯವಿರುವುದು ಹಣ ವರಮಾನ ಹಂಚಿಕೆ ದತ್ತಾಂಶಗಳು ಮಾತ್ರ) ಮತ್ತು ಎಲ್ಲ ಬೆಲೆಗಳೂ ಬದಲಾಗದೆ ಉಳಿಯುತ್ತಿದ್ದವು.

ಅಗತ್ಯ ಸೇವೆಗಳ ಖಾಸಗೀಕರಣದಿಂದಾಗಿ ಬಡವರ ನಿಜ ವರಮಾನವು ಹದಗೆಡುವುದು ಎರಡು ರೀತಿಯಲ್ಲಿ ಅಥವಾ ಎರಡೂ ರೀತಿಗಳಲ್ಲೂ ವ್ಯಕ್ತಗೊಳ್ಳುತ್ತದೆ: ದುಬಾರಿ ಖಾಸಗಿ ಆರೋಗ್ಯ ಸೇವೆಗಾಗಿ ಹೆಚ್ಚು ಹಣವನ್ನು ಖರ್ಚು ಮಾಡುವ ಸಲುವಾಗಿ ಒಂದೋ ಅವರು ಆಹಾರ ಸೇವನೆಯ ಖರ್ಚುಗಳಲ್ಲಿ ಕಡಿತ ಮಾಡಬೇಕಾಗುತ್ತದೆ; ಅಥವಾ ದೊಡ್ಡ ಮೊತ್ತದ ಸಾಲ ಪಡೆಯಬೇಕಾಗುತ್ತದೆ; ಅಥವಾ, ಬಹುತೇಕವಾಗಿ ಕಂಡುಬರುವಂತೆ, ಎರಡನ್ನೂ ಮಾಡಬೇಕಾಗುತ್ತದೆ, ಅಂದರೆ, ಆಹಾರ ಖರ್ಚುಗಳ ಕಡಿತದ ಜೊತೆಗೆ ಸಾಲವನ್ನೂ ಮಾಡಬೇಕಾಗುತ್ತದೆ. ಸಾಲ ಮಾಡಿದ ಸಂದರ್ಭದಲ್ಲಿ, ಬಳಕೆ ಖರ್ಚುಗಳ ಹಂಚಿಕೆಯು ಅಸಮಾನತೆಯ ಇಳಿಕೆಯನ್ನು ತೋರಿಸುತ್ತಿತ್ತು; ಎರಡು ದಿನಾಂಕಗಳ ನಡುವೆ ಹಣ ವರಮಾನದ ಹಂಚಿಕೆಯು ಬದಲಾಗದೆ ಇರುವುದರಿಂದ, ಈ ಅವಧಿಯಲ್ಲಿ ಬಡವರು ತಮ್ಮ ಆರೋಗ್ಯ ಅಗತ್ಯಗಳಿಗಾಗಿ ಅನಿವಾರ್ಯ ಸಂದರ್ಭಗಳಲ್ಲಿ ದುಬಾರಿ ಖಾಸಗಿ ಆರೋಗ್ಯ ಸೌಲಭ್ಯಗಳನ್ನು ಪಡೆಯುವುದಕ್ಕಾಗಿ ಹಣ ಹೊಂದಿಸಿಕೊಳ್ಳಲು ಸಾಲವನ್ನು ಆಶ್ರಯಿಸುವುದರಿಂದಾಗಿ, ಬಳಕೆ ಖರ್ಚುಗಳ ಅಸಮಾನತೆ ಇಳಿಕೆಯಾಗಿದೆ ಎಂದು ತೋರುತ್ತದೆ. ಆದರೆ, ನಾವು ಗಮನಿಸಿದ ಈ ಬಳಕೆ ಖರ್ಚುಗಳ ಅಸಮಾನತೆಯ ಇಳಿಕೆಯ ವಿದ್ಯಮಾನವು, ವಾಸ್ತವವಾಗಿ, ತದ್ವಿರುದ್ಧವಾಗಿದೆ, ಅಂದರೆ, ಇದು ನಿಜ ವರಮಾನ ಅಸಮಾನತೆ ಏರಿಕೆಯಾಗಿದೆ ಎಂಬುದನ್ನು ಸೂಚಿಸುತ್ತದೆ.

ಆದರೆ, ಸರ್ಕಾರವು ಈ ಬಳಕೆ ಖರ್ಚುಗಳ ಅಸಮಾನತೆಯ ಇಳಿಕೆಯೇ ವರಮಾನ ಅಸಮಾನತೆಯ ಇಳಿಕೆಯನ್ನು ಸೂಚಿಸುತ್ತದೆ ಎಂದು ಪರಿಗಣಿಸುತ್ತದೆ ಮತ್ತು ಅದಕ್ಕಾಗಿ ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುತ್ತದೆ. ಇದು ಕೇವಲ ಒಂದು ಸೈದ್ಧಾಂತಿಕ ಸಾಧ್ಯತೆ ಮಾತ್ರವಲ್ಲ; ಸಮಕಾಲೀನ ನವ ಉದಾರವಾದಿ ಭಾರತದ ಸಂದರ್ಭದಲ್ಲಿ ಇದೊಂದು ಮುಖ್ಯವಾದ ಮತ್ತು ನೈಜ ವಿದ್ಯಮಾನವೂ ಹೌದು. ವೈದ್ಯಕೀಯ ತುರ್ತು ಪರಿಸ್ಥಿತಿ–ಸಂದರ್ಭಗಳಲ್ಲಿ ತಮ್ಮ ಮಕ್ಕಳ ಚಿಕಿತ್ಸೆಗಾಗಿ ದೆಹಲಿಗೆ ಬರುವ ಉತ್ತರ ಭಾರತದ ರೈತರು, ಕಿಕ್ಕಿರಿದ ಸರ್ಕಾರಿ ಆಸ್ಪತ್ರೆಗಳಲ್ಲಿ ತಮ್ಮ ಸರದಿಗಾಗಿ ಕಾಯುತ್ತಾ ಕೂರುವುದು ಸಾಧ್ಯವಾಗದಿರುವುದರಿಂದ ಖಾಸಗಿ ಆಸ್ಪತ್ರೆಗಳಿಗೆ ಹೋಗುವ ಅನಿವಾರ್ಯತೆ ಉಂಟಾಗುತ್ತದೆ; ಈ ಆಸ್ಪತ್ರೆಗಳ ವೆಚ್ಚಗಳಿಗಾಗಿ ಅವರು ಸಾಲ ತೆಗೆದುಕೊಳ್ಳಬೇಕಾಗುತ್ತದೆ ಅಥವಾ ತಮ್ಮ ಭೂಮಿಯನ್ನು ಮಾರಾಟ ಮಾಡಬೇಕಾಗುತ್ತದೆ. ಇಂಥಹ ಸಂದರ್ಭ–ಪರಿಸ್ಥಿತಿಗಳಲ್ಲಿ ಬಹುತೇಕ ಮಂದಿ ತಮ್ಮ ಭೂಮಿಯನ್ನು ಮಾತ್ರವಲ್ಲ, ತಮ್ಮ ಕಂದಮ್ಮಗಳನ್ನೂ ಸಹ ಕಳೆದುಕೊಳ್ಳುತ್ತಾರೆ ಎಂಬ ಹೃದಯ ವಿದ್ರಾವಕ ವರದಿಗಳು ಪತ್ರಿಕೆಗಳಲ್ಲಿ ಬಂದಿವೆ.

ಖಾಸಗಿ ವೆಚ್ಚಗಳ ಅಸಮಾನತೆಗಳ ಇಳಿಕೆಯು ಒಂದು ವೇಳೆ ನಿಜವೇ ಆಗಿದ್ದರೂ ಸಹ, ಈ ಇಳಿಕೆಯ ತಳದಲ್ಲಿ ಅಗತ್ಯ ಸೇವೆಗಳ ಖಾಸಗೀಕರಣದಿಂದಾಗಿ ಕೈಗೊಳ್ಳಲೇಬೇಕಾದ ದುಬಾರಿ ಖರ್ಚುಗಳಿಂದ ಬಳಲುತ್ತಿರುವ ಜನರ ಅಪಾರ ಸಂಕಟವಿದೆ. ಆದ್ದರಿಂದ, ಈ ಖಾಸಗಿ ವೆಚ್ಚಗಳ ಅಸಮಾನತೆಗಳ ಇಳಿಕೆಯ ಬಗ್ಗೆ ಸರ್ಕಾರವು ಏನೋ ಒಂದು ದಿಗ್ವಿಜಯ ಸಾಧಿಸಿದಂತೆ ಹೆಮ್ಮೆಪಡುವುದು ನಿರ್ದಯತೆಯ ಪರಮಾವಧಿಯಾಗುತ್ತದೆ.

ಪುಟ 0ಕ್ಕೆ

ಡೊನೇಷನ್ ಮಾಫಿಯಾಗೆ ಕಡಿವಾಣ ಯಾಕಿಲ್ಲ!

ಖಾಸಗಿ ಶಾಲೆಗಳಲ್ಲಿ ಡೊನೇಷನ್ ಹಾವಳಿ ಎಗ್ಗಿಲ್ಲದೆ ನಡೆಯುತ್ತಿದೆ. ಖಾಸಗಿ ಶಾಲೆಗಳು ಶಿಕ್ಷಣ ಕೇಂದ್ರಗಳಾಗಿರದೆ, ಅವು ಮಾರುಕಟ್ಟೆ ಕೇಂದ್ರಗಳಾಗಿವೆ. ಡೊನೇಷನ್ ಹೆಸರಲ್ಲಿ ಪಾಲಕರನ್ನು ಹಿಂಡಿ ಹಿಪ್ಪೆ ಮಾಡುತ್ತಿವೆ. ಪ್ರತಿಯೊಂದು ಶಾಲೆಯೂ ತನ್ನ ಅಂತರ್ಜಾಲ ತಾಣ, ಶಾಲಾ ನೋಟಿಸ್ ಬೋರ್ಡ್ ಹಾಗೂ ಎಸ್‌ಎಟಿಎಸ್ ಇಲಾಖಾ ಅಂತರ್ಜಾಲ ತಾಣಗಳಲ್ಲಿ ಪೋಷಕರು ಮತ್ತು ಸಾರ್ವಜನಿಕರಿಗೆ ಶುಲ್ಕದ ಬಗ್ಗೆ ಮಾಹಿತಿ ಲಭ್ಯವಾಗುವಂತೆ ಪ್ರಕಟಿಸಬೇಕು. ಇದರಿಂದ ಪಾಲಕರು ಮತ್ತು ಸಾರ್ವಜನಿಕರಿಗೆ ಪ್ರವೇಶ ಶುಲ್ಕದ ಬಗ್ಗೆ ಮಾಹಿತಿ ಲಭ್ಯವಾಗುತ್ತದೆ. ಆದರೆ ಯಾವೊಂದು ಖಾಸಗಿ ಶಿಕ್ಷಣ ಸಂಸ್ಥೆಗಳು ಈ ನಿಯಮವನ್ನು ಜಾರಿ ಮಾಡುವುದಿಲ್ಲ. ಇದು ಗೊತ್ತಿದ್ದೂ ಸರ್ಕಾರ ಪದೇ ಪದೇ ನಿದ್ರೆಗೆ ಜಾರುತ್ತಿದೆ. ವಸೂಲಿ ಹಾವಳಿಗೆ ನಿಯಂತ್ರಣ ಸಾಧ್ಯವಿಲ್ಲವೆ? ಇದಕ್ಕೊಂದು ದಾರಿಯೂ ಇದೆ.

ಗುರುರಾಜ ದೇಸಾಯಿ

ಶೈಕ್ಷಣಿಕ ವರ್ಷ ಆರಂಭವಾಗಿದೆ. ಖಾಸಗಿ ಶಾಲೆಗಳಲ್ಲಿ ಡೊನೇಷನ್ ಹಾವಳಿ ಎಗ್ಗಿಲ್ಲದೆ ನಡೆಯುತ್ತಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಬಂದ ತಕ್ಷಣವೇ ಅಲ್ಲಲ್ಲಿ ಫ್ಲೆಕ್ಸ್‌ಗಳು ಆರ್ಭಟಿಸುತ್ತವೆ. ಫ್ಲೆಕ್ಸ್ ಭರಾಟೆಗೆ ಪೋಷಕರಲ್ಲಿ ತಮ್ಮ ಮಕ್ಕಳನ್ನು ಯಾವ ಶಾಲೆಗೆ ಸೇರಿಸಿಕೊಳ್ಳಬೇಕು ಎಂಬ ಪೈಪೋಟಿಯ ಮಾತುಗಳು ಕೇಳಿ ಬರುತ್ತವೆ. ಖಾಸಗಿ ಶಾಲೆಗಳು ಇಷ್ಟಕ್ಕೇ ಸುಮ್ಮನಿರುವುದಿಲ್ಲ, ಈ ಶಾಲಾ ಶಿಕ್ಷಕರು ಮನೆಮನೆಗೆ ಭೇಟಿ ಮಾಡಿ, ಮಕ್ಕಳನ್ನು ಶಾಲೆಗೆ ಅಡ್ಮೀಶನ್ ಮಾಡಿಸುವಂತೆ ಕರಪತ್ರ ಕೂಡಾ ಹಂಚಿ ಇನ್ನಷ್ಟು ಗೊಂದಲಕ್ಕೆ ಸಿಲುಕಿಸುತ್ತಾರೆ. ಪೋಷಕರಿಗೆ ಇಲ್ಲಿಂದಲೇ ಗೊಂದಲ ಆರಂಭವಾಗುತ್ತದೆ. ನನ್ನ ಮಗು ಯಾವ ಶಾಲೆಗೆ ಹೋಗಬೇಕು? ಯಾವ ಶಾಲೆ ಸಿಬಿಎಸ್‌ಸಿ, ಯಾವ ಶಾಲೆ ಐಸಿಎಸ್‌ಸಿ, ಸ್ಮಾರ್ಟ್ ಕ್ಲಾಸ್ ಸೌಲಭ್ಯ ಇದೆಯಾ? ಆ ಶಾಲೆಯಲ್ಲಿ ಡೊನೇಶನ್ ಜಾಸ್ತಿಯಂತೆ, ಡೊನೇಶನ್ ಜಾಸ್ತಿ ತೊಗೊಳ್ತಾರೆ ಅಂದ್ರೆ ಆ ಶಾಲೆ ಸೂಪರ್ ಆಗಿರುತ್ತೆ... ಅಂತೆಲ್ಲ ರಾತ್ರಿಯೆಲ್ಲ ಯೋಚಿಸಿ, ವಿಚಾರಿಸಿ ಅಡ್ಮೀಶನ್‌ಗೆ ರೆಡಿಯಾಗ್ತಾರೆ. ಖಾಸಗಿ ಶಾಲೆಗಳಿಗೆ ಬೇಕಿರುವುದು ಕೂಡಾ ಇದೆ! ಪೋಷಕರನ್ನು ನೈಸ್ ಮಾಡ್ತಾ ಮನಸೋ ಇಚ್ಛೇ ಡೊನೇಷನ್ ಪಡೆಯುತ್ತಾರೆ.

ಲೇಖನ ಸಾಮಗ್ರಿಗಳ ಮಾರಾಟಕ್ಕೆ ಇಳಿದಿವೆ

ಎಲ್‌ಕೆಜಿಗೆ 40 ಸಾವಿರ, ಯುಕೆಜಿಗೆ 50 ಸಾವಿರ, 8ನೇ ತರಗತಿಗೆ 75 ಸಾವಿರ, ಪಿಯುಸಿಗೆ 1 ಲಕ್ಷ. ಸಿಇಟಿ ಕೋಚಿಂಗ್ ನಾವೇ ಕೊಡ್ತೇವೆ, ಹಾಸ್ಟಲ್ ವ್ಯವಸ್ಥೆ ಇದೆ ಅಂತಾ ಅದಕ್ಕೊಂದು ಲಕ್ಷ... ಹೀಗೆ ಸಾವಿರದಿಂದ ಆರಂಭವಾಗಿ ಲಕ್ಷಕ್ಕೆ ಬಂದು ನಿಲ್ಲುತ್ತದೆ. ಕೆಲ ಖಾಸಗಿ ಶಾಲೆಗಳಲ್ಲಿ ಮಗು ಹುಟ್ಟಿದ ತಕ್ಷಣವೇ ನೇಮಕಾತಿಗೆ ಅವಕಾಶ ನೀಡುತ್ತಿದ್ದಾರೆ ಎಂಬ ಮಾತುಗಳು ಸಹಾ ಕೇಳಿ ಬರುತ್ತಿವೆ. ಬಹುತೇಕ ಖಾಸಗಿ ಶಾಲಾ–ಕಾಲೇಜುಗಳು ಲೇಖನ ಸಾಮಗ್ರಿಗಳ ಮಾರಾಟಕ್ಕೆ ಇಳಿದಿವೆ. ವ್ಯಾಪಾರಸ್ಥರೊಂದಿಗೆ ಒಪ್ಪಂದ ಮಾಡಿಕೊಂಡು ಪ್ರವೇಶದ ಸಂದರ್ಭದಲ್ಲೇ ಒದಗಿಸುವುದನ್ನು ರೂಢಿಸಿಕೊಂಡಿವೆ. ನೋಟ್ ಪುಸ್ತಕ, ಬೈಂಡ್ ಕಾಗದ, ಬಣ್ಣದ ಪೆನ್ಸಿಲ್, ನಕ್ಷೆ, ಎರಡು ಜೊತೆ ಬಟ್ಟೆ, ಶೂ, ಸಾಕ್ಸ್ ಸೇರಿದಂತೆ ಬಹಳಷ್ಟು ವಸ್ತುಗಳನ್ನು ಹಣಪಾವತಿಸಿ ಶಾಲೆಯಲ್ಲೇ ಅವುಗಳನ್ನು ಖರೀದಿಸುವಂತೆ ಪೋಷಕರ ಮೇಲೆ ಒತ್ತಡ ಹೇರಲಾಗುತ್ತಿದೆ. ಮಾರುಕಟ್ಟೆಗಿಂತ ಹೆಚ್ಚಿನ ದರಗಳಲ್ಲಿ ಇವುಗಳನ್ನು ಮಾರಲಾಗುತ್ತಿದ್ದು, ಪೋಷಕರ ಜೇಬಿಗೆ ಕತ್ತರಿ ಬೀಳುತ್ತಿದೆ. ಈ ರೀತಿ ಶಾಲೆಗಳಲ್ಲಿ ಮಾರಾಟ ಮಾಡಬಾರದು ಎಂದು ಹಲವು ಬೋರ್ಡ್‌ಗಳು ಹೇಳುತ್ತಲೇ ಬಂದಿವೆ.

ಖಾಸಗಿ ಶಾಲೆಗಳ ಶುಲ್ಕ ನಿಗದಿ ಹೇಗೆ?

ಯಾವ ಶಾಲೆ ಎಷ್ಟು ಹಣ ಪಡೆಯಬೇಕು ಎಂಬ ಲೆಕ್ಕಾಚಾರದ ನಿಯಮ ಇದೆ. ಇದನ್ನು ಕ್ಷೇತ್ರ ಶಿಕ್ಷಣಾಧಿಕಾರಿ (ಬಿಇಒ) ನಿರ್ಧರಿಸುತ್ತಾರೆ. ವಿದ್ಯಾರ್ಥಿಗಳ ಸಂಖ್ಯೆ, ಸಿಬ್ಬಂದಿಗಳ ವೇತನ, ಇತರೆ ಖರ್ಚು ವೆಚ್ಚ, ಹೀಗೆ ಎಲ್ಲವನ್ನೂ ಲೆಕ್ಕ ಹಾಕಿ ಶುಲ್ಕ ನಿಗದಿಮಾಡುತ್ತಾರೆ. ಇನ್ನಷ್ಟು ಸರಳವಾಗಿ ವಿವರಿಸುವುದಾದರೆ, 500 ಜನ ವಿದ್ಯಾರ್ಥಿಗಳಿರುವ ಒಂದು ಶಾಲೆಯಲ್ಲಿ, 20 ಜನ ಸಿಬ್ಬಂದಿಗಳಿರುತ್ತಾರೆ. ಸರಾಸರಿ ಒಬ್ಬರಿಗೆ 15 ಸಾವಿರ ರೂ ವೇತನದಂತೆ ಲೆಕ್ಕ ಹಾಕಿದರೆ ವಾರ್ಷಿಕವಾಗಿ 36 ಲಕ್ಷ ರೂ.ಗಳು ಸಿಬ್ಬಂದಿಗಳ ವೇತನಕ್ಕೆ ಹೋಗುತ್ತದೆ. ಶಾಲೆಯ ಇನ್ನಿತರೆ ಖರ್ಚು 10 ಲಕ್ಷ ರೂ ಎಂದಿಟ್ಟುಕೊಳ್ಳಿ. ಒಟ್ಟು ಒಂದು ವರ್ಷಕ್ಕೆ ಆ ಶಾಲೆಯ ಖರ್ಚು 46 ಲಕ್ಷ ರೂ ಆಗುತ್ತದೆ, ಅಥವಾ 50 ಲಕ್ಷ ಅಂತಲೇ ಇಟ್ಟುಕೊಳ್ಳಿ. ಇದನ್ನು 500 ವಿದ್ಯಾರ್ಥಿಗಳಿಂದ ಭಾಗಿಸಿದಾಗ ಸಿಗುವ ಉತ್ತರವೇ ಆ ಶಾಲೆಯಲ್ಲಿ ಮಗುವಿಗೆ ಕಟ್ಟಬೇಕಾದ ಶುಲ್ಕ. ಅಂದರೆ 10 ಸಾವಿರ ರೂಪಾಯಿಯನ್ನು ಶಿಕ್ಷಣ ಇಲಾಖೆ ನಿಗದಿ ಪಡಿಸಿರುತ್ತದೆ. ಇದನ್ನು 15 ಸಾವಿರ ಅಂತಲೇ ಇಟ್ಟುಕೊಳ್ಳಿ. ಈಗ ಯೋಚಿಸಿ, ನೀವೆಷ್ಟು ಫೀಸ್ ಕೊಟ್ಟಿದ್ದೀರಿ, ನಿಮ್ಮಿಂದ ಆ ಖಾಸಗಿ ಶಾಲೆ ಎಷ್ಟು ವಸೂಲು ಮಾಡಿದೆ ಎಂದು.



ಪ್ರವೇಶ ಶುಲ್ಕ ಕುರಿತು ಸ್ಪಷ್ಟ ಮಾಹಿತಿ ಪ್ರದರ್ಶಿಸಬೇಕು

ಪಾಲಕರು ಹಾಗೂ ಸಾರ್ವಜನಿಕರ ಮಾಹಿತಿಗಾಗಿ ಪ್ರತಿಯೊಂದು ಶಾಲೆಯು ತನ್ನ ಸೂಚನಾ ಫಲಕದಲ್ಲಿ ಪ್ರವೇಶ ಶುಲ್ಕ ಕುರಿತು ಸ್ಪಷ್ಟ ಮಾಹಿತಿಯನ್ನು ಪ್ರದರ್ಶಿಸಬೇಕು. ಶಿಕ್ಷಣ ಹಕ್ಕು ಕಾಯಿದೆ 2009ರ ಸೆಕ್ಷನ್ (2) ಬಿ ನಂತೆ ಎಲ್ಲಾ ಖಾಸಗಿ ಶಾಲೆಗಳು ತಾವು ಅಧಿಸೂಚಿಸಿರುವ ಶುಲ್ಕವನ್ನು ಶಾಲೆಯ ಅಧಿಕೃತ ಅಂತರ್ಜಾಲ ತಾಣ, ಶಾಲಾ ನೋಟಿಸ್ ಬೋರ್ಡ್ ಹಾಗೂ ಎಸ್‌ಎಟಿಎಸ್ ಇಲಾಖಾ ಅಂತರ್ಜಾಲ ತಾಣಗಳಲ್ಲಿ ಪೋಷಕರು ಮತ್ತು ಸಾರ್ವಜನಿಕರಿಗೆ ಶುಲ್ಕದ ಬಗ್ಗೆ ಮಾಹಿತಿ ಲಭ್ಯವಾಗುವಂತೆ ಪ್ರಕಟಿಸಬೇಕು. ಇದರಿಂದ ಪಾಲಕರು ಮತ್ತು ಸಾರ್ವಜನಿಕರಿಗೆ ಪ್ರವೇಶ ಶುಲ್ಕದ ಬಗ್ಗೆ ಮಾಹಿತಿ ಲಭ್ಯವಾಗುತ್ತದೆ. ಆದರೆ ಯಾವೊಂದು ಖಾಸಗಿ ಶಿಕ್ಷಣ ಸಂಸ್ಥೆಗಳು ಈ ನಿಯಮವನ್ನು ಜಾರಿ ಮಾಡುವುದಿಲ್ಲ.

ವಸೂಲಿ ನಿಯಂತ್ರಣ ಸಾಧ್ಯವಿಲ್ಲವೆ?

'ಅಯ್ಯೊ, ಇಷ್ಟೊಂದು ಫೀಸ್ ಕಟ್ಟಿಬಿಟ್ವಲ್ಲ' ಅಂತ ಕೈ ಕೈ ಹಿಸುಕಿಕೊಳ್ತಾ ಇದ್ದೀರಾ? ಇದಕ್ಕೊಂದು ದಾರಿ ಇದೆ. ಆ ಖಾಸಗಿ ಶಾಲೆಯ ಮೇಲೆ ನೀವು ದ´ ೂ ರ´ ು ನೀಡಬಹುದು! ಅದು ಹೇಗೆ ಅಂತೀರಾ? ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಶಿಕ್ಷಣ ರೆಗ್ಯುಲೇಟಿಂಗ್ ಪ್ರಾಧಿಕಾರ ಎಂದು ಇದೆ. ಇಂಗ್ಲೀಷ್‌ನಲ್ಲಿ ಅದನ್ನು DISTRICT EDUCATION REGULATING AUTHORITY ಎಂದು ಕರೆಯುತ್ತಾರೆ. ಸಂಕ್ಷಿಪ್ತವಾಗಿ 'ಡೇರಾ' ಎಂದು ಕರೆಯುತ್ತಾರೆ. ಈ ಡೇರಾದ ಕೆಲಸ ಏನು ಅಂದ್ರೆ, ಖಾಸಗಿ ಶಾಲೆಗಳನ್ನು ನಿಯಂತ್ರಣ ಮಾಡುವುದು. ಈ ಕಾಯ್ದೆ ಇಂದು ನಿನ್ನೆ ಜಾರಿಯಾದುದ್ದಲ್ಲ, ತುಂಬಾ ವರ್ಷದಿಂದ ಜಾರಿಯಲ್ಲಿದೆ. ಇಂತಹದೊಂದು ಸಮಿತಿ ಇದೆ ಎನ್ನುವಂತದ್ದು ಜಿಲ್ಲಾಧಿಕಾರಿಗಳಿಗೆ ಗೊತ್ತಿಲ್ಲ ಅನಿಸುವಷ್ಟರ ಮಟ್ಟಿಗೆ ಈ ಕಾಯ್ದೆ ಇದೆ. ಹಾಗಾಗಿ ಇದಕ್ಕೆ ದೂರು ಬರೋದು ದೂರದ ಮಾತು ಅಂತಾ ಹೇಳಿದ್ರೂ ತಪ್ಪಾಗಲಿಕ್ಕಿಲ್ಲ.

ಪೋಷಕರೆ ಶಾಲೆಯ ವಿರುದ್ಧ ದೂರು ನೀಡಬೇಕು. ಆದರೆ...

ಈ ಕಾಯ್ದೆ ಹಲ್ಲುಕಿತ್ತ ಹಾವಿನಂತಾಗೋದಕ್ಕೆ ಕಾರಣವೂ ಇದೆ. ಖಾಸಗಿ ಶಾಲೆ ನಿಗದಿಪಡಿಸಿದ ಶುಲ್ಕಕ್ಕಿಂತ ಹೆಚ್ಚುವರಿ ಹಣ ಪಡೆಯುತ್ತಿದೆ ಎಂದು ಪೋಷಕರೆ ಶಾಲೆಯ ವಿರುದ್ಧ ದೂರು ನೀಡಬೇಕು. ಯಾವ ಪೋಷಕರೂ ದೂರು ಕೊಡೋದಕ್ಕೆ ಧೈರ್ಯ ಮಾಡುವುದಿಲ್ಲ. ಯಾಕೆಂದ್ರೆ, ಅವರ ಮಕ್ಕಳ ಶಿಕ್ಷಣದ ಭವಿಷ್ಯದಿಂದ ಅವರು ಹಿಂಜರಿಯುತ್ತಾರೆ. ಮಗುವನ್ನು ಟಾರ್ಗೇಟ್ ಮಾಡಿಬಿಟ್ರೆ ಹೇಗೆ ಎಂಬ ಭಯದಿಂದ ಅವರು ದೂರು ಕೊಡಲು ಮುಂದೆ ಬರುವುದಿಲ್ಲ. ಹೀಗಿದ್ದಾಗ ಡೇರಾ ಸಮಿತಿ ಕ್ರಿಯಾಶೀಲವಾಗಿ ಕೆಲಸ ಮಾಡಬೇಕು, ಅದು ಮೂರು ತಿಂಗಳಿಗೊಮ್ಮೆ ಸಭೆ ಸೇರಬೇಕು. ಮುಖ್ಯವಾಗಿ ಪೋಷಕರು ದೂರು ನೀಡುವಂತೆ ಮಾಡಲು ಅವರಲ್ಲಿ ಜಾಗೃತಿ ಮೂಡಿಸಿ, ಗೌಪ್ಯತೆಯನ್ನು ಕಾಪಾಡುವ ಮೂಲಕ ಅವರನ್ನು ಪ್ರೋತ್ಸಾಹಿಸಬೇಕು. ಖಾಸಗಿ ಶಾಲೆಗಳ ಅಕೌಂಟ್ ಪರಿಶೀಲನೆ ಮಾಡಿದ್ರೆ ಯಾವ ಶಾಲೆ ಎಷ್ಟು ಹಣ ಪಡೆದಿದೆ ಎಂಬ ಲೆಕ್ಕಾಚಾರ ಸಿಕ್ಕಿಬಿಡುತ್ತೆ. ಈ ಡೇರಾ ಸಮಿತಿ ಕ್ರಿಯಾಶೀಲವಾಗಿ ಕೆಲಸ ಮಾಡಬೇಕು, ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಬೇಕು ಎಂದು ವಿದ್ಯಾರ್ಥಿ ಪೋಷಕರ ಸಂಘಟನೆಗಳು ಪ್ರತಿಭಟನೆ ನಡೆಸುತ್ತಲೇ ಇವೆ, ಶಿಕ್ಷಣ ತಜ್ಞರು ಇದರ ಅಪಾಯಗಳನ್ನು ಎಚ್ಚರಿಸುತ್ತಲೇ ಬಂದಿದ್ದಾರೆ. ಸರಕಾರ ಎಚ್ಚೆತ್ತು ಹಣ ಪೀಕುವ ಸಂಸ್ಥೆಗಳ ವಿರುದ್ಧ ಕ್ರಮಕೈಗೊಳ್ಳಬೇಕಿದೆ. ಸಾರ್ವತ್ರಿಕ ಶಿಕ್ಷಣವನ್ನು ಬಲಪಡಿಸಿ, ಸಮಾನ ಗುಣಮಟ್ಟದ ಶಿಕ್ಷಣ ನೀಡಿದ್ದರೆ ಇಂತಹ ವಸೂಲಿಗಳು ನಡೆಯುತ್ತಿರಲಿಲ್ಲ. ಆದರೆ ಸರಕಾರವೇ ಸರಕಾರಿ ಮತ್ತು ಖಾಸಗಿ ಶಾಲೆ ಎಂಬ ಎರಡು ಆಯ್ಕೆಯನ್ನು ನೀಡಿ ಪೋಷಕರನ್ನು ಗೊಂದಲಕ್ಕೆ ಸಿಲುಕಿಸಿದೆ. 224 ಶಾಸಕರಲ್ಲಿ ಬಹುತೇಕ ಶಾಸಕರು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಹಾಗಾಗಿ ಶಿಕ್ಷಣ ಕ್ಷೇತ್ರ ಮಾರಾಟದ ಸರಕಾಗಿ ಬಿಟ್ಟಿದೆ. ಇನ್ನಾದರೂ ಸರಕಾರ ಎಚ್ಚೆತ್ತು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವಂತಾಗಲಿ, ಅಲ್ಲಿಯವರೆಗೆ ಖಾಸಗಿ ಶಾಲೆಗಳನ್ನು ತನ್ನ ನಿಯತ್ರಣಕ್ಕೆ ತೆಗೆದುಕೊಳ್ಳಲಿ, ಆಗ ಡೊನೇಷನ್ ಎಂಬ ಮಾಫೀಯಾವನ್ನು ನಿಲ್ಲಿಸಲು ಸಾಧ್ಯ.

ಕಣ್ಣೇ... ಕರುಳೇ... ವೀಎಸ್ಸೇ... ಸಗಾವೇ ವೀಎಸ್ಸೇ...

ಜೀವ ಯಾನ ಪೂರ್ತಿ
ಜನಜೀವವೇ ಮಾನವಾಗಿಸಿದ ನಿನ್ನ
ನೂರು ವರ್ಷ ಮೀರಿದ ಪ್ರಚಂಡ ವಿಸ್ತಾರ
ನಮ್ಮ ಕಣ್ಣಳತೆಗೇನು ದಕ್ಕೀತು ?
ಸಮುದ್ರದಾಳ, ಆಗಸದ ವಿಸ್ಮಯ ನೀ ನಮಗೆ!

ಯೋಧನೂ
ಶತಮಾನಗಳ ಅರಿವು ಹೊತ್ತ ದೂತನೂ
ಅಗುಳು ಅನ್ನದ ರಕ್ಷಕನೂ
ಸಮರ ಸೇನಾನಿಯೂ ನೀ....
–ನೀ ನಮ್ಮೊಳಗಿನ ಜೀವಜಲ
ನರ ನಾಡಿಯ ರೋಷ!

ಯಜಮಾನರ ಗೂಂಡಾಗಳು ನಿನ್ನ ಸಾಯಿಸಿ
ಎಸೆದರು, ಸತ್ತು ಹುಟ್ಟಿದೆಯಪ್ಪ ನೀನು..
ಅದ್ಹೇಗೆ ಮರೆಯುವುದು,
ಹುಟ್ಟುತ್ತಲೇ ಸಾಯುವವರ ಉಸಿರುಳಿಸಿದ್ದೂ
ನಿನ್ನದೇ ತ್ಯಾಗ!

ಮದವೇರಿದವರ ಗರ್ವ
ನಿನ್ನೂರಲ್ಲಾದರೂ ಸಾಯುವತನಕ
ವಿರಮಿಸಲಾರದಾದೆಯಲ್ಲ!
ಎಷ್ಟೆಂದರೂ ಆ
ಪುನ್ನಪ್ರವಯಲಾರ ಇತಿಹಾಸವೆಂಬುದು
ಪನ್ನೆಯಷ್ಟೇ ಅಲ್ಲ ನಿನಗೆ,
ಆಕಾಶದೆತ್ತರದ ನಿನ್ನ ನಡಾವಳಿಯ ಬೇರುಬುಡ,
ನಿನ್ನ ರಟ್ಟೆಯ ಶಕ್ತಿ, ಮುಷ್ಟಿಕಟ್ಟಿ ಬಿಗಿದಿಟ್ಟ ಬಲ!
ಈಗಷ್ಟೇ ನಮಗೂ ರವಾನಿಸಿ ಹೋದೆಯಲ್ಲ
ತಡ ರಾತ್ರಿಯೂ ಮಧ್ಯರಾತ್ರಿಯೂ
ಬಿರುಬಿಸಿಲಲ್ಲೂ ಮಳೆಮಾರುತದಲ್ಲೂ
ಎಲ್ಲೆಲ್ಲೂ
ಕಣ್ಣೇ... ಕರುಳೇ... ವೀಎಸ್ಸೇ... ಸಗಾವೇ
ವೀಎಸ್ಸೇ...

ಯಮುನಾ ಗಾಂವ್ಕರ್

ವಿಎಸ್ ಅಚ್ಯುತಾನಂದನ್ ಅವರ ಜೀವನ, ಇತಿಹಾಸದಲ್ಲಿ ಒಂದು ಗಮನಾರ್ಹ ಅಧ್ಯಾಯ: ಪಿಣರಾಯಿ ವಿಜಯನ್



ಕೇರಳದ ಇತಿಹಾಸದಲ್ಲಿ ಮತ್ತು ವಿಶೇಷವಾಗಿ ಇಲ್ಲಿನ ಕ್ರಾಂತಿಕಾರಿ ಚಳವಳಿಯಲ್ಲಿ ಕಾಮ್ರೇಡ್ ವಿ.ಎಸ್. ಅಚ್ಯುತಾನಂದನ್ ಅವರ ಜೀವನವು ಒಂದು ಗಮನಾರ್ಹ ಅಧ್ಯಾಯವಾಗಿದೆ. ಕಾಮ್ರೇಡ್ ವಿ.ಎಸ್. ಅವರು ರೋಮಾಂಚಕ ಹೋರಾಟದ ಸಂಪ್ರದಾಯ, ಅಸಾಧಾರಣ ದೃಢನಿಶ್ಚಯ ಮತ್ತು ರಾಜಿಯಾಗದ ಹೋರಾಟದ ನಿಲುವಿನ ಸಂಕೇತವಾಗಿದ್ದರು. ಜನರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುವ ಮೂಲಕ ಜನರೊಂದಿಗೆ ನಿಂತ ಅವರ ಶತಮಾನಗಳ ಜೀವನವು ಕೇರಳದ ಆಧುನಿಕ ಇತಿಹಾಸದೊಂದಿಗೆ ಬೇರ್ಪಡಿಸಲಾಗದಂತೆ ಹೆಣೆದುಕೊಂಡಿದೆ. ಕೇರಳ ಸರ್ಕಾರ, ಸಿಪಿಐ(ಎಂ), ಎಡ ಪ್ರಜಾಸತ್ತಾತ್ಮಕ ರಂಗವನ್ನು ವಿವಿಧ ಹಂತಗಳಲ್ಲಿ ಮುನ್ನಡೆಸಿದ ವಿ.ಎಸ್. ಅವರ ಕೊಡುಗೆಗಳು ಸಾಟಿಯಿಲ್ಲದವು. ಅವರು ಕೇರಳದ ರಾಜಕೀಯ ಬಾಳಿಕೆಯ ಭಾಗವಾಗಿದ್ದಾರೆ ಎಂದು ಇತಿಹಾಸವು ದಾಖಲಿಸುತ್ತದೆ.

ವಿಎಸ್ ಅವರ ನಿಧನವು ಒಂದು ಯುಗದ ಅಂತ್ಯವನ್ನು ಸೂಚಿಸುತ್ತದೆ. ಪಕ್ಷ, ಕ್ರಾಂತಿಕಾರಿ ಚಳುವಳಿ ಮತ್ತು ಇಡೀ ಪ್ರಜಾಸತ್ತಾತ್ಮಕ ಪ್ರಗತಿಪರ ಚಳುವಳಿಗೆ ಇದು ಒಂದು ದೊಡ್ಡ ನಷ್ಟ. ಸಾಮೂಹಿಕ ನಾಯಕತ್ವದ ಮೂಲಕ ಮಾತ್ರ ಪಕ್ಷವು ಆ ನಷ್ಟವನ್ನು ತುಂಬಬಲ್ಲದು. ದೀರ್ಘಕಾಲ ಒಟ್ಟಿಗೆ ಕೆಲಸ ಮಾಡಿದ ಅನೇಕ ನೆನಪುಗಳು ನನ್ನ ಮನಸ್ಸಿನಲ್ಲಿ ಎದ್ದು ಕಾಣುವ ಸಮಯ ಇದು.

ಕ್ರಾಂತಿಕಾರಿ ಚಳುವಳಿಯಲ್ಲಿ ಅಸಾಧಾರಣ ಶಕ್ತಿ ಮತ್ತು ಬದುಕುಳಿಯುವ ಶಕ್ತಿಯಿಂದ ಗುರುತಿಸಲ್ಪಟ್ಟ ಘಟನಾತ್ಮಕ ಜೀವನವನ್ನು ವಿಎಸ್ ಹೊಂದಿದ್ದರು. ವಿಎಸ್ ಅಚ್ಯುತಾನಂದನ್ ಅವರ ಜೀವನವು ಕೇರಳ ಮತ್ತು ಕಮ್ಯುನಿಸ್ಟ್ ಪಕ್ಷದ ಇತಿಹಾಸದಲ್ಲಿ ಹೋರಾಟದಿಂದ ತುಂಬಿದ ಅಧ್ಯಾಯವಾಗಿದೆ. ಕಾರ್ಮಿಕರು ಮತ್ತು ರೈತರ ಚಳುವಳಿಗಳನ್ನು ಸಂಘಟಿಸುವ ಮೂಲಕ ಚಳುವಳಿಯೊಂದಿಗೆ ಬೆಳೆದ ಒಡನಾಡಿಯ ರಾಜಕೀಯ ಜೀವನವು ಊಳಿಗಮಾನ್ಯ ಪದ್ಧತಿ ಮತ್ತು ಜಾತಿಪದ್ಧತಿಯು ಧ್ವಜಧಾರಿಗಳಾಗಿದ್ದ ಕರಾಳ ಕಾಲವನ್ನು ಸರಿಪಡಿಸುವ ಹೋರಾಟಗಳ ಮೂಲಕ ಹೊರಹೊಮ್ಮಿತು. ಅವರು ಕಮ್ಯುನಿಸ್ಟ್ ಚಳುವಳಿಯ ಬೆಳವಣಿಗೆಯ ಹಂತಗಳ ಮೂಲಕ ಕೇರಳದ ಮುಖ್ಯಮಂತ್ರಿ ಸ್ಥಾನಕ್ಕೆ ಏರಿದರು.

32 ಸದಸ್ಯರಲ್ಲಿ ಬದುಕುಳಿದಿದ್ದ ಕೊನೆಯ ಕೊಂಡಿ

1964 ರಲ್ಲಿ ಕಮ್ಯುನಿಸ್ಟ್ ಪಕ್ಷ ವಿಭಜನೆಯಾದಾಗ ರಾಷ್ಟ್ರೀಯ ಮಂಡಳಿಯಿಂದ ಹೊರಬಂದ 32 ಸದಸ್ಯರಲ್ಲಿ ಬದುಕುಳಿದಿದ್ದ ಕೊನೆಯ ಕೊಂಡಿ ವಿಎಸ್ ಅವರ ನಿಧನದೊಂದಿಗೆ ಬೇರ್ಪಟ್ಟಿತು. ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟವನ್ನು ಸಮಕಾಲೀನ ರಾಜಕೀಯದೊಂದಿಗೆ ಸಂಪರ್ಕಿಸಿದ್ದ ಅಮೂಲ್ಯವಾದ ರಾಜಕೀಯ ಉಪಸ್ಥಿತಿಯು ನಿಧನರಾದರು.

ಕಮ್ಯುನಿಸ್ಟ್ ನಾಯಕರಾಗಿ, ಶಾಸಕಾಂಗ ಸಭೆಯ ಸದಸ್ಯರಾಗಿ, ವಿರೋಧ ಪಕ್ಷದ ನಾಯಕರಾಗಿ, ಮುಖ್ಯಮಂತ್ರಿಯಾಗಿ ವಿಎಸ್ ನೀಡಿದ ಕೊಡುಗೆಗಳು ಹಲವಾರು. ಪುನ್ನಪ್ರ-ವಯಲಾರ್‌ಗೆ ಸಮಾನಾರ್ಥಕವಾದ ಸಂಗಾತಿ. ನೋವು, ಸಹಿಷ್ಣುತೆ ಮತ್ತು ಬದುಕುಳಿಯುವಿಕೆಯ ಜೀವನದ ಮೂಲಕ ಬೆಳೆದರು.

ಕೂಲಿ ಗುಲಾಮಗಿರಿ ಮತ್ತು ಜಾತಿ ಗುಲಾಮಗಿರಿ ವಿರುದ್ಧ :

ಒಬ್ಬ ಕಾರ್ಮಿಕನಿಂದ, ಬಹು ಬೇಗನೆ ಬೆಳೆದು ವಿ.ಎಸ್. ಕಾರ್ಮಿಕ ವರ್ಗದ ಚಳವಳಿಯ ಪ್ರಬಲ ನಾಯಕರಾದರು. ಪಕ್ಷವು ವಿಎಸ್ ಅವರನ್ನು ಮತ್ತು ವಿಎಸ್ ಅವರು ಪಕ್ಷವನ್ನು ಬೆಳೆಸಿದರು. ಅವರು 1940ರಲ್ಲಿ, 17ನೇ ವಯಸ್ಸಿನಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಸೇರಿದರು ಮತ್ತು 85 ವರ್ಷಗಳ ಕಾಲ ಪಕ್ಷದ ಸದಸ್ಯರಾಗಿದ್ದರು. ಕುಟ್ಟನಾಡಿಗೆ ಹೋದ ಕಾಮ್ರೇಡ್ ವಿಎಸ್, ಕೃಷಿ ಕಾರ್ಮಿಕರು ಎದುರಿಸುತ್ತಿದ್ದ ಕೂಲಿ ಗುಲಾಮಗಿರಿ ಮತ್ತು ಜಾತಿ ಗುಲಾಮಗಿರಿಯನ್ನು ಕೊನೆಗೊಳಿಸಲು ಹೋರಾಟವನ್ನು ಮುನ್ನಡೆಸಿದರು. ಅವರು ಕುಟ್ಟನಾಡಿನ ಹಳ್ಳಿಗಳ ಮೂಲಕ ನಡೆದು, ಕೃಷಿ ಕಾರ್ಮಿಕರ ಸಭೆಗಳನ್ನು ಕರೆದರು ಮತ್ತು ಅವರನ್ನು ಸಂಘಟಿತ ಶಕ್ತಿಯಾಗಿ ಅಭಿವೃದ್ಧಿಪಡಿಸಿದರು. ಭೂಮಾಲೀಕರು ಮತ್ತು ಪೊಲೀಸರಿಗೆ ಸವಾಲು ಹಾಕುವ ಮೂಲಕ ಅವರು ಇದನ್ನು ಮಾಡಿದರು.

ತಿರುವಾಂಕೂರು ಕೃಷಿ ಕಾರ್ಮಿಕರ ಸಂಘದ ರಚನೆಯಲ್ಲಿ ಮತ್ತು ನಂತರ ಕೇರಳದ ಅತಿದೊಡ್ಡ ಕಾರ್ಮಿಕ ಚಳುವಳಿಗಳಲ್ಲಿ ಒಂದಾದ ಕೇರಳ ರಾಜ್ಯ ಕೃಷಿ ಕಾರ್ಮಿಕರ ಸಂಘವಾಗಿ ಬೆಳೆಯುವಲ್ಲಿ ವಿಎಸ್ ಅವರು ಪ್ರಮುಖ ಪಾತ್ರ ವಹಿಸಿದರು.

ವಿಎಸ್ ನೇತೃತ್ವದ ಅಸಂಖ್ಯಾತ ಹೋರಾಟಗಳು ಕುಟ್ಟನಾಡಿನ ಸಾಮಾಜಿಕ ಇತಿಹಾಸವನ್ನೇ ಬದಲಾಯಿಸಿದವು. ಉತ್ತಮ ವೇತನಕ್ಕಾಗಿ, ಚಪ್ಪಾ ಪದ್ಧತಿಯ ರದ್ದತಿಗಾಗಿ, ಉದ್ಯೋಗ ಸ್ಥಿರತೆಗಾಗಿ ಮತ್ತು ಹೆಚ್ಚುವರಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ನಡೆದ ಹೋರಾಟಗಳಲ್ಲಿ ಅವರು ಮುಂಚೋಣಿಯಲ್ಲಿದ್ದರು. ಕಾರ್ಮಿಕರಲ್ಲಿ ಆತ್ಮವಿಶ್ವಾಸ ಮತ್ತು ತಂಡ ಮನೋಭಾವವನ್ನು ತುಂಬಲು ಅವರು ಮಾಡಿದ ಪ್ರಯತ್ನಗಳು, ಹೊಲಗಳ ಸಾಲುಗಳಲ್ಲಿ ಕಿಲೋಮೀಟರ್‌ಗಳಷ್ಟು ನಡೆದು ಅವರ ಗುಡಿಸಲುಗಳಿಗೆ ಭೇಟಿ ನೀಡುವುದು, ಅವರೆಲ್ಲರನ್ನೂ ಚಳವಳಿಯತ್ತ ಆಕರ್ಷಿಸಿದವು. 1948ರಲ್ಲಿ ಪಕ್ಷವನ್ನು ನಿಷೇಧಿಸಿದ ನಂತರ ಅವರನ್ನು ಬಂಧಿಸಲಾಯಿತು.

1952ರಲ್ಲಿ, ಅವರು ಪಕ್ಷದ ಆಲಪ್ಪುಳ ವಿಭಾಗೀಯ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಈ ಮಧ್ಯೆ, ಅವರು ಅಖಂಡ ಕೇರಳಕ್ಕಾಗಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ನಡೆದ ಆಂದೋಲನಗಳಲ್ಲಿ ಸಕ್ರಿಯರಾಗಿದ್ದರು. 1957ರಲ್ಲಿ ಕಮ್ಯುನಿಸ್ಟ್ ಪಕ್ಷ ಅಧಿಕಾರಕ್ಕೆ ಬಂದಾಗ, ಅವರು ಪಕ್ಷದ ಆಲಪ್ಪುಳ ಜಿಲ್ಲಾ ಕಾರ್ಯದರ್ಶಿ ಮತ್ತು ರಾಜ್ಯ ಕಾರ್ಯದರ್ಶಿಯ ಸದಸ್ಯರಾದರು. 1959ರಲ್ಲಿ, ಅವರು ಪಕ್ಷದ ರಾಷ್ಟ್ರೀಯ ಮಂಡಳಿಯ ಸದಸ್ಯರಾದರು. ಹೆಚ್ಚುವರಿ ಭೂಮಿ ಹೋರಾಟ ಸೇರಿದಂತೆ ಅನೇಕ ಧೈರ್ಯಶಾಲಿ ಹೋರಾಟಗಳನ್ನು ವಿಎಸ್ ಮುನ್ನಡೆಸಿದರು.

ಐದೂವರೆ ವರ್ಷಗಳಿಗೂ ಹೆಚ್ಚು ಕಾಲ ಜೈಲುವಾಸ

ಅವರು ವಿವಿಧ ಸಮಯಗಳಲ್ಲಿ ಐದೂವರೆ ವರ್ಷಗಳಿಗೂ ಹೆಚ್ಚು ಕಾಲ ಜೈಲಿನಲ್ಲಿದ್ದರು. 1964 ರಿಂದ ಸಿಪಿಐ(ಎಂ) ಕೇಂದ್ರ ಸಮಿತಿಯ ಸದಸ್ಯರಾಗಿದ್ದರು. 1985ರಲ್ಲಿ ಅವರು ಪೊಲಿಟ್‌ಬ್ಯೂರೋ ಸದಸ್ಯರಾದರು. 1980ರಿಂದ 92 ರವರೆಗೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯಾಗಿ ಮತ್ತು 1996ರಿಂದ 2000 ರವರೆಗೆ ಎಲ್‌ಡಿಎಫ್ ಸಂಚಾಲಕರಾಗಿ ಸೇವೆ ಸಲ್ಲಿಸಿದರು. 2015ರಲ್ಲಿ ಕೋಲ್ಕತ್ತಾದಲ್ಲಿ ನಡೆದ 21ನೇ ಪಕ್ಷದ ಕಾಂಗ್ರೆಸ್‌ನಲ್ಲಿ ವೃದ್ಧಾಪ್ಯದ ಕಾರಣ ಕೇಂದ್ರ ಸಮಿತಿಯಿಂದ ನಿವೃತ್ತರಾದರು. ನಂತರ, ಅವರು ಕೇಂದ್ರ ಸಮಿತಿಗೆ ವಿಶೇಷ ಆಹ್ವಾನಿತರಾದರು. 2001 ರಿಂದ 2006 ರವರೆಗೆ ಅವರು ವಿರೋಧ ಪಕ್ಷದ ನಾಯಕರಾಗಿದ್ದರು. 2006ರಿಂದ 2011 ರವರೆಗೆ ಅವರು ಮುಖ್ಯಮಂತ್ರಿಯಾಗಿದ್ದರು. 2011ರಿಂದ 2016 ರವರೆಗೆ ಅವರು ಮತ್ತೆ ವಿರೋಧ ಪಕ್ಷದ ನಾಯಕರಾಗಿ ಮುಂದುವರೆದರು. ಅವರು ತಾವು ಹೊಂದಿದ್ದ ಎಲ್ಲಾ ಹುದ್ದೆಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ ನಾಯಕ.

ಪರಿಷ್ಕರಣಾವಾದ ಮತ್ತು ತೀವ್ರ ಉಗ್ರವಾದದ ವಿರುದ್ಧ

ಕೃಷಿ ಮತ್ತು ತೆಂಗಿನ ನಾರಿನ ಕಾರ್ಮಿಕರ ಕಷ್ಟಗಳನ್ನು ವೈಯಕ್ತಿಕವಾಗಿ ಅನುಭವಿಸಿದ ವಿಎಸ್ ತಮ್ಮ ಅನುಭವಗಳನ್ನು ಶಕ್ತಿಯನ್ನಾಗಿ ಪರಿವರ್ತಿಸಿಕೊಂಡರು. ಶೋಷಿತರ ವಿಮೋಚನೆಗಾಗಿ ನಿಂತ ಒಡನಾಡಿ, ಆ ಧೈರ್ಯದಿಂದ ಕೃಷಿ ಮತ್ತು ಕಮ್ಯುನಿಸ್ಟ್ ಚಳುವಳಿಯನ್ನು ಮುನ್ನಡೆಸಿದರು. ಪಕ್ಷದಲ್ಲಿನ ವಿಭಜನೆಯ ನಂತರದ ಹಂತದಲ್ಲಿ, ಅವರು ಪರಿಷ್ಕರಣಾವಾದದ ವಿರುದ್ಧ ಮತ್ತು ಆ ನಂತರದ ಹಂತದಲ್ಲಿ, ತೀವ್ರ ಉಗ್ರವಾದದ ವಿರುದ್ಧ ಹೋರಾಡಿದರು ಮತ್ತು ಪಕ್ಷವನ್ನು ಸರಿಯಾದ ಹಾದಿಯಲ್ಲಿ ದೃಢವಾಗಿ ಇಡುವಲ್ಲಿ



‘ಕೆಂಪು ವಂದನೆ ಸಂಗಾತಿ’ ಭಾವೋದ್ವೇಕದ ಘೋಷಣೆಯೊಂದಿಗೆ ಸಂಗಾತಿ ವಿ.ಎಸ್. ಅವರಿಗೆ ಅಂತಿಮ ವಿದಾಯ



ಬುಧವಾರ (ಜುಲೈ,23) ಸಂಜೆ ಆಲಪ್ಪುಳ ಕರಾವಳಿಯಲ್ಲಿ ಸೂರ್ಯ ಮುಳುಗುತ್ತಿದ್ದಂತೆ, ಗಾಳಿಯು ಭಾರವಾಯಿತು – ಮುಂಗಾರು ಮೋಡಗಳ ಭಾರದಿಂದ ಮಾತ್ರವಲ್ಲ, ಕೇರಳದ ಎಡ ರಾಜಕೀಯದ ಆತ್ಮಸಾಕ್ಷಿಯಾಗಿ ಮಾರ್ಪಟ್ಟ ನಾಯಕನಿಗೆ ವಿದಾಯ ಹೇಳುವ ಸಾವಿರಾರು ಜನರ ಮೌನ ದುಃಖದೊಂದಿಗೆ. ಅವರ ಜೀವನ ಮತ್ತು ಹೋರಾಟಗಳನ್ನು ರೂಪಿಸಿದ ಮಣ್ಣಿನಲ್ಲಿ, ವಲಿಯ ಚುಡುಕ್ಕಾಡ್ ನಲ್ಲಿರುವ ಪುನ್ನಪ್ರಾ–ವಯಲಾರ್ ಹುತಾತ್ಮರ ಸ್ಮಾರಕದಲ್ಲಿ ಪೂರ್ಣ ಸರ್ಕಾರಿ ಗೌರವಗಳೊಂದಿಗೆ ಸಂಗಾತಿ ವಿ.ಎಸ್. ಅಚ್ಯುತಾನಂದನ್ ಅವರನ್ನು ರಾತ್ರಿ 9.15ಕ್ಕೆ ಅಂತ್ಯಕ್ರಿಯೆ ಮಾಡಲಾಯಿತು. ಅಲ್ಲಿ ನೆರದಿದ್ದ ಸಾವಿರಾರು ದುಃಖತಪ್ತರು “ನೀವು ಎಲ್ಲಿಗೂ ಹೋಗಿಲ್ಲ ಸಂಗಾತಿ... ನಿಮ್ಮ ರೂಪ ಮತ್ತು ಚೈತನ್ಯ ನಮ್ಮ ಹೃದಯದಲ್ಲಿ ಶಾಶ್ವತವಾಗಿ ಉಳಿಯುತ್ತದೆ’. ಜೋಹರ್ ಕಾಮ್ರೇಡ್ ವಿ.ಎಸ್.... ಲಾಲ್ ಸಲಾಮ್” ಎಂಬ ಹೃದಯಪೂರ್ವಕ ಭಾವನಾತ್ಮಕ ಘೋಷಣೆಗಳೊಂದಿಗೆ ವಿದಾಯ ಹೇಳಿದರು.

ಅಲಪ್ಪುಳ, ಜುಲೈ 23 – ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಂಸ್ಥಾಪಕರಲ್ಲಿ ಒಬ್ಬರಾದ, ಕೇರಳದ ಮಾಜಿ ಮುಖ್ಯಮಂತ್ರಿ ಮತ್ತು ಮಹಾನ್ ನಾಯಕರಾದ ಕಾಮ್ರೇಡ್ ವಿ.ಎಸ್. ಅಚ್ಯುತಾನಂದನ್ ಜನತೆಗೆ ವಿದಾಯ ಹೇಳಿದರು. ಕೇರಳದ ಜನರು ತಮ್ಮ ಪ್ರೀತಿಯ ನಾಯಕನಿಗೆ “ನೀವು ಎಲ್ಲಿಗೂ ಹೋಗಿಲ್ಲ ಸಂಗಾತಿ... ನಿಮ್ಮ ರೂಪ ಮತ್ತು ಚೈತನ್ಯ ನಮ್ಮ ಹೃದಯದಲ್ಲಿ ಶಾಶ್ವತವಾಗಿ ಉಳಿಯುತ್ತದೆ’. ಜೋಹರ್ ಕಾಮ್ರೇಡ್ ವಿ.ಎಸ್.... ಲಾಲ್ ಸಲಾಮ್” ಎಂಬ ಹೃದಯಪೂರ್ವಕ ಭಾವನಾತ್ಮಕ ಘೋಷಣೆಗಳೊಂದಿಗೆ, ’ನಿಮ್ಮ ಆಶಯಗಳನ್ನು ನಾವು ಮುಂದುವರಿಸುತ್ತೇವೆ’ ಎಂದು ಪ್ರತಿಜ್ಞೆ ಮಾಡಿದರು. ಸಂಗಾತಿ ವಿ.ಎಸ್. ಅಚ್ಯುತಾನಂದನ್ ಅವರ ಪಾರ್ಥಿವ ಶರೀರವನ್ನು ಹೊತ್ತ ಕೇರಳ ರಾಜ್ಯ ಸಾರಿಗೆ ಸಂಸ್ಥೆಯ ಬಸ್ 22ರ ಮಧ್ಯಾಹ್ನ 2 ಗಂಟೆಗೆ ತಿರುವನಂತಪುರಂ ಸೆಕ್ರೆಟರಿಯೇಟ್‌ನ ದರ್ಬಾರ್ ಹಾಲ್‌ನಿಂದ ಅಲಪುಳ ಕಡೆಗೆ ಪ್ರಯಾಣ ಬೆಳೆಸಿತು.

ದಾರಿಯುದ್ದಕ್ಕೂ ಕಣ್ಣೀರಿನ ಶ್ರದ್ಧಾಂಜಲಿ

ಮಂಗಳವಾರ (ಜುಲೈ, 22) ಮಧ್ಯರಾತ್ರಿಯ ವೇಳೆಗೆ ಅಲಪುಳ ಜಿಲ್ಲೆಯ ಪರವೂರಿನಲ್ಲಿರುವ ಅವರ ಮನೆ ತಲುಪಲು ಯೋಜಿಸಲಾಗಿತ್ತು. ಆದರೂ, ಅದು ತಿರುವನಂತಪುರಂ ಜಿಲ್ಲೆಯನ್ನು ದಾಟಿ ಕೊಲ್ಲಂ ಜಿಲ್ಲೆ ಪ್ರವೇಶಿಸುವ ಹೊತ್ತಿಗೆ ಆಗಲೇ ಮಧ್ಯರಾತ್ರಿಯಾಗಿತ್ತು. ಕೇರಳದ ಜನರು ತಮ್ಮ ಪ್ರೀತಿಯ ನಾಯಕನಿಗೆ ಗೌರವ ಸಲ್ಲಿಸಲು ಬಸ್ 26 ಕೇಂದ್ರಗಳಲ್ಲಿ ನಿಲ್ಲುತ್ತದೆ ಎಂದು ಘೋಷಿಸಲಾಗಿತ್ತು. ಇದರಿಂದಾಗಿ, ರಾತ್ರಿಯಿಂದ ಭಾರೀ ಮಳೆ ಸುರಿಯುತ್ತಿದ್ದರೂ, ದಾರಿಯುದ್ದಕ್ಕೂ ಸಾವಿರಾರು ಜನರು ಜಮಾಯಿಸಿ ಕಣ್ಣೀರಿನ ಶ್ರದ್ಧಾಂಜಲಿ ಸಲ್ಲಿಸಿ ಕಾಮ್ರೇಡ್ ವಿ.ಎಸ್. ಅವರಿಗೆ ನಮಸ್ಕರಿಸಿದರು. ಅವರು ಭಾವುಕರಾಗಿ ಘೋಷಣೆಗಳನ್ನು ಕೂಗಿದರು.

ಮಳೆಯ ಬಗ್ಗೆ ತಲೆಕೆಡಿಸಿಕೊಳ್ಳದ ಮಕ್ಕಳು ಮತ್ತು ವೃದ್ಧರು!

ಪರಿಣಾಮವಾಗಿ, ಯೋಜಿತ 26 ಕೇಂದ್ರಗಳಲ್ಲಿ ಮಾತ್ರವಲ್ಲದೆ ಮಾರ್ಗದುದ್ದಕ್ಕೂ ಸಾವಿರಾರು ಜನರು ಜಮಾಯಿಸಿದರು ಮತ್ತು ಅಂತ್ಯಕ್ರಿಯೆಯ ವಾಹನವು ನಿಗದಿತ ಸ್ಥಳದ ಮೂಲಕ ಹಾದುಹೋಗಲು ಸಾಧ್ಯವಾಗದ ಕಾರಣ ಅನೇಕ ಸ್ಥಳಗಳಲ್ಲಿ ನಿಲ್ಲಿಸಬೇಕಾಯಿತು. ಮೇಲಿನಿಂದ ಸುರಿಯುತ್ತಿರುವ ಮಳೆಯನ್ನು ಲೆಕ್ಕಿಸದೆ, ಮಕ್ಕಳು ಮತ್ತು ವೃದ್ಧರು ಸೇರಿದಂತೆ ದೊಡ್ಡ ಜನಸಮೂಹವು ಕಾಮ್ರೇಡ್ ವಿ.ಎಸ್. ಅವರಿಗೆ ಗೌರವ ಸಲ್ಲಿಸಲು ಮಧ್ಯರಾತ್ರಿಯಲ್ಲಿಯೂ ರಸ್ತೆಬದಿಯಲ್ಲಿ ಕಾಯುತ್ತಿತ್ತು.

ವಿಎಸ್ ಕೇವಲ ರಾಜಕೀಯ ನಾಯಕರಲ್ಲ, ಅವರು ಕೇರಳದ ಆತ್ಮಸಾಕ್ಷಿ. ಮುಖ್ಯಮಂತ್ರಿಯಾಗಿ, ವಿರೋಧ ಪಕ್ಷದ ನಾಯಕರಾಗಿ ಮತ್ತು ಪಕ್ಷದ ಕಾರ್ಯದರ್ಶಿಯಾಗಿ, ಅವರು ತಮ್ಮ ಕೊನೆಯ ಉಸಿರಿನವರೆಗೂ ಸಾರ್ವಜನಿಕರಿಗೆ ಸೇವೆ ಸಲ್ಲಿಸಿದರು. ಅವರು ಮೂಕರ ಧ್ವನಿಯಾದರು. ಅವರು ಎಂತಹ ಕಠಿಣ ಪರಿಸ್ಥಿತಿಗಳನ್ನು ಎದುರಿಸಿದರೂ, ತಮ್ಮ ಆದರ್ಶಗಳು ಮತ್ತು ನಂಬಿಕೆಗಳನ್ನು ಎಂದಿಗೂ ಬಿಟ್ಟುಕೊಡಲಿಲ್ಲ. ಅಂತಹ ನಾಯಕ ತಮ್ಮನ್ನು ತೊರೆದಾಗ, ಅವರ ಅಭಿಮಾನಿಗಳು ಅದೇ ಬದ್ಧತೆಯನ್ನು ತೋರಿಸಿದರು. ಅವರು ಗಂಟೆಗಟ್ಟಲೆ ನಿಂತು ತಮ್ಮ ನಾಯಕನನ್ನು ನೋಡುತ್ತಾ ಕೃತಜ್ಞತೆಯನ್ನು ವ್ಯಕ್ತಪಡಿಸಿದರು.



ಆಲಪ್ಪುಳಕ್ಕೆ ಪ್ರವೇಶಿಸಲು 17 ಗಂಟೆಗಳು ಬೇಕಾಯಿತು

ಓಚಿರಾದಿಂದ’ ಶೋಕ ಮೆರವಣಿಗೆಯು ಹೀಗೆ 17 ಗಂಟೆಗಳ ಪ್ರಯಾಣದ ನಂತರ, ಬುಧವಾರ ಬೆಳಿಗ್ಗೆ 7 ಗಂಟೆ ಸುಮಾರಿಗೆ ಆಲಪ್ಪುಳ ಜಿಲ್ಲೆಯನ್ನು ಪ್ರವೇಶಿಸಿತು. ಅಲಪ್ಪುಳ ಜಿಲ್ಲೆಯನ್ನು ಪ್ರವೇಶಿಸಿದ ನಂತರ, ಮೃತದೇಹವು ಕರೀಲಕುಲಂಗರ, ನಾಗಿಯಾರ್ಕುಲಂಗರ, ಹರಿಪಾಡ್, ತೋಟಪ್ಪಳ್ಳಿ ಮತ್ತು ಟಿ.ಡಿ. ವೈದ್ಯಕೀಯ ಕಾಲೇಜು ಜಂಕ್ಷನ್ ಮೂಲಕ ಅವರ ಮನೆ ತಲುಪಿತು. ಅವರ ಮನೆಯಲ್ಲಿ ಜನಸಾಗರವೇ ನೆರೆದಿತ್ತು, ಕೆಲವರು ಅವರನ್ನು ನೋಡಲು ಮಂಗಳವಾರ ಸಂಜೆಯಿಂದ ಕಾಯುತ್ತಿದ್ದರು.

ಪ್ರೀತಿಯ ನಾಯಕ ವಿ.ಎಸ್. ಅಚ್ಯುತಾನಂದನ್ ಅವರ ಮುಖವನ್ನು ಕೊನೆಯ ಬಾರಿಗೆ ನೋಡಲು ಮಾರ್ಗದುದ್ದಕ್ಕೂ ಸಾವಿರಾರು ಜನರು ಜಮಾಯಿಸಿದ್ದರು. ಕೊಲ್ಲಂ ಮತ್ತು ಆಲಪ್ಪುಳದಲ್ಲಿ ಜನರು ವಿ.ಎಸ್. ಅವರಿಗಾಗಿ ದೀರ್ಘ ಸರತಿ ಸಾಲಿನಲ್ಲಿ ಕಾಯುತ್ತಿದ್ದರು, ಕೆಂಪು ಧ್ವಜಗಳನ್ನು ಬೀಸುತ್ತಾ “ನಮ್ಮ ಹೃದಯದಲ್ಲಿನ ಗುಲಾಬಿ” ಘೋಷಣೆಗಳನ್ನು ಕೂಗುತ್ತಿದ್ದರು. ಕೆಲವರು ವಿ.ಎಸ್. ಅವರನ್ನು ನೋಡಲು ದೂರದಿಂದ ಬಂದಿದ್ದರು.



150 ಕಿಮೀ, ಪ್ರಯಾಣಿಸಲು 22 ಗಂಟೆಗಳು

ತಿರುವನಂತಪುರಂ ಮತ್ತು ಪರವೂರು ನಡುವಿನ ದೂರ ಸುಮಾರು 150 ಕಿಮೀ. ಅಂತ್ಯಕ್ರಿಯೆಯ ವಾಹನವು ಈ ದೂರವನ್ನು ಕ್ರಮಿಸಲು 22 ಗಂಟೆಗಳಿಗಿಂತ ಹೆಚ್ಚು ಸಮಯ ತೆಗೆದುಕೊಂಡಿತು. ಜನರು ತಮ್ಮ ಹೃದಯಕ್ಕೆ ಹತ್ತಿರವಾದ ನಾಯಕನ ಮರಣದ ಸುದ್ದಿಯಿಂದ ಹೇಗೆ ಭಾವುಕರಾದರು, ಅವರು ತಮ್ಮ ದುಃಖವನ್ನು ಹೇಗೆ ವ್ಯಕ್ತಪಡಿಸಿದರು ಮತ್ತು ಕೊನೆಯ ಬಾರಿಗೆ ಅವರನ್ನು ನೋಡಲು ಅವರು ಎಷ್ಟು ಹಂಬಲಿಸುತ್ತಿದ್ದರು ಎಂಬುದನ್ನು ತಿಳಿಯಲು ಇದು ಕೇವಲ ಒಂದು ಉದಾಹರಣೆಯಾಗಿದೆ. ಅವರ ಆರೋಗ್ಯವು ಅನುಮತಿಸುವವರೆಗೆ ವಿಎಸ್ ಇಲ್ಲಿಗೆ ಆಗಾಗ್ಗೆ ಬರುತ್ತಿದ್ದರು. ಪುನ್ನಪ್ರದ ಹುತಾತ್ಮರಿಗೆ ಅವರು ಗೌರವ ಸಲ್ಲಿಸುತ್ತಿದ್ದರು. ಐತಿಹಾಸಿಕ ಪುನ್ನಪ್ರ ದಂಗೆಯ 73 ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಅವರು ಕೊನೆಯ ಬಾರಿಗೆ ಇಲ್ಲಿಗೆ ಬಂದರು. ಬುಧವಾರ ಮಧ್ಯಾಹ್ನ 12.20 ಕ್ಕೆ ವಿ.ಎಸ್. ಅವರ ಚಲನರಹಿತ ದೇಹವು ಅವರ ಕೊನೆಯ ಪ್ರಯಾಣದಲ್ಲಿ ಪರವೂರಿನ ಅವರ ಮನೆಗೆ ತಲುಪಿತು. ನಂತರ ಸಾರ್ವಜನಿಕರಿಗೆ ಗೌರವ ಸಲ್ಲಿಸಲು ಮನೆಯ ಆವರಣದಲ್ಲಿ ಇರಿಸಲಾಯಿತು. ದಶಕಗಳಿಂದ ಅವರೊಂದಿಗೆ ಇದ್ದ ತಮ್ಮ ನಾಯಕನಿಗೆ ಅಂತಿಮ ವಿದಾಯ ಹೇಳಲು ಮಂಗಳವಾರ ಸಂಜೆ ಆಗಮಿಸಿದ್ದ ಸಾವಿರಾರು ಜನರು ಶೋಕ ದನಿಯಲ್ಲಿ ಮೌನವಾಗಿ ನಿಂತಿರುವುದು ಕಂಡುಬಂದಿತು. ಆ ಸಮಯದಲ್ಲಿ, ಅಲ್ಲಿ ನೆರೆದಿದ್ದ ಸಾವಿರಾರು ಜನರು ’ಇಲ್ಲ, ಇಲ್ಲ, ಸತ್ತಿಲ್ಲ, ಪ್ರಿಯ ಸಂಗಾತಿ ಸತ್ತಿಲ್ಲ. ನೀವು ನಮ್ಮ ನಡುವೆ ವಾಸಿಸುತ್ತೀರಿ...’ ಎಂದು ಭಾವೋದ್ವೇಕದಿಂದ ಘೋಷಣೆ ಕೂಗುತ್ತಿದ್ದರು. ಕುಟುಂಬ ಸದಸ್ಯರು, ಅವರ ಸಹೋದ್ಯೋಗಿಗಳು ಮತ್ತು ಪುನ್ನಾಪುರದ ಜನರು ಅಂತಿಮ ನಮನ ಸಲ್ಲಿಸಿದರು.

96 ವರ್ಷದ ಅಚ್ಯುತಾನಂದನ್ ಅವರ ಸಹೋದರಿ ಅಲಿಕುಟ್ಟಿ ಮೌನವಾಗಿ ತನ್ನ ಸಹೋದರನಿಗೆ ಅಂತಿಮ ವಿದಾಯ ಹೇಳಿದರು. ವೃದ್ಧಾಪ್ಯ ಮತ್ತು ಅನಾರೋಗ್ಯದಿಂದಾಗಿ, ಅವರು ಕಳೆದ ಕೆಲವು ತಿಂಗಳುಗಳಿಂದ ಹಾಸಿಗೆ ಹಿಡಿದಿದ್ದಾರೆ. ಒಂದು ಕಾಲದಲ್ಲಿ ಸ್ಫೂರ್ತಿ ಮತ್ತು ಪ್ರಜ್ಞೆಯ ಸಂಕೇತವಾಗಿ ನಿಂತಿದ್ದ ತಂಗಿ, ಇಂದು ಯಾವುದೇ ಸನ್ನೆಗಳಿಲ್ಲದೆ ಮೌನವಾಗಿ ತನ್ನ ಸಹೋದರನ ಸಾವಿನ ಸುದ್ದಿಯನ್ನು ಆಲಿಸಿದರು.

ರಾಜಕೀಯ ನಾಯಕತ್ವದಿಂದ ನಮನ

ಕೊನೆಗೆ, 24 ಗಂಟೆಗಳ ಪ್ರಯಾಣದ ನಂತರ, ವಿ.ಎಸ್. ಅವರ ಪಾರ್ಥಿವ ಶರೀರವನ್ನು ಪಕ್ಷದ ಜಿಲ್ಲಾ ಸಮಿತಿ ಕಚೇರಿಯಾದ ಪಿ. ಕೃಷ್ಣಪಿಳ್ಳೈ ಸ್ಮಾರಕಕ್ಕೆ ಕೊಂಡೊಯ್ಯಲಾಯಿತು. ಇಲ್ಲಿಯೂ ಸಹ, ಜನರು ವಿ.ಎಸ್. ಅಂತ್ಯಕ್ರಿಯೆಗಾಗಿ ದೀರ್ಘ ಸರತಿ ಸಾಲಿನಲ್ಲಿ ಕಾಯುತ್ತಿದ್ದರು. ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಭಾರತ ಕಮ್ಯುನಿಸ್ಟ್ ಪಕ್ಷ–ಮಾರ್ಕ್ಸ್‌ವಾದಿ ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ, ಪಾಲಿಟ್‌ಬ್ಯೂರೋ ಸದಸ್ಯರಾದ ಕೆ. ಬಾಲಕೃಷ್ಣನ್, ಯು.ವಾಸುಕಿ, ಪುಟ 11 ಕ್ಕೆ

ಕೇರಳ ರಾಜಕೀಯದಲ್ಲಿ ಅಚ್ಚಳಿಯದ ಛಾಪನ್ನು ಮೂಡಿಸಿದ ಕಾಮ್ರೇಡ್ ವಿ.ಎಸ್. ಅಚ್ಯುತಾನಂದನ್: ಪೊಲಿಟ್‌ಬ್ಯುರೊ ಶ್ರದ್ಧಾಂಜಲಿ

ಕಮ್ಯುನಿಸ್ಟ್ ಚಳವಳಿಯ ಒಬ್ಬ ಅತ್ಯುತ್ತಮ ಮತ್ತು ಅನುಭವಿ ನಾಯಕ ವಿ.ಎಸ್. ಅಚ್ಯುತಾನಂದನ್ ಅವರ ನಿಧನಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಆಳವಾದ ದುಃಖ ವ್ಯಕ್ತಪಡಿಸಿದೆ. ವಿ.ಎಸ್. ಅಚ್ಯುತಾನಂದನ್ ಪೊಲಿಟ್‌ಬ್ಯೂರೋದ ಮಾಜಿ ಸದಸ್ಯರು. ಅವರಿಗೆ 101 ವರ್ಷ ವಯಸ್ಸಾಗಿತ್ತು.

ವಿಎಸ್ ಎಂದು ಪ್ರೀತಿಯಿಂದ ಕರೆಯಲ್ಪಡುವ ಅಚ್ಯುತಾನಂದನ್ ಕೇರಳದಲ್ಲಿ ವಿವಿಧ ಹೋರಾಟಗಳನ್ನು ಮುನ್ನಡೆಸಿದ ಒಬ್ಬ ಸಮರ್ಥ ಸಂಘಟಕರಾಗಿದ್ದರು. ಅವರು ಕೆಲಸ ಮಾಡಲು ಪ್ರಾರಂಭಿಸಿದ್ದು ಆಸ್ಪಿನ್ವಾಲ್ ಕಂಪನಿಯಲ್ಲಿ ನಾರು ಕಾರ್ಮಿಕರನ್ನು ಸಂಘಟಿಸುವುದರೊಂದಿಗೆ ಕಾರ್ಮಿಕ ಸಂಘಟನೆಯ ಚಳುವಳಿಯೊಂದಿಗೆ ಅವರ ಮೊದಲ ಒಡನಾಟವಾಗಿತ್ತು.

1940 ರಲ್ಲಿ, ಕೇವಲ ಹದಿನೇಳು ವರ್ಷ ವಯಸ್ಸಿನಲ್ಲಿ ವಿಎಸ್ ಕಮ್ಯುನಿಸ್ಟ್ ಪಕ್ಷವನ್ನು ಸೇರಿದರು. ಕೃಷ್ಣ ಪಿಳ್ಳೈಯವರು ಭೂಮಾಲೀಕರಿಂದ ಭೀಕರ ಶೋಷಣೆಗೆ ಒಳಗಾದ ಕುಟ್ಟನಾಡಿನ ಕೃಷಿ ಕಾರ್ಮಿಕರ ನಡುವೆ ಅವರಿಗೆ ಕೆಲಸ ವಹಿಸಿದರು. ತಿರುವಾಂಕೂರಿನ ದಿವಾನರ ವಿರುದ್ಧ ಪುನ್ನಪ್ರಾ – ವಯಲಾರ್ ಬಂಡಾಯದ ಸಮಯದಲ್ಲಿ, ವಿಎಸ್ ಭೂಗತರಾಗಬೇಕಾಯಿತು. ಬಂಧನಕ್ಕೊಳಗಾದ ನಂತರ, ಅವರನ್ನು ತೀವ್ರ ಕಸ್ಟಡಿ ಚಿತ್ರಹಿಂಸೆಗೆ ಗುರಿಪಡಿಸಲಾಯಿತು.

1956ರಲ್ಲಿ ಸಂಯುಕ್ತ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಗೆ ಮತ್ತು 1958ರಲ್ಲಿ ಅದರ ರಾಷ್ಟ್ರೀಯ ಮಂಡಳಿಗೆ ವಿಎಸ್ ಆಯ್ಕೆಯಾದರು. ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ವನ್ನು ರಚಿಸಲು ತೊರೆದ ರಾಷ್ಟ್ರೀಯ ಮಂಡಳಿಯ 32 ಸದಸ್ಯರಲ್ಲಿ ಬದುಕುಳಿದಿದ್ದವರಲ್ಲಿ ಅವರು ಕೊನೆಯವರು. 1980ರಿಂದ 1991ರ ವರೆಗೆ ಸಿಪಿಐ(ಎಂ) ಕೇರಳ ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿ ಅವರು ಸೇವೆ ಸಲ್ಲಿಸಿದರು. 1964ರಲ್ಲಿ ಪಕ್ಷದ ಕೇಂದ್ರ ಸಮಿತಿಗೆ ಆಯ್ಕೆಯಾದರು ಮತ್ತು 1985ರಲ್ಲಿ ಪೊಲಿಟ್‌ಬ್ಯೂರೋ ಸದಸ್ಯರಾದರು. 2022ರಲ್ಲಿ ಅವರನ್ನು ವಯಸ್ಸಿನ ಕಾರಣದಿಂದಾಗಿ ಕೇಂದ್ರ ಸಮಿತಿಯಿಂದ ಬಿಡುಗಡೆ ಮಾಡಲಾಯಿತು, ಅದರಲ್ಲಿ ಅವರು ವಿಶೇಷ ಆಹ್ವಾನಿತರಾಗಿದ್ದರು.

ವಿಎಸ್ ಕೇರಳ ವಿಧಾನಸಭೆಗೆ ಏಳು ಅವಧಿಗೆ ಆಯ್ಕೆಯಾದರು. ಎರಡು ಅವಧಿಗೆ ವಿರೋಧ ಪಕ್ಷದ ನಾಯಕರಾಗಿ ಸೇವೆ ಸಲ್ಲಿಸಿದರು ಮತ್ತು 2006ರಿಂದ 2011 ರವರೆಗೆ ಮುಖ್ಯಮಂತ್ರಿಯಾಗಿದ್ದರು. ಮುಖ್ಯಮಂತ್ರಿಯಾಗಿದ್ದ ಅವರ ಅಧಿಕಾರಾವಧಿಯು ದುಡಿಯುವ ಜನರ ಕಲ್ಯಾಣಕ್ಕಾಗಿ ಹಲವಾರು ಶಾಸಕಾಂಗ ಮತ್ತು ಆಡಳಿತಾತ್ಮಕ ಕ್ರಮಗಳಿಂದ ಗುರುತಿಸಲ್ಪಟ್ಟಿದೆ.

ಎಂಟೂವರೆ ದಶಕಗಳ ಕಾಲ ಪಕ್ಷದೊಂದಿಗಿನ ಅವರ ಒಡನಾಟದ ಅವಧಿಯಲ್ಲಿ, ವಿಎಸ್ ಕೇರಳದಲ್ಲಿ ಕಮ್ಯುನಿಸ್ಟ್ ಚಳುವಳಿಯ ನಿರಂತರ ಬೆಳವಣಿಗೆಗೆ ಸಾಕ್ಷಿಯಾದರು. ಒಬ್ಬ ಸಾರ್ವಜನಿಕ ಭಾಷಣಕಾರರಾಗಿ ವಿಎಸ್ ಸಭಿಕರೊಂದಿಗೆ ನೇರವಾಗಿ ಸಂವಹನ ನಡೆಸುವ ಕಲೆಯನ್ನು ಕರಗತ ಮಾಡಿಕೊಂಡಿದ್ದರು. ತಮ್ಮ ಸರಳ ಜೀವನಶೈಲಿ ಮತ್ತು ಸಾಮಾಜಿಕ ನ್ಯಾಯಕ್ಕೆ ಅಚಲವಾದ ಬದ್ಧತೆಗೆ ಹೆಸರುವಾಸಿಯಾದ ವಿ.ಎಸ್. ಅಚ್ಯುತಾನಂದನ್ ಕೇರಳ ರಾಜಕೀಯದಲ್ಲಿ ಅಚ್ಚಳಿಯದ ಛಾಪನ್ನು ಮೂಡಿಸಿದ್ದಾರೆ. ಅವರ ನಿಧನದಿಂದ ಪಕ್ಷ ಮತ್ತು ಕಮ್ಯುನಿಸ್ಟ್ ಚಳುವಳಿಗೆ ತೀವ್ರ ನಷ್ಟವಾಗಿದೆ ಎಂದಿರುವ ಪೊಲಿಟ್‌ಬ್ಯುರೊ ಅವರ ಗೌರವಾರ್ಥ ಕೆಂಬಾವುಟದ ನಮನ ಸಲ್ಲಿಸುತ್ತ, ಅವರ ಪತ್ನಿ, ಮಗ ಮತ್ತು ಮಗಳಿಗೆ ತನ್ನ ಹೃತ್ಪೂರ್ವಕ ಸಂತಾಪವನ್ನು ವ್ಯಕ್ತಪಡಿಸುವುದಾಗಿ ಹೇಳಿದೆ.

ಮುಂಬೈ ಹೈಕೋರ್ಟಿನ ಸಂವಿಧಾನ–ವಿರೋಧಿ ಟಿಪ್ಪಣಿಗಳು: ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಗಾಝಾದಲ್ಲಿ ನಡೆಯುತ್ತಿರುವ ನರಹತ್ಯಾಕಾಂಡದ ವಿರುದ್ಧ ಪ್ರತಿಭಟನೆಗೆ ಅವಕಾಶ ಕೊಡಲು ಮುಂಬೈ ಪೊಲೀಸ್ ನಿರಾಕರಿಸಿರುವುದನ್ನು ಪ್ರಶ್ನಿಸಿ ಮುಂಬೈ ಹೈಕೋರ್ಟಿನಲ್ಲಿ ಹಾಕಿದ್ದ ಅರ್ಜಿಯನ್ನು ತಿರಸ್ಕರಿಸುತ್ತ ಸಂಬಂಧಪಟ್ಟ ಪೀಠವು ಮಾಡಿರುವ ಸಂವಿಧಾನ–ವಿರೋಧಿ ಟಿಪ್ಪಣಿಗಳನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಪಕ್ಷದ ಪರವಾದ ಅರ್ಜಿಯನ್ನು ತಿರಸ್ಕರಿಸುತ್ತ ನ್ಯಾಯಾಲಯವು ಪಕ್ಷದ ದೇಶಪ್ರೇಮವನ್ನು ಪ್ರಶ್ನಿಸುವ ಮಟ್ಟದವರೆಗೆ ಹೋಗಿದೆ; ವ್ಯಂಗ್ಯವೆಂದರೆ, ಈ ಪೀಠಕ್ಕೆ ಒಂದು ರಾಜಕೀಯ ಪಕ್ಷದ ಹಕ್ಕುಗಳನ್ನು ಪ್ರತಿಷ್ಠಾಪಿಸಿರುವ ಸಂವಿಧಾನದ ನಿಬಂಧನೆಗಳ ಬಗೆಗಾಗಲೀ, ಅಥವ ನಮ್ಮ ದೇಶದ ಚರಿತ್ರೆಯ ಬಗೆಗಾಗಲೀ ಮತ್ತು ಪ್ಯಾಲೆಸ್ತೇನಿಯನ್ನರೊಂದಿಗೆ ಮತ್ತು ಅವರ ನ್ಯಾಯಬದ್ಧ ತಾಯ್ನಾಡಿನ ಹಕ್ಕಿನೊಂದಿಗೆ ನಮ್ಮ ಜನತೆಯ ಸೌಹಾರ್ದದ ಬಗೆಗಾಗಲೀ ಅರಿವೇ ಇಲ್ಲದಿರುವಂತೆ ಕಾಣುತ್ತದೆ. ಪೀಠದ ಟಿಪ್ಪಣಿಗಳಲ್ಲಿ ಕೇಂದ್ರ ಸರಕಾರದ ನಿಲುವಿನಲ್ಲಿನ ವಿಭಿನ್ನ ರಾಜಕೀಯ ಪಕ್ಷಪಾತದ ವಾಸನೆ ಸೂಸುತ್ತಿವೆ ಎಂದು ಪೊಲಿಟ್‌ಬ್ಯುರೊ ಖೇದ ವ್ಯಕ್ತಪಡಿಸಿದೆ.

"ಇದು ಎಂತಹ ಧೂಳು ಎಬ್ಬಿಸಬಹುದು ಎಂದು ನಿಮಗೆ ತಿಳಿದಿಲ್ಲ– ಪ್ಯಾಲೆಸ್ತೀನ್ ಅಥವ ಇಸ್ರೇಲ್ ಪಕ್ಷ ವಹಿಸುವುದು. ನೀವು ಯಾಕೆ ಹೀಗೆ ಮಾಡಬಯಸುತ್ತೀರಿ? ನೀವು ಪ್ರತಿನಿಧಿಸುವ ಪಕ್ಷವನ್ನು ನೋಡಿದರೆ, ಇದು ನಮ್ಮ ದೇಶದ ವಿದೇಶಾಂಗ ವ್ಯವಹಾರಗಳಿಗೆ ಏನು ಮಾಡಬಹುದು ಎಂದು ನಿಮಗೆ ತಿಳಿದಿಲ್ಲ ಎಂದು ಕಾಣುತ್ತದೆ" ಎಂದು ಪೀಠ ಹೇಳಿತು. ಮುಂದುವರೆದು "ನೀವು ಭಾರತದಲ್ಲಿ ನೋಂದಣಿಯಾದ ಒಂದು ಸಂಘಟನೆ. ನೀವು ಕಸ ರಾಶಿ ಹಾಕುವುದು, ಪರಿಸರ ಮಾಲಿನ್ಯ, ಚರಂಡಿ ವ್ಯವಸ್ಥೆ, ನೆರೆ ಮುಂತಾದ ವಿಷಯಗಳನ್ನು ಎತ್ತಿಕೊಳ್ಳಬಹುದಿತ್ತು. ನಾವು ಉದಾಹರಣೆಗಳನ್ನು ಕೊಡುತ್ತಿದ್ದೇವಷ್ಟೇ. ನೀವು ಅವುಗಳ ಬಗ್ಗೆ ಪ್ರತಿಭಟಿಸುತ್ತಿಲ್ಲ, ಬದಲಿಗೆ ನಮ್ಮ ದೇಶದ ಹೊರಗೆ ಸಾವಿರಾರು ಮೈಲಿಗಳಾಚೆ ಏನೋ ನಡೆಯುತ್ತಿದ್ದರೆ ಅದನ್ನು ಪ್ರತಿಭಟಿಸುತ್ತಿದ್ದೀರಿ" ಎಂದು ಟಿಪ್ಪಣಿ ಮಾಡಿತು.

ಈ ಟಿಪ್ಪಣಿಗಳು ಕಳೆದ ಶತಮಾನದ 40ರ ದಶಕದಲ್ಲಿ ಮಹಾತ್ಮ ಗಾಂಧಿ, ರಾಷ್ಟ್ರೀಯ ಆಂದೋಲನ ಮತ್ತು ನಂತರ ಸ್ವತಂತ್ರ ಭಾರತದ ವಿದೇಶಾಂಗ ಧೋರಣೆ ಪ್ಯಾಲೆಸ್ತೀನ್ ಜನತೆಯ ಸ್ವಾತಂತ್ರ್ಯ ಮತ್ತು ತಾಯ್ನಾಡಿನ ಹಕ್ಕನ್ನು ಬೆಂಬಲಿಸುವಲ್ಲಿ ಎಂದೂ ಹಿಂಜರಿದಿಲ್ಲ ಎಂಬ ಸಂಗತಿಯನ್ನು ನಿರ್ಲಕ್ಷಿಸುತ್ತವೆ. ಅಲ್ಲದೆ, ಈ ಪೀಠ ಇಸ್ರೇಲಿ ಆಕ್ರಮಣಕ್ಕೆ ಜಾಗತಿಕವಾಗಿ ವ್ಯಕ್ತಗೊಂಡಿರುವ ನಿಸ್ಸಂದಿಗ್ಧ ಖಂಡನೆಯನ್ನು ಮತ್ತು ವಿಶ್ವಸಂಸ್ಥೆಯ ಸಂಘಟನೆಗಳ ಮತ್ತು ಅಂತರ್ರಾಷ್ಟ್ರೀಯ ನ್ಯಾಯಾಲಯದ ನಿಲುವುಗಳನ್ನು ಅರಿತಿಲ್ಲ ಎಂಬ ಸಂಗತಿಯನ್ನು ಕೂಡ ಬಟ್ಟಬಯಲಿಗೆ ತಂದಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ "ಇಂತಹ ದೂಷಣೀಯ ನಿಲುವನ್ನು ಖಡಾಖಂಡಿತವಾಗಿ ತಿರಸ್ಕರಿಸುವಲ್ಲಿ ನಮ್ಮ ಜತೆಗೂಡಿ" ಎಂದು ದೇಶದ ಸ್ವಾತಂತ್ರ್ಯಪ್ರಿಯ ಮತ್ತು ಪ್ರಜಾಪ್ರಭುತ್ವಪ್ರಿಯ ಜನಗಳಿಗೆ ಮನವಿ ಮಾಡಿದೆ. ●

ಆಗಸ್ಟ್ 8: ಚುನಾವಣಾ ಆಯೋಗದ ವಿಶೇಷ ತೀವ್ರ ಪರಿಷ್ಕರಣೆ...

ಸಿಪಿಐ(ಎಂ) ಸಂಸತ್ತಿನಲ್ಲಿ ಇತರ ವಿರೋಧ ಪಕ್ಷಗಳನ್ನು ಈ ಮಸೂದೆಗಳ ವಿರುದ್ಧ ಮತ ಚಲಾಯಿಸುವಂತೆ ಅಣಿನೆರೆಸಲು ಪ್ರಯತ್ನಿಸುತ್ತದೆ, ಜನರ ನಡುವೆ ಪ್ರಚಾರ ಮಾಡುತ್ತದೆ ಮತ್ತು ನಮ್ಮ ದೇಶದ ಹಿತಾಸಕ್ತಿಗಳಿಗೆ ವಿರುದ್ಧವಾಗಿರುವ ಇಂತಹ ಜನವಿರೋಧಿ ಕಾನೂನುಗಳ ವಿರುದ್ಧ ಅವರನ್ನು ಸಜ್ಜುಗೊಳಿಸುತ್ತದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಅರ್ಥವ್ಯವಸ್ಥೆಯ ವಿವಿಧ ವಲಯಗಳನ್ನು ಶೋಷಣೆಗೆ ತೆರೆದು ಕೊಡುವ ವ್ಯಾಪಾರ ಒಪ್ಪಂದಗಳು

ಸರ್ಕಾರವು ಅಮೆರಿಕ ಮತ್ತು ಸಂಯುಕ್ತ ಸಂಸ್ಥಾನಗಳು (ಯುಎಸ್) ಮತ್ತು ಯುರೋಪಿಯನ್ ಒಕ್ಕೂಟ(ಇಯು)ದ ದೇಶಗಳೊಂದಿಗೆ ಸಹಿ ಹಾಕಲು ಉದ್ದೇಶಿಸಿರುವ ವಿವಿಧ ವ್ಯಾಪಾರ ಒಪ್ಪಂದಗಳ ಕುರಿತು ಪ್ರಕಟವಾಗುವ ಸುದ್ದಿಗಳ ಬಗ್ಗೆ ಪೊಲಿಟ್‌ಬ್ಯುರೊ ಕಳವಳ ವ್ಯಕ್ತಪಡಿಸಿದೆ. ಮುಕ್ತ ವ್ಯಾಪಾರ ಒಪ್ಪಂದ(ಎಫ್‌ಟಿಎ)ಕ್ಕೆ ಸಹಿ ಹಾಕುವ ಸಂಭ್ರಮಕ್ಕೆ ಹೋಗುವ ಮೊದಲು ಸರ್ಕಾರವು ವಿವಿಧ ಪಾಲುದಾರರೊಂದಿಗೆ ಸಮಾಲೋಚಿಸಬೇಕು. ಕೇಂದ್ರ ಸರ್ಕಾರವು ಈಗಾಗಲೇ ಅಮೆರಿಕದ ಒತ್ತಡಕ್ಕೆ ಮಣಿದಿದೆ ಮತ್ತು ನಮ್ಮ ಅರ್ಥವ್ಯವಸ್ಥೆಯ ವಿವಿಧ ವಲಯಗಳನ್ನು ಶೋಷಣೆಗೆ ತೆರೆದು ಕೊಡುತ್ತದೆ. ವ್ಯಾಪಾರ ಒಪ್ಪಂದವನ್ನು ತೀರ್ಮಾನಿಸುವ ಸರ್ಕಾರದ ಆತುರವು ಹೈನುಗಾರಿಕೆ, ಕೃಷಿ, ರಕ್ಷಣೆ, ಔಷಧ, ಹಣಕಾಸು ಮುಂತಾದ ಪ್ರಮುಖ ಕ್ಷೇತ್ರಗಳಲ್ಲಿ ನಮ್ಮ ದೇಶದ ಹಿತಾಸಕ್ತಿಗಳನ್ನು ಬಿಟ್ಟುಕೊಡಲು ಕಾರಣವಾಗುತ್ತಿದೆ. ನಮ್ಮ ಸಾರ್ವಭೌಮತ್ವವನ್ನು ಬಿಟ್ಟುಕೊಡುವ ಮತ್ತು ನಮ್ಮ ದೇಶದ ಹಿತಾಸಕ್ತಿಗಳನ್ನು ತ್ಯಾಗ ಮಾಡುವ ಎಲ್ಲಾ ವ್ಯಾಪಾರ ಒಪ್ಪಂದಗಳನ್ನು ಸಿಪಿಐ(ಎಂ) ವಿರೋಧಿಸುವುದಾಗಿ ಪೊಲಿಟ್‌ಬ್ಯುರೊ ಹೇಳಿದೆ.

ಜುಲೈ 9 ರ ಸಾರ್ವತ್ರಿಕ ಮುಷ್ಕರ ಯಶಸ್ವಿಗಾಗಿ ಕಾರ್ಮಿಕ ವರ್ಗಕ್ಕೆ ಅಭಿನಂದನೆ

ಹತ್ತು ಕೇಂದ್ರ ಕಾರ್ಮಿಕ ಸಂಘಗಳು ಮತ್ತು ವಿವಿಧ ಅಖಿಲ ಭಾರತ ಒಕ್ಕೂಟಗಳು ಕರೆ ನೀಡಿದ ಸಾರ್ವತ್ರಿಕ ಮುಷ್ಕರವು ಅದ್ಭುತ ಯಶಸ್ಸನ್ನು ಕಂಡಿತು. ರೈತರು ಮತ್ತು ಕೃಷಿ ಕಾರ್ಮಿಕರು ತಮ್ಮ ಸಂಘಟನೆಗಳ ನೇತೃತ್ವದಲ್ಲಿ ಈ ಪ್ರತಿಭಟನೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದಾರೆ. ಯಶಸ್ವಿ ಸಾರ್ವತ್ರಿಕ ಮುಷ್ಕರಕ್ಕಾಗಿ ಕಾರ್ಮಿಕರು ಮತ್ತು ಇತರ ಶ್ರಮಜೀವಿ ವರ್ಗಗಳನ್ನು ಸಿಪಿಐ(ಎಂ) ಅಭಿನಂದಿಸುತ್ತದೆ ಮತ್ತು ಅವರ ಮುಂಬರುವ ಎಲ್ಲಾ ಹೋರಾಟಗಳಲ್ಲಿ ಅವರಿಗೆ ತನ್ನ ಸೌಹಾರ್ದವನ್ನು ಪುನರುಚ್ಚರಿಸುತ್ತದೆ ಎಂದು ಪೊಲಿಟ್ ಬ್ಯೂರೋ ಹೇಳಿದೆ.

ಸಿಪಿಐ(ಎಂ) ಕೇಂದ್ರ ಸಮಿತಿಯ ಮುಂದಿನ ಸಭೆ 2025ರ ಸೆಪ್ಟೆಂಬರ್ 13–15 ರಂದು ನವದೆಹಲಿಯಲ್ಲಿ ನಡೆಯಲಿದೆ. ಸಭೆಯಲ್ಲಿ ಇತರ ಕಾರ್ಯಸೂಚಿಯ ಹೊರತಾಗಿ ಬಿಹಾರ ಮತ್ತು ಇತರ ರಾಜ್ಯಗಳಿಗೆ ಮುಂಬರುವ ಚುನಾವಣೆಗಳಲ್ಲಿ ಪಕ್ಷದ ಚುನಾವಣಾ ಸಿದ್ಧತೆಗಳನ್ನು ಚರ್ಚಿಸಲಾಗುವುದು ಎಂದು ಪೊಲಿಟ್ ಬ್ಯೂರೋ ಹೇಳಿಕೆ ತಿಳಿಸಿದೆ.

ವಿಎಸ್ ಅಚ್ಯುತಾನಂದನ್ ಅವರ ಜೀವನ...



ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿದರು

ವಿಎಸ್ ಕೇವಲ ರಾಜಕೀಯವನ್ನು ಮೀರಿ ಪರಿಸರ, ಮಾನವ ಹಕ್ಕುಗಳು ಮತ್ತು ಮಹಿಳಾ ಸಮಾನತೆಯಂತಹ ವಿವಿಧ ಕ್ಷೇತ್ರಗಳಲ್ಲಿ ಕೆಲಸ

...ಪುಟ 8ರಿಂದ

ಮಾಡಿದರು. ಆ ಪ್ರಕ್ರಿಯೆಯಲ್ಲಿಯೇ ವಿಎಸ್ ಪಕ್ಷದ ನಾಯಕರಾಗಿದ್ದಾಗ ಸಾರ್ವಜನಿಕ ಸ್ವೀಕಾರಕ್ಕೆ ಏರಿದರು. ಸಾಮಾಜಿಕ ಪ್ರಾಮುಖ್ಯತೆಯ ಇತರ ವಿಷಯಗಳನ್ನು ಮುಖ್ಯವಾಹಿನಿಯ ರಾಜಕೀಯ ವಿಷಯಗಳಿಗೆ ತರುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು.

ಶಾಸಕರಾಗಿ ವಿಶಿಷ್ಟ ಕೊಡುಗೆ :

ವಿಎಸ್ ಶಾಸಕರಾಗಿಯೂ ವಿಶಿಷ್ಟ ಕೊಡುಗೆಗಳನ್ನು ನೀಡಿದರು. ಅವರು 1967 ಮತ್ತು 70ರಲ್ಲಿ ಅಂಬಲಪ್ಪುಳದಿಂದ ಮತ್ತು 1991ರಲ್ಲಿ ಮರಾರಿಕುಲಂನಿಂದ ಶಾಸಕರಾದರು. 2001ರಿಂದ 2021 ರವರೆಗೆ ಪಾಲಕ್ಕಾಡ್ ಜಿಲ್ಲೆಯ ಮಲಂಪುಳ ಕ್ಷೇತ್ರದಿಂದ ಶಾಸಕರಾದರು. 2016ರಿಂದ 2021 ರವರೆಗೆ ಕೇರಳ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು.

ಕೇರಳದ ರಾಜಕೀಯ ಇತಿಹಾಸದಲ್ಲಿ ವಿಶಿಷ್ಟ ಛಾಪು ಮೂಡಿಸಿದ ನಾಯಕ

ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ, ಪಕ್ಷ ಮತ್ತು ಎಲ್‌ಡಿಎಫ್ ರೂಪಿಸಿದ ನೀತಿಗಳನ್ನು ಜಾರಿಗೆ ತರುವ ಮೂಲಕ ಅವರು ಕೇರಳವನ್ನು ಮುನ್ನಡೆಸಿದರು. ಬಿಕ್ಕಟ್ಟುಗಳಲ್ಲಿ ಹಿಂಜರಿಯದೆ ಅವರು ಸರ್ಕಾರವನ್ನು ಮುನ್ನಡೆಸಿದರು. ವಿರೋಧ ಪಕ್ಷದ ನಾಯಕರಾಗಿ, ಅವರು ಸದನದಲ್ಲಿ ಅನೇಕ ಜನಪ್ರಿಯ ಸಮಸ್ಯೆಗಳನ್ನು ಎತ್ತಿದರು. ಶಾಸಕಾಂಗ ವಿಷಯಗಳಲ್ಲೂ ಅವರು ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಕೇರಳದ ರಾಜಕೀಯ ಇತಿಹಾಸದಲ್ಲಿ ವಿಎಸ್ ವಿಶಿಷ್ಟ ಛಾಪು ಮೂಡಿಸಿದ ನಾಯಕ.

ಕಾಮ್ರೇಡ್ ವಿಎಸ್ ಅವರ ನಿಧನವು ಪಕ್ಷ ಮತ್ತು ದೇಶಕ್ಕೆ ತುಂಬಲಾಗದ ನಷ್ಟವನ್ನುಂಟುಮಾಡಿದೆ. ●

ಹೋರಾಟದ ದಂತಕಥೆ ಮರೆಯಾಯಿತು

ಹಿರಿಯ ಕಮ್ಯುನಿಸ್ಟ್ ನಾಯಕ, ಮಾಜಿ ಮುಖ್ಯಮಂತ್ರಿ ಮತ್ತು ವಿರೋಧ ಪಕ್ಷದ ನಾಯಕ ವಿ.ಎಸ್. ಅಚ್ಯುತಂದನ್ (101) ನಿಧನರಾದರು. ವಿಎಸ್ ಎಂಬ ಎರಡು ಅಕ್ಷರಗಳ ಮೂಲಕ ಮಲಯಾಳಿಗಳ ಮನಸ್ಸಿನಲ್ಲಿ ಕ್ರಾಂತಿಕಾರಿ ಬೆಳಕಾಗಿ ಅಚ್ಚೊತ್ತಿದ ಜನಪ್ರಿಯ ನಾಯಕ ಈಗ ನೆನಪುಗಳಲ್ಲಿ ಉಳಿಯುವ ಸ್ಫೂರ್ತಿಯಾಗಲಿದ್ದಾರೆ.ದೈಹಿಕ ಅನಾರೋಗ್ಯದಿಂದಾಗಿ ವಿಎಸ್ ಅವರನ್ನು ಕಳೆದ ತಿಂಗಳು 23 ರಂದು ತಿರುವನಂತಪುರಂ ಎಸ್‌ಯುಟಿ ಆಸ್ಪತ್ರೆಗೆ ದಾಖಲಿಸಲಾಯಿತು. ಸೋಮವಾರ (ಜುಲೈ 21, 2025) ಮಧ್ಯಾಹ್ನ 3.20 ರ ಸುಮಾರಿಗೆ ಅವರು ನಿಧನರಾದರು.



101 ವರ್ಷ ವಯಸ್ಸಿನ ವಿಎಸ್, ಪಾರ್ಶ್ವವಾಯುವಿಗೆ ಒಳಗಾದ ನಂತರ ತಿರುವನಂತಪುರಂನಲ್ಲಿರುವ ತಮ್ಮ ಮಗನ ನಿವಾಸ 'ವೇಲಿಕ್ಕಕಟ್'ನಲ್ಲಿ ದೀರ್ಘಕಾಲ ಚಿಕಿತ್ಸೆ ಪಡೆಯುತ್ತಿದ್ದರು. ವೃದ್ಧಾಪ್ಯದ ಕಾರಣ ಅವರು ಸಂಪೂರ್ಣ ವಿಶ್ರಾಂತಿಯಲ್ಲಿದ್ದರು. ಅವರು ಒಮ್ಮೆ ಕೇರಳದ ಮುಖ್ಯಮಂತ್ರಿಯಾಗಿದ್ದರು ಮತ್ತು ಮೂರು ಬಾರಿ ವಿರೋಧ ಪಕ್ಷದ ನಾಯಕರಾಗಿದ್ದರು. ವಿಎಸ್ ಏಳು ಬಾರಿ ವಿಧಾನಸಭೆಯ ಸದಸ್ಯರಾಗಿ ಆಯ್ಕೆಯಾದರು. 2006–11ರ ನಡುವೆ ಅವರು ಕೇರಳದ ಮುಖ್ಯಮಂತ್ರಿಯಾದರು. ಅವರು ಅನೇಕ ಜನಪ್ರಿಯ ಹೋರಾಟಗಳನ್ನು ಮುನ್ನಡೆಸಿದರು ಮತ್ತು 1980 ರಿಂದ 1991 ರವರೆಗೆ ಸಿಪಿಐ (ಎಂ) ರಾಜ್ಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. ಪ್ರಸ್ತುತ ಅವರು ಸಿಪಿಐ(ಎಂ) ರಾಜ್ಯ ಸಮಿತಿಗೆ ನಿಯಮಿತ ಆಹ್ವಾನಿತರಾಗಿದ್ದರು.

ವಿ.ಎಸ್.ಅಚ್ಯುತಂದನ್ ಅವರು ಅಕ್ಟೋಬರ್ 20, 1923ರಂದು ಆಲಪ್ಪುಳ ಜಿಲ್ಲೆಯ ಪುನ್ನಪ್ರ ವೆಂಟಲತಾರ ಕುಟುಂಬದಲ್ಲಿ ಅಯ್ಯನ್ ಶಂಕರನ್ ಮತ್ತು ಅಕ್ಕಮ್ಮ ಅಲಿಯಾಸ್ ಕಾರ್ತಿಯಾನಿ ದಂಪತಿಗಳ ಎರಡನೇ ಮಗನಾಗಿ ಜನಿಸಿದರು. ಅವರು ಪುನ್ನಪ್ರ ಪರವೂರು ಸರ್ಕಾರಿ ಶಾಲೆ ಮತ್ತು ಕಲರ್ ಕೋಡ್ ಶಾಲೆಯಲ್ಲಿ ಶಿಕ್ಷಣ ಪಡೆದರು. ವಿಎಸ್ ಅವರ ಬಾಲ್ಯವು ಬಡತನ ಮತ್ತು ಕಷ್ಟದಿಂದ ತುಂಬಿತ್ತು.

ಅವರು ತಮ್ಮ ನಾಲ್ಕನೇ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡರು. ಅವರ ತಾಯಿ ಸಿಡುಬು ರೋಗದಿಂದ ನಿಧನರಾದರು. ಅವರು ಏಳನೇ ತರಗತಿಯಲ್ಲಿದ್ದಾಗ ಅವರ ತಂದೆಯೂ ನಿಧನರಾದರು. ನಂತರ ತಮ್ಮ ಅಧ್ಯಯನವನ್ನು ತ್ಯಜಿಸಿ ತಮ್ಮ ಅಣ್ಣನ ಬಟ್ಟೆ ಅಂಗಡಿಯಲ್ಲಿ ಸಹಾಯಕರಾದರು. ನಂತರ, ಅವರು ಆಲಪ್ಪುಳ ಆಸ್ಪಿನ್‌ವಾಲ್ ಕಾಯಿರ್ ಕಂಪನಿಯಲ್ಲಿ ಕೆಲಸಗಾರರಾದರು. ಅಲ್ಲಿ ಮೂರು ವರ್ಷಗಳ ಕಾಲ ಕೆಲಸ ಮಾಡಿದರು.

ಅವರು 17ನೇ ವಯಸ್ಸಿನಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯರಾದರು. ವಿಎಸ್ ಅವರ ಸಂಘಟನಾ ಕೌಶಲ್ಯವನ್ನು ಕಂಡುಹಿಡಿದವರು ಮತ್ತು ಕುಟ್ಟನಾಡಿನ ಕೃಷಿ ಕಾರ್ಮಿಕರಲ್ಲಿ ಪಕ್ಷವನ್ನು ಬೆಳೆಸಲು ವಿಎಸ್ ಅವರನ್ನು ಪ್ರೇರೇಪಿಸಿದವರು ಪಿ.ಕೃಷ್ಣಪಿಳ್ಳೈ. ಪುನ್ನಪ್ರ–ವಯಲಾರ್ ಹೋರಾಟದ ಸಮಯದಲ್ಲಿ ಮತ್ತು ನಂತರ ತುರ್ತು ಪರಿಸ್ಥಿತಿಯ ಸಮಯದಲ್ಲಿ ಅವರನ್ನು ಬಂಧಿಸಲಾಯಿತು ಮತ್ತು ಪೊಲೀಸರಿಂದ ಕ್ರೂರವಾಗಿ ಚಿತ್ರಹಿಂಸೆಗೊಳಗಾದರು.

1943ರಲ್ಲಿ ಕೋಝಿಕ್ಕೋಡ್‌ನಲ್ಲಿ ನಡೆದ ಕಮ್ಯುನಿಸ್ಟ್ ಪಕ್ಷದ ಸಮ್ಮೇಳನದಲ್ಲಿ ಅವರು ಆಲಪ್ಪುಳದಿಂದ ಪ್ರತಿನಿಧಿಯಾಗಿ ಭಾಗವಹಿಸಿದರು. ಪುನ್ನಪ್ರ–ವಯಲಾರ್ ಹೋರಾಟದ ಸಮಯದಲ್ಲಿ, ಅವರು ಪಕ್ಷದ ಸೂಚನೆಗಳನ್ನು ಅನುಸರಿಸಿ ತಲೆಮರೆಸಿಕೊಂಡರು. ಕೊಟ್ಟಾಯಂನ ಪೂಂಜಾರ್‌ನಲ್ಲಿ ಅಡಗಿಕೊಂಡಿದ್ದಾಗ ಅವರನ್ನು ಬಂಧಿಸಲಾಯಿತು. ಪೊಲೀಸರಿಂದ ಕ್ರೂರವಾಗಿ ಥಳಿಸಲ್ಪಟ್ಟು ಸತ್ತಿದ್ದಾನೆಂದು ಭಾವಿಸಲಾದ ವಿಎಸ್ ಅವರನ್ನು, ಎಸೆಯಲು ಕಾಡಿಗೆ ಕರೆದೊಯ್ಯುವಾಗ ಜೀವಂತವಾಗಿದ್ದರು. ಅವರನ್ನು ಪತ್ತೆ ಹಚ್ಚಿ ಕೊಟ್ಟಾಯಂ ಆಸ್ಪತ್ರೆಗೆ ದಾಖಲಿಸಲಾಯಿತು.

ಆಸ್ಪತ್ರೆಯಿಂದ ಹೊರಬಂದ ನಂತರ, ವಿಎಸ್ ಜನಪ್ರಿಯ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದರು. ಭ್ರಷ್ಟಾಚಾರ ಮತ್ತು ರಾಜ್ಯ ಭಯೋತ್ಪಾದನೆಯ ವಿರುದ್ಧ ರಾಜಿಯಾಗದೆ ನಿಂತರು. 1956ರಲ್ಲಿ ಪಕ್ಷದ ರಾಜ್ಯ ಸಮಿತಿಯ ಸದಸ್ಯರಾದರು ಮತ್ತು 1957ರಲ್ಲಿ ಆಲಪ್ಪುಳ ಜಿಲ್ಲಾ ಕಾರ್ಯದರ್ಶಿಯಾದರು. 1958ರಲ್ಲಿ ರಾಷ್ಟ್ರೀಯ ಮಂಡಳಿಯ ಸದಸ್ಯರಾದರು. 1964ರಲ್ಲಿ ಅವಿಭಜಿತ ಪಕ್ಷದಿಂದ ಹೊರಹೊಮ್ಮಿದ 32 ರಾಷ್ಟ್ರೀಯ ಮಂಡಳಿಯ ಸದಸ್ಯರಲ್ಲಿ ಕೇರಳದ ಏಳು ಜನರಲ್ಲಿ ವಿಎಸ್ ಒಬ್ಬರು. 1964ರಲ್ಲಿ ಕೋಲ್ಕತ್ತಾದಲ್ಲಿ ನಡೆದ ಪಕ್ಷದ ಕಾಂಗ್ರೆಸ್‌ನಲ್ಲಿ, ವಿಎಸ್ ಕೇಂದ್ರ ಸಮಿತಿಗೆ ಆಯ್ಕೆಯಾದರು. ಅವರು 1985ರಲ್ಲಿ ಪಿಬಿ ಸದಸ್ಯರಾದರು. 2016ರಲ್ಲಿ ಅಧಿಕಾರಕ್ಕೆ ಬಂದ ಎಲ್‌ಡಿಎಫ್ ಸರ್ಕಾರದಲ್ಲಿ ವಿಎಸ್ ಅವರನ್ನು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಲಾಯಿತು.

ವಿ.ಎಸ್. ಅವರಿಗೆ ಅಂತಿಮ ವಿದಾಯ...... ಪುಟ 9ರಿಂದ

ಎ. ವಿಜಯರಾಘವನ್, ವಿಜು ಕೃಷ್ಣನ್, ಕೇಂದ್ರ ಸಮಿತಿ ಸದಸ್ಯರು, ಕೇರಳ ರಾಜ್ಯ ಕಾರ್ಯದರ್ಶಿ ಎಂ.ವಿ. ಗೋವಿಂದನ್, ತಮಿಳುನಾಡು ರಾಜ್ಯ ಕಾರ್ಯದರ್ಶಿ ಪಿ. ಷಣ್ಮುಗಂ, ಎಲ್‌ಡಿಎಫ್ ಸಂಯೋಜಕ ಡಿ.ಪಿ. ರಾಮಕೃಷ್ಣನ್, ಸಚಿವರು, ವಿರೋಧ ಪಕ್ಷದ ನಾಯಕ ವಿ.ಟಿ. ಸತೀಶನ್, ಮುಸ್ಲಿಂ ಲೀಗ್ ರಾಜ್ಯ ಅಧ್ಯಕ್ಷ ಸಾದಿಕ್ ಅಲಿ ತಂಗಲ್, ಅಖಿಲ ಭಾರತ ಕಾರ್ಯದರ್ಶಿ ಕೆ. ಕುಂಜಲಿಕುಟ್ಟಿ, ಎನ್.ಕೆ. ಪ್ರೇಮಚಂದ್ರನ್, ಸಂಸದರು, ಶಾಸಕರು, ವಿವಿಧ ಸಂಘಟನೆಗಳ ಮುಖ್ಯಸ್ಥರು, ಧಾರ್ಮಿಕ ಮತ್ತು ಸಾಮಾಜಿಕ ಮುಖಂಡರು ಮತ್ತು ಸಾಂಸ್ಕೃತಿಕ ಕಾರ್ಯಕರ್ತರು ಜಿಲ್ಲಾ ಸಮಿತಿ ಕಚೇರಿಗೆ ಭೇಟಿ ನೀಡಿ ಗೌರವ ಸಲ್ಲಿಸಿದರು.

ನಂತರ ಕಾಮ್ರೇಡ್ ವಿ.ಎಸ್. ಅವರ ಪಾರ್ಥಿವ ಶರೀರಕ್ಕೆ ಗೌರವ ಸಲ್ಲಿಸಲಾಯಿತು. ಅಂಕಿ ರುಂಡು ತಿರುವಂಬಾಡಿ ಜಂಕ್ಷನ್, ಜನರಲ್ ಆಸ್ಪತ್ರೆ ಜಂಕ್ಷನ್, ಕಲೆಕ್ಟರೇಟ್ ಜಂಕ್ಷನ್ ಮೂಲಕ ಆಲಪ್ಪುಳ ಬೀಚ್ ಮೈದಾನಕ್ಕೆ ಕರೆದೊಯ್ಯಲಾಯಿತು. ಸಾರ್ವಜನಿಕರಿಗೆ ಗೌರವ ಸಲ್ಲಿಸಲು ಅಲ್ಲಿಯೇ ಇರಿಸಲಾಗಿತ್ತು. ಈ ಶ್ರದ್ಧಾಂಜಲಿ ಕಾರ್ಯಕ್ರಮದ ನಂತರ, ಹೋರಾಟಗಾರರನ್ನು ಸಮಾಧಿ ಮಾಡಿದ ವಾಲಿಯ ಚುಡುಕ್ಕಾಡ್ ನಲ್ಲಿರುವ ಪುನ್ನಪ್ರಾ–ವಯಲಾರ್ ಹುತಾತ್ಮರ ಸ್ಮಾರಕದಲ್ಲಿ, (Punnapra-Vayalar Martyrs' Memorial at Valiya Chudukkad) ಸಂಜೆ 5 ಗಂಟೆಗೆ ಕಾಮ್ರೇಡ್ ವಿ.ಎಸ್. ಅವರ ದೇಹವನ್ನು ಅಂತ್ಯಕ್ರಿಯೆ ಮಾಡಲು ಯೋಜಿಸಲಾಗಿತ್ತು. ಆದಾಗ್ಯೂ, ಅವರ ಆದರ್ಶ ನಾಯಕನಿಗೆ ಗೌರವ ಸಲ್ಲಿಸಲು ಲಕ್ಷಾಂತರ ಜನರು ಅಲ್ಲಿ ಜಮಾಯಿಸಿದರು. ಅವರು ದೀರ್ಘ ಸರತಿ ಸಾಲಿನಲ್ಲಿ ಕಾಯುತ್ತಿದ್ದರು. ಇದರಿಂದಾಗಿ, ತಡವಾಗಿ, ರಾತ್ರಿ 9 ಗಂಟೆಗೆ ಪೂರ್ಣ ರಾಜ್ಯ ಗೌರವಗಳೊಂದಿಗೆ, 24 ಪೊಲೀಸ್ ಗುಂಡು ಹಾರಿಸಿ ಮೃತದೇಹವನ್ನು ನಂತರ ಕಾಮ್ರೇಡ್ ವಿ.ಎಸ್. ಅವರ ಪಾರ್ಥಿವ ಶರೀರಕ್ಕೆ ಗೌರವ ಸಲ್ಲಿಸಲಾಯಿತು. ಅಂಕಿ ರುಂಡು ತಿರುವಂಬಾಡಿ ಜಂಕ್ಷನ್, ಜನರಲ್ ಆಸ್ಪತ್ರೆ ಜಂಕ್ಷನ್, ಕಲೆಕ್ಟರೇಟ್ ಜಂಕ್ಷನ್ ಮೂಲಕ ಆಲಪ್ಪುಳ ಬೀಚ್ ಮೈದಾನಕ್ಕೆ ಕರೆದೊಯ್ಯಲಾಯಿತು. ಸಾರ್ವಜನಿಕರಿಗೆ ಗೌರವ ಸಲ್ಲಿಸಲು ಅಲ್ಲಿಯೇ ಇರಿಸಲಾಗಿತ್ತು. ಈ ಶ್ರದ್ಧಾಂಜಲಿ ಕಾರ್ಯಕ್ರಮದ ನಂತರ, ಹೋರಾಟಗಾರರನ್ನು ಸಮಾಧಿ ಮಾಡಿದ ವಾಲಿಯ ಚುಡುಕ್ಕಾಡ್ ನಲ್ಲಿರುವ ಪುನ್ನಪ್ರಾ–ವಯಲಾರ್ ಹುತಾತ್ಮರ ಸ್ಮಾರಕದಲ್ಲಿ, (Punnapra-Vayalar Martyrs' Memorial at Valiya Chudukkad) ಸಂಜೆ 5 ಗಂಟೆಗೆ ಕಾಮ್ರೇಡ್ ವಿ.ಎಸ್. ಅವರ ದೇಹವನ್ನು ಅಂತ್ಯಕ್ರಿಯೆ ಮಾಡಲು ಯೋಜಿಸಲಾಗಿತ್ತು. ಆದಾಗ್ಯೂ, ಅವರ ಆದರ್ಶ ನಾಯಕನಿಗೆ ಗೌರವ ಸಲ್ಲಿಸಲು ಲಕ್ಷಾಂತರ ಜನರು ಅಲ್ಲಿ



ಜಮಾಯಿಸಿದರು. ಅವರು ದೀರ್ಘ ಸರತಿ ಸಾಲಿನಲ್ಲಿ ಕಾಯುತ್ತಿದ್ದರು. ಇದರಿಂದಾಗಿ, ತಡವಾಗಿ, ರಾತ್ರಿ 9 ಗಂಟೆಗೆ ಪೂರ್ಣ ರಾಜ್ಯ ಗೌರವಗಳೊಂದಿಗೆ, 24 ಪೊಲೀಸ್ ಗುಂಡು ಹಾರಿಸಿ ಮೃತದೇಹವನ್ನು ಅಂತ್ಯಕ್ರಿಯೆ ಮಾಡಲಾಯಿತು. ಬುಧವಾರ ಸಂಜೆ ಆಲಪ್ಪುಳ ಕರಾವಳಿಯಲ್ಲಿ ಸೂರ್ಯ ಮುಳುಗುತ್ತಿದ್ದಂತೆ, ಗಾಳಿಯು ಭಾರವಾಯಿತು – ಮುಂಗಾರು ಮೋಡಗಳ ಭಾರದಿಂದ ಮಾತ್ರವಲ್ಲ, ಕೇರಳದ ಎಡ ರಾಜಕೀಯದ ಆತ್ಮಸಾಕ್ಷಿಯಾಗಿ ಮಾರ್ಪಟ್ಟ ನಾಯಕನಿಗೆ ವಿದಾಯ ಹೇಳುವ ಸಾವಿರಾರು ಜನರ ಮೌನ ದುಃಖದೊಂದಿಗೆ. ಅವರ ಜೀವನ ಮತ್ತು ಹೋರಾಟಗಳನ್ನು ರೂಪಿಸಿದ ಮಣ್ಣಿನಲ್ಲಿ, ವಲಿಯ ಚುಡುಕ್ಕಾಡ್ ನಲ್ಲಿರುವ ಪುನ್ನಪ್ರಾ–ವಯಲಾರ್ ಹುತಾತ್ಮರ ಸ್ಮಾರಕದಲ್ಲಿ ಪೂರ್ಣ ಸರ್ಕಾರಿ ಗೌರವಗಳೊಂದಿಗೆ ಸಂಗಾತಿ ವಿ.ಎಸ್. ಅಚ್ಯುತಾನಂದನ್ ಅವರನ್ನು ರಾತ್ರಿ 9.15ಕ್ಕೆ ಅಂತ್ಯಕ್ರಿಯೆ ಮಾಡಲಾಯಿತು. ಪುನ್ನಪ್ರ–ವಯಲಾರ್ ದಂಗೆ ಚಳವಳಿಯ ಹುತಾತ್ಮರು ಶಾಶ್ವತ ಶಾಂತಿಯಿಂದ ವಿಶ್ರಾಂತಿ ಪಡೆಯುತ್ತಿದ್ದ ವಲಿಯಾಚುಡುಕ್ಕಾಡ್ ಭೂಮಿ ಮತ್ತೊಬ್ಬ ಯೋಧನಿಗೆ ಆಶ್ರಯ ನೀಡಿದೆ. ಇದು ಪಿ. ಕೃಷ್ಣ ಪಿಳ್ಳೈ, ಟಿ.ವಿ. ಥಾಮಸ್, ಪಿ.ಕೆ. ಚಂದ್ರನಂದನ್ ಮತ್ತು ಕೆ.ಆರ್. ಗೌರಿ ಸೇರಿದಂತೆ ಪ್ರಸಿದ್ಧ ಕಮ್ಯುನಿಸ್ಟ್ ನಾಯಕರ ಅಂತಿಮ ಸಂಸ್ಕಾರ ಸ್ಥಳವಾಗಿದೆ.

–ಸಿಚಿ–

ಆಗಸ್ಟ್ 8: ಚುನಾವಣಾ ಆಯೋಗದ ವಿಶೇಷ ತೀವ್ರ ಪರಿಷ್ಕರಣೆ ವಿರುದ್ಧ ದೇಶವ್ಯಾಪಿ ಪ್ರತಿಭಟನೆ– ಸಿಪಿಐ(ಎಂ) ಪೊಲಿಟ್‌ಬ್ಯೂರೋ ಕರೆ

ಚುನಾವಣಾ ಆಯೋಗ ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್)ಗೆ ಆದೇಶಿಸಿದೆ. ಈಗ, ಚುನಾವಣಾ ಆಯೋಗವು ಈ ಪ್ರಕ್ರಿಯೆಯನ್ನು ಇಡೀ ದೇಶಕ್ಕೆ ವಿಸ್ತರಿಸಲು ಬಯಸಿದೆ. ಮತದಾರರ ಪಟ್ಟಿಯನ್ನು ಪರಿಷ್ಕರಿಸುವ ಹೆಸರಿನಲ್ಲಿ, ಚುನಾವಣಾ ಆಯೋಗವು ಮತದಾರರ ಪೌರತ್ವವನ್ನು ಪರಿಶೀಲಿಸುವ ಅಧಿಕಾರವನ್ನು ತನ್ನದಾಗಿಸಿಕೊಳ್ಳುತ್ತಿದೆ. ಇದು ಅದರ ಸಾಂವಿಧಾನಿಕ ಮಿತಿಯ ಹೊರಗಿರುವ ವಿಷಯ. ಮತದಾರರ ಪಟ್ಟಿಯಿಂದ ವಿದೇಶಿಯರನ್ನು ಹೊರಗಿಡುವ ಆಧಾರರರಹಿತ ನೆಪದಲ್ಲಿ, ಅವರು ಅಲ್ಪಸಂಖ್ಯಾತರ ಮತ್ತು ಇತರ ಆಯ್ದ ಗುಂಪುಗಳನ್ನೊಳಗೊಂಡ ವಿಶಾಲ ಜನವಿಭಾಗಗಳ ಮತದಾನದ ಹಕ್ಕನ್ನು ಕಸಿದುಕೊಳ್ಳುತ್ತಿದ್ದಾರೆ. ಇಡೀ ಪ್ರಕ್ರಿಯೆಯು ವಿವಿಧ ಉಲ್ಲಂಘನೆಗಳಿಂದ ತುಂಬಿದೆ ಮತ್ತು ಸಂವಿಧಾನವು ಖಾತರಿಪಡಿಸಿದ ಮತದಾನದ ಹಕ್ಕನ್ನು ಸಹ ಅನೇಕರಿಗೆ ನಿರಾಕರಿಸಬಹುದು. ಕೋವಿಡ್ ಸಾಂಕ್ರಾಮಿಕದ ಮೊದಲು ಜನರು ವ್ಯಾಪಕವಾಗಿ ವಿರೋಧಿಸುತ್ತಿದ್ದ ಎನ್‌ಆರ್‌ಸಿ ಪ್ರಕ್ರಿಯೆಯನ್ನು ಹಿಂಬಾಗಿಲಿನ ಮೂಲಕ ರಹಸ್ಯವಾಗಿ ಜಾರಿಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಇಲ್ಲಿಯವರೆಗೆ ಬಿಜೆಪಿ ನೇತೃತ್ವದ ಸರ್ಕಾರದ ಪರವಾಗಿ ಕಾರ್ಯನಿರ್ವಹಿಸುತ್ತಿದ್ದ ಚುನಾವಣಾ ಆಯೋಗವು ಈಗ ಆರೆಸ್ಸೆಸ್/ಸಂಘ ಪರಿವಾರದ ಅಜೆಂಡಾವನ್ನು ಅನುಷ್ಠಾನಗೊಳಿಸುವಲ್ಲಿ ಶಾಮೀಲಾಗಿದೆ.

ದೇಶಾದ್ಯಂತ ವಿಸ್ತರಿಸಲು ಪ್ರಯತ್ನಿಸಲಾಗುತ್ತಿರುವ ಪ್ರಜಾಪ್ರಭುತ್ವ ಹಕ್ಕುಗಳ ಮೇಲಿನ ಈ ದಾಳಿಗೆ ಅವಕಾಶ ನೀಡಬಾರದು. ಗಮನಿಸಬೇಕಾದ ಅಂಶವೆಂದರೆ, ಟಿಡಿಪಿಯಂತಹ ಬಿಜೆಪಿಯ ಕೆಲವು ಎನ್‌ಡಿಎ ಮೈತ್ರಿಕೂಟದ ಪಾಲುದಾರರು ಸಹ ಎಸ್‌ಐಆರ್ ಬಗ್ಗೆ ತಮ್ಮ ಕಳವಳಗಳನ್ನು ವ್ಯಕ್ತಪಡಿಸಿದ್ದಾರೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಚುನಾವಣಾ ಆಯೋಗದ ಈ ಪ್ರಜಾಪ್ರಭುತ್ವ ವಿರೋಧಿ ಕಸರತ್ತಿನ ವಿರುದ್ಧ ಆಗಸ್ಟ್ 8, 2025 ರಂದು ದೇಶಾದ್ಯಂತ ಪ್ರತಿಭಟನೆಗಳನ್ನು ನಡೆಸಬೇಕೆಂದು ಕರೆ ನೀಡಿದೆ.

ಜುಲೈ 18ರಂದು ಪೊಲಿಟ್‌ಬ್ಯುರೊ ಸಭೆಯ ನಂತರದ ಹೇಳಿಕೆಯಲ್ಲಿ ಇದನ್ನು ತಿಳಿಸಲಾಗಿದೆ. ಹೇಳಿಕೆಯಲ್ಲಿನ ಇತರ ಅಂಶಗಳು ಈ ಕೆಳಗಿನಂತಿವೆ:

ಸಾರ್ವಜನಿಕ ಭದ್ರತೆ ಕುರಿತಾದ ಮಹಾರಾಷ್ಟ್ರದ ಸರ್ವಾಧಿಕಾರಶಾಹೀ ಮಸೂದೆ

ಬಿಜೆಪಿ ಸರ್ಕಾರ ಅಂಗೀಕರಿಸಿದ ಮಹಾರಾಷ್ಟ್ರ ಸಾರ್ವಜನಿಕ ಭದ್ರತಾ ಮಸೂದೆಯು ಜನರ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ಪ್ರಮುಖ ದಾಳಿಯಾಗಿದೆ. ತೀವ್ರ ಎಡಪಂಥೀಯ ಶಕ್ತಿಗಳ ವಿರುದ್ಧ ಹೋರಾಡುವ ಹೆಸರಿನಲ್ಲಿ, ಮಸೂದೆಯು ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ಎಲ್ಲರನ್ನು ಸಾರ್ವಜನಿಕ ಸುರಕ್ಷತೆ ಮತ್ತು ರಾಷ್ಟ್ರೀಯ ಭದ್ರತೆಗೆ ಬೆದರಿಕೆ ಎಂದು ಬಿಂಬಿಸಲು ಪ್ರಯತ್ನಿಸುತ್ತದೆ. ಮಸೂದೆಯು ಉದ್ದೇಶಪೂರ್ವಕವಾಗಿ ತೀವ್ರ ಎಡಪಂಥೀಯ ಶಕ್ತಿಗಳು ಮತ್ತು ಅಂತಹುದೇ ಸಂಘಟನೆಗಳು ಅಂದರೆ ಯಾವವು ಎಂಬ ವ್ಯಾಖ್ಯಾನವನ್ನು ಅಸ್ಪಷ್ಟವಾಗಿ ಬಿಡುತ್ತದೆ ಮತ್ತು ಯಾವುದೇ ವಿರೋಧದ ಮೇಲೆ ಗುರಿಮಾಡಲು ಸಾಕಷ್ಟು ಅವಕಾಶವನ್ನು ಸೃಷ್ಟಿಸುತ್ತದೆ. ಮಸೂದೆಯಲ್ಲಿರುವ ಕಠಿಣ ನಿಬಂಧನೆಗಳನ್ನು ಭಿನ್ನಾಭಿಪ್ರಾಯವನ್ನು ನಿಗ್ರಹಿಸಲು ಮತ್ತು ರಾಜಕೀಯ ವಿರೋಧದ ಬಾಯಿ ಮುಚ್ಚಿಸಲು ಬಳಸುವ ಎಲ್ಲಾ ಅಪಾಯಗಳಿವೆ.

ಈ ಸರ್ವಾಧಿಕಾರಶಾಹಿ ಮಸೂದೆಯನ್ನು ಪ್ರತಿಭಟಿಸಬೇಕು ಎಂದು ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಸಿಪಿಐ(ಎಂ) ಮನವಿ ಮಾಡಿದೆ ಮತ್ತು ಅದನ್ನು ತಕ್ಷಣ ರದ್ದುಗೊಳಿಸುವಂತೆ ಒತ್ತಾಯಿಸಿದೆ.

ಜಮ್ಮು ಮತ್ತು ಕಾಶ್ಮೀರ: ಭದ್ರತಾ ವೈಫಲ್ಯಕ್ಕೆ ಹೊಣೆಗಾರ ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು

ಇತ್ತೀಚೆಗೆ ಮಾಧ್ಯಮಗಳಿಗೆ ನೀಡಿದ ಸಂದರ್ಶನದಲ್ಲಿ, ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯು ಭದ್ರತಾ ವೈಫಲ್ಯದ ಪರಿಣಾಮವಾಗಿದೆ ಎಂದು ಜಮ್ಮು ಮತ್ತು ಉಪರಾಜ್ಯಪಾಲರು ಒಪ್ಪಿಕೊಂಡಿದ್ದಾರೆ. ಕೇಂದ್ರಾಡಳಿತ ಪ್ರದೇಶವಾಗಿ ಜಮ್ಮು ಮತ್ತು ಕಾಶ್ಮೀರ ನೇರವಾಗಿ ಕೇಂದ್ರದ ಆಡಳಿತದಲ್ಲಿದೆ ಮತ್ತು ಚುನಾಯಿತ ಮುಖ್ಯಮಂತ್ರಿಯೂ ಸಹ ಭದ್ರತೆ, ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ಚರ್ಚೆಗಳು ಮತ್ತು ನಿರ್ಧಾರಗಳಲ್ಲಿ ಭಾಗವಹಿಸುವುದನ್ನು ನಿಷೇಧಿಸಲಾಗಿದೆ. ಭದ್ರತಾ ಲೋಪವನ್ನು ಒಪ್ಪಿಕೊಳ್ಳುವುದೆಂದರೆ, ವಾಸ್ತವವಾಗಿ, ಭದ್ರತೆಗೆ ನೇರ ಹೊಣೆಗಾರರಾಗಿರುವ ಕೇಂದ್ರ ಗೃಹ ಸಚಿವರ ವೈಫಲ್ಯವನ್ನು ಒಪ್ಪಿಕೊಂಡಂತೆ. ಇಂತಹ ಗಂಭೀರ ಲೋಪಕ್ಕೆ ಸರ್ಕಾರವನ್ನು ಹೊಣೆ ಮಾಡಬೇಕು ಮತ್ತು ಸಂಬಂಧಪಟ್ಟ ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಕೇಂದ್ರ ಸರ್ಕಾರದ ಆದೇಶದ ಮೇರೆಗೆ ಕೆಲಸ ಮಾಡುತ್ತಿರುವ ಉಪರಾಜ್ಯಪಾಲರು ಚುನಾಯಿತ ರಾಜ್ಯ ಸರ್ಕಾರದ ಕಾರ್ಯನಿರ್ವಹಣೆಯನ್ನು ದುರ್ಬಲಗೊಳಿಸುತ್ತಿದ್ದಾರೆ. ಅವರು ಊಳಿಗಮಾನ್ಯ ಮಹಾರಾಜರ ವಿರುದ್ಧ ಮತ್ತು ಅವರ ಆಳ್ವಿಕೆಯಿಂದ ಜಮ್ಮು ಮತ್ತು ಕಾಶ್ಮೀರದ ವಿಮೋಚನೆಗಾಗಿ ಹೋರಾಡಿದ 22 ಹುತಾತ್ಮರ ಸ್ಮರಣಾರ್ಥ ರಜಾದಿನವನ್ನು ರದ್ದುಗೊಳಿಸಿದರು. ಬದಲಾಗಿ, ರೈತರನ್ನು ಕೊಂದು ವಿಮೋಚನಾ ಹೋರಾಟವನ್ನು ಹತ್ತಿಕ್ಕಲು ಪ್ರಯತ್ನಿಸಿದ ಮಹಾರಾಜರ ಜನ್ಮದಿನವನ್ನು ರಜಾದಿನವೆಂದು ಘೋಷಿಸಲಾಗಿದೆ. ಮುಖ್ಯಮಂತ್ರಿ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ನಾಯಕರಿಗೆ ಹುತಾತ್ಮರಿಗೆ ಗೌರವ ಸಲ್ಲಿಸಲು ಅವಕಾಶ ಕೊಡಲಿಲ್ಲ. ಇದು ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ಒಕ್ಕೂಟ ರಚನೆಯ ಮೇಲೆ ಗಂಭೀರ ದಾಳಿಯಾಗಿದೆ.

ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನವನ್ನು ಪುನಃಸ್ಥಾಪಿಸಲು ಮತ್ತು ರಾಜ್ಯ ಸರ್ಕಾರವನ್ನು ಆಯ್ಕೆ ಮಾಡಿದ ಜನರ ಜನಾದೇಶವನ್ನು ಗೌರವಿಸಲು ತಕ್ಷಣ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಪೊಲಿಟ್‌ಬ್ಯುರೊ ಒತ್ತಾಯಿಸಿದೆ.

ಬಂಗಾಳಿಗಳನ್ನು ಗಡೀಪಾರು ಮಾಡುವುದನ್ನು ನಿಲ್ಲಿಸಬೇಕು

ಬಂಗಾಳಿ ಮಾತನಾಡುವ ಜನರ ಮೇಲೆ ಗುರಿಯಿಟ್ಟು ದಾಳಿ ನಡೆಸುತ್ತಿರುವ ಬಗ್ಗೆ ಅನೇಕ ರಾಜ್ಯಗಳಿಂದ ವರದಿಗಳು ಹೊರಬರುತ್ತಿವೆ. ದೆಹಲಿ, ಒಡಿಶಾ, ಅಸ್ಸಾಂ, ಹರಿಯಾಣ, ಛತ್ತೀಸ್‌ಗಢ ಮತ್ತು ಮಹಾರಾಷ್ಟ್ರದಂತಹ ಅನೇಕ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ, ಬಂಗಾಳಿಗಳನ್ನು ಅವರ ದಾಖಲೆಗಳ ಸರಿಯಾದ ಪರಿಶೀಲನೆಯಿಲ್ಲದೆ ಮತ್ತು ಸೂಕ್ತ ಪ್ರಕ್ರಿಯೆಯನ್ನು ಅನುಸರಿಸದೆ ಬಾಂಗ್ಲಾದೇಶೀಯರು ಎಂದು ಹಣೆಪಟ್ಟಿ ಹಚ್ಚಲಾಗುತ್ತಿದೆ. ಅಂತಹ ವ್ಯಕ್ತಿಗಳನ್ನು ಪೊಲೀಸರು ಬಂಧಿಸಿ ಅಮಾನವೀಯ ದೌರ್ಜನ್ಯ ಮತ್ತು ಚಿತ್ರಹಿಂಸೆಗೆ ಒಳಪಡಿಸುತ್ತಿದ್ದಾರೆ. ಭೂಮಿ ಮತ್ತು ಸಮುದ್ರ ಮಾರ್ಗದ ಮೂಲಕವೂ ಜನರನ್ನು (ಭಾರತೀಯ ನಾಗರಿಕರು ಸೇರಿದಂತೆ) ಬಲವಂತವಾಗಿ ಬಾಂಗ್ಲಾದೇಶಕ್ಕೆ ಹಿಂದಕ್ಕೆ ತಳ್ಳಿದ ನಿದರ್ಶನಗಳೂ ಇವೆ.

ಬಂಗಾಳಿಗಳ ಮೇಲಿನ ಈ ಗುರಿಮಾಡಿದ ದಾಳಿಗಳು ಭಾರತೀಯ ಸಂವಿಧಾನವು ಎಲ್ಲಾ ನಾಗರಿಕರಿಗೆ ನೀಡಿರುವ ಚಲನೆಯ ಸ್ವಾತಂತ್ರ್ಯದ ಹಕ್ಕಿಗೆ ವಿರುದ್ಧವಾಗಿದೆ ಎಂದು ಸಿಪಿಐ(ಎಂ) ಇದನ್ನು ವಿರೋಧಿಸುವುದಾಗಿ ಹೇಳಿರುವ ಪೊಲಿಟ್‌ಬ್ಯುರೊ ಈ ಅಕ್ರಮ ಬಂಧನಗಳನ್ನು ನಿಲ್ಲಿಸಲು ಮತ್ತು ಜನರ ಹಕ್ಕುಗಳನ್ನು ರಕ್ಷಿಸಲು ಸರ್ಕಾರವನ್ನು ಆಗ್ರಹಿಸಿದೆ.

ಅಸ್ಸಾಂನಲ್ಲಿ ಒಕ್ಕಲೆಬ್ಬಿಸುವ ಪ್ರಕರಣಗಳು

ಅಸ್ಸಾಂ ರಾಜ್ಯ ಸರ್ಕಾರವು ಬಹುಸಂಖ್ಯೆಯಲ್ಲಿ ಜನರನ್ನು ಅವರ ಹಕ್ಕಿನ ಭೂಮಿಯಿಂದ ಹೊರಹಾಕುತ್ತಿದೆ. ಮುಖ್ಯಮಂತ್ರಿಗಳು ಈ ಬಗ್ಗೆ ಹೆಮ್ಮೆಪಡುತ್ತಿದ್ದಾರೆ ಮತ್ತು ಸಮಾಜದಲ್ಲಿ ಕೋಮು ಧ್ರುವೀಕರಣವನ್ನು ಮತ್ತಷ್ಟು ಹೆಚ್ಚಿಸಲು ಅವುಗಳನ್ನು ಬಳಸಲು ಪ್ರಯತ್ನಿಸುತ್ತಿದ್ದಾರೆ. ಈ ಭೂಮಿಯ ಕೆಳಗೆ ಶ್ರೀಮಂತ ಖನಿಜ ಸಂಪನ್ಮೂಲಗಳಿವೆ ಎಂಬ ಇತ್ತೀಚಿನ ವರದಿಗಳು, ಖಾಸಗಿ ಕಂಪನಿಗಳು ಅವುಗಳನ್ನು ಬಳಸಿಕೊಳ್ಳಲು ಅವಕಾಶ ನೀಡಬೇಕೆನ್ನುವ ಉತ್ಸಾಹ ಸೇರಿಕೊಂಡು, ಈ ರೀತಿ ಒಕ್ಕಲೆಬ್ಬಿಸುತ್ತಿರುವುದರ ಹಿಂದೆ ಮತ್ತೊಂದು ಕಾರಣವಿರಬಹುದು ಎನ್ನಲಾಗುತ್ತಿದೆ.

ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿವಿಧ ಈಶಾನ್ಯ ರಾಜ್ಯಗಳಲ್ಲಿ ಜನಾಂಗೀಯ ವ್ಯತ್ಯಾಸಗಳನ್ನು ಬಳಸಿಕೊಂಡು ವಿಭಜನೆಗಳನ್ನು ಸೃಷ್ಟಿಸಲು ಮತ್ತು ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿವೆ. ಈ ಕ್ರಮಗಳು, ವಿಶೇಷವಾಗಿ ದೀರ್ಘ ಅಂತರರಾಷ್ಟ್ರೀಯ ಗಡಿಯನ್ನು ಹಂಚಿಕೊಂಡಿರುವ ಪ್ರದೇಶದಲ್ಲಿ, ನಮ್ಮ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಹಾನಿ ತರುತ್ತವೆ ದು ಪೊಲಿಟ್‌ಬ್ಯುರೊ ಹೇಳಿದೆ.

ಕೇರಳ ರಾಜ್ಯಪಾಲರ ಕ್ರಮಗಳು–ಎಲ್‌ಡಿಎಫ್ ಸರ್ಕಾರದ ಕಾರ್ಯನಿರ್ವಹಣೆಗೆ ಅಡ್ಡಿಪಡಿಸುವ ಪ್ರಯತ್ನಗಳು

ಕೇರಳ ರಾಜ್ಯಪಾಲರು ಆರ್‌ಎಸ್‌ಎಸ್ ಮತ್ತು ಅದರ ಹಿಂದುತ್ವ ಸಿದ್ಧಾಂತವನ್ನು ಉತ್ತೇಜಿಸಲು ತಮ್ಮ ಸಾಂವಿಧಾನಿಕ ಹುದ್ದೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ರಾಜಭವನ ಆಯೋಜಿಸುವ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ, ಅವರು ಉದ್ದೇಶಪೂರ್ವಕವಾಗಿ ಅಖಂಡ ಭಾರತದ ನಕ್ಷೆ ಮತ್ತು ಸಂವಿಧಾನದಿಂದ ಗುರುತಿಸಲ್ಪಡದ ಸಂಕೇತಗಳಾದ ಭಾರತ ಮಾತೆಯ ಚಿತ್ರಗಳನ್ನು ಪ್ರದರ್ಶಿಸುತ್ತಿದ್ದಾರೆ. ಅವರು ಚುನಾಯಿತ ಎಲ್‌ಡಿಎಫ್ ಸರ್ಕಾರದ ಸಲಹೆಯನ್ನು ಬಹಿರಂಗವಾಗಿ ಧಿಕ್ಕರಿಸುತ್ತಾರೆ ಮತ್ತು ಸಾಂವಿಧಾನಿಕ ಮಾನದಂಡಗಳಿಗೆ ಅನುಗುಣವಾಗಿ ಅಧಿಕೃತ ಕಾರ್ಯಕ್ರಮಗಳನ್ನು ನಡೆಸಲು ನಿರಾಕರಿಸುತ್ತಾರೆ. ತಮ್ಮ ಕೃತ್ಯಗಳ ಮೂಲಕ, ಎಲ್‌ಡಿಎಫ್ ಸರ್ಕಾರ ಎತ್ತಿಹಿಡಿದ ಜಾತ್ಯತೀತ ಮೌಲ್ಯಗಳನ್ನು ದುರ್ಬಲಗೊಳಿಸಲು ಆರ್‌ಎಸ್‌ಎಸ್ ಮತ್ತು ಅದರ ಅಂಗಸಂಸ್ಥೆಗಳನ್ನು ಸಕ್ರಿಯವಾಗಿ ಪ್ರೋತ್ಸಾಹಿಸುತ್ತಿದ್ದಾರೆ.

ರಾಜ್ಯಪಾಲರ ಈ ಕ್ರಮಗಳ ವಿರುದ್ಧ ಸಮಾಜದ ವಿವಿಧ ವಿಭಾಗಗಳು, ವಿಶೇಷವಾಗಿ ವಿದ್ಯಾರ್ಥಿಗಳು ಆಯೋಜಿಸಿರುವ ವಿವಿಧ ಪ್ರದರ್ಶನಗಳನ್ನು ಸಿಪಿಐ(ಎಂ) ಶ್ಲಾಘಿಸುವುದಾಗಿ ಪೊಲಿಟ್‌ಬ್ಯುರೊ ಹೇಳಿದೆ.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ರಾಜ್ಯಪಾಲರ ಅಧಿಕಾರಗಳ ಕುರಿತು ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ನಂತರ ಕೇರಳ ಸರ್ಕಾರವು ತನ್ನ ಅರ್ಜಿಗಳನ್ನು ಹಿಂಪಡೆಯಲು ಅವಕಾಶ ನೀಡಲು ನಿರಾಕರಿಸುತ್ತಿದೆ. ಸುಪ್ರೀಂ ಕೋರ್ಟ್ ತೀರ್ಪು ತಮಿಳುನಾಡಿಗೆ ಮಾತ್ರ ಸೀಮಿತವಾಗಿಲ್ಲ, ಬದಲಾಗಿ ಎಲ್ಲಾ ರಾಜ್ಯಗಳಿಗೂ ಅನ್ವಯಿಸುವುದರಿಂದ ಅರ್ಜಿಗಳು ಈಗ ನಿಷ್ಪ್ರಯೋಜಕವಾಗಿವೆ. ರಾಜ್ಯಪಾಲರು ಮತ್ತು ಕೇಂದ್ರ ಸರ್ಕಾರದ ಉದ್ದೇಶ ಮೊಕದ್ದಮೆಯನ್ನು ದೀರ್ಘಗೊಳಿಸುವುದು ಮತ್ತು ವಿಶ್ವವಿದ್ಯಾಲಯಗಳಿಗೆ ಸೂಕ್ತ ಪ್ರಕ್ರಿಯೆಯ ಮೂಲಕ ಉಪಕುಲಪತಿಗಳ ನೇಮಕಗಳನ್ನು ನಿರಾಕರಿಸುವುದನ್ನು ಮುಂದುವರೆಸಲು ಅವಕಾಶ ಮಾಡಿಕೊಳ್ಳುವುದು, ನಿಯಮಿತ ಉಪಕುಲಪತಿಗಳನ್ನು ನೇಮಿಸುವಲ್ಲಿ ರಾಜ್ಯಪಾಲರು ವಿಫಲರಾಗಿದ್ದಾರೆ ಎಂದು ಕೇರಳ ಹೈಕೋರ್ಟ್ ಕೂಡ ಟೀಕಿಸಿದೆ. ಕೇರಳದ ಉನ್ನತ ಶಿಕ್ಷಣ ವ್ಯವಸ್ಥೆಯ ಹೆಸರುಗೆಡಿಸಲು ಮತ್ತು ಅದನ್ನು ನಾಶಮಾಡಲು ಪ್ರಜ್ಞಾಪೂರ್ವಕ ಪ್ರಯತ್ನ ಮಾಡಲಾಗುತ್ತಿದೆ.


ಕೇರಳದಲ್ಲಿ ಎಲ್‌ಡಿಎಫ್ ಸರ್ಕಾರದ ಸುಗಮ ಕಾರ್ಯನಿರ್ವಹಣೆಗೆ ಅಡ್ಡಿಪಡಿಸುವ ಈ ಪ್ರಯತ್ನಗಳನ್ನು ಸಹಿಸಲು ಸಾಧ್ಯವಿಲ್ಲ ಎಂದಿರುವ ಪೊಲಿಟ್‌ಬ್ಯುರೊ ಸಿಪಿಐ(ಎಂ) ತನ್ನ ಮಿತ್ರಪಕ್ಷಗಳೊಂದಿಗೆ ಕೇರಳದ ಜನರ ಹಿತಕ್ಕಾಗಿ ಕೆಲಸ ಮಾಡುವುದನ್ನು ಮುಂದುವರಿಸುತ್ತದೆ ಮತ್ತು ಬಿಜೆಪಿಯ ಕುತಂತ್ರಗಳನ್ನು ಬಯಲಿಗೆಳೆಯುತ್ತದೆ ಎಂದು ಹೇಳಿದೆ.

ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ದೇಶದ ಹಿತಾಸಕ್ತಿಗಳಿಗೆ ವಿರುದ್ಧವಾಗಿರುವ ಮಸೂದೆಗಳು

ಸರ್ಕಾರವು ಮುಂಬರುವ ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ತಿದ್ದುಪಡಿ ಮಸೂದೆಯನ್ನು, ಪರಮಾಣು ಶಕ್ತಿ ಕಾಯ್ದೆ ಮತ್ತು ಪರಮಾಣು ಹಾನಿಗೆ ನಾಗರಿಕ ಬಾಧ್ಯತೆ ಕಾಯ್ದೆಯನ್ನು ತಿದ್ದುಪಡಿ ಮಾಡುವ ಮಸೂದೆಗಳೊಂದಿಗೆ ಮಂಡಿಸಲು ಉದ್ದೇಶಿಸಿದೆ ಎಂದು ವರದಿಗಳು ಸೂಚಿಸುತ್ತವೆ. ಗಣಿ ಮತ್ತು ಖನಿಜ ಕಾಯ್ದೆಗೆ ತಿದ್ದುಪಡಿ ತರುವುದು ದೇಶದ ನಿರ್ಣಾಯಕ ಖನಿಜ ಸಂಪನ್ಮೂಲಗಳನ್ನು ಖಾಸಗಿ ಮತ್ತು ವಿದೇಶಿ ಪಾಲುದಾರರು ಬಳಸಿಕೊಳ್ಳಲು ಅವಕಾಶ ನೀಡುವ ಗುರಿಯನ್ನು ಹೊಂದಿದೆ. ಅದೇ ರೀತಿ, ಪರಮಾಣು ಶಕ್ತಿ ಕಾಯ್ದೆ ಮತ್ತು ಪರಮಾಣು ಹಾನಿಗೆ ನಾಗರಿಕ ಬಾಧ್ಯತೆ ಕಾಯ್ದೆಗೆ ತಿದ್ದುಪಡಿಗಳನ್ನು ಅಮೆರಿಕ ಮತ್ತು ಇತರ ವಿದೇಶಿ ಕಂಪನಿಗಳು ಈ ಬಹುಮಹತ್ವದ ಪರಮಾಣು ವಲಯಕ್ಕೆ ಪ್ರವೇಶಿಸಲು ಇರುವ ಎಲ್ಲಾ ಅಡೆತಡೆಗಳನ್ನು ತೆಗೆದುಹಾಕಲು ವಿನ್ಯಾಸಗೊಳಿಸಲಾಗಿದೆ.

ಪುಟ 10 ಕ್ಕೆ

ಖಾಸಗಿ ವೆಚ್ಚಗಳ ಅಸಮಾನತೆಯಲ್ಲಿ ಇಳಿಕೆಯೆಂದು ಹೆಮ್ಮೆಪಡುವುದು ನಿರ್ದಯತೆಯ ಪರಮಾವಧಿ



ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಬಡವರು ತಮ್ಮ ಆರೋಗ್ಯ ಮತ್ತು ಶಿಕ್ಷಣದಂತಹ ಅಗತ್ಯ ಸೇವೆಗಳಿಗಾಗಿ ಅನಿವಾರ್ಯವಾಗಿ ದುಬಾರಿ ಖಾಸಗಿ ಸೌಲಭ್ಯಗಳನ್ನು ಪಡೆಯುವುದಕ್ಕಾಗಿ ಹಣ ಹೊಂದಿಸಿಕೊಳ್ಳಲು ಸಾಲವನ್ನು ಆಶ್ರಯಿಸುವುದರಿಂದಾಗಿ, ಬಳಕೆ ಖರ್ಚುಗಳ ಅಸಮಾನತೆ ಇಳಿಕೆಯಾಗಿದೆ ಎಂಬಂತೆ ತೋರುತ್ತದೆ. ಆದರೆ, ವಾಸ್ತವವಾಗಿ ಇದು ನಿಜ ವರಮಾನದಲ್ಲಿನ ಅಸಮಾನತೆ ಏರಿಕೆಯಾಗಿದೆ ಎಂಬುದನ್ನು ಸೂಚಿಸುತ್ತದೆ. ಆದರೆ ಸರಕಾರ ಇಂತಹ ಇಳಿಕೆಯೇ ವರಮಾನ ಅಸಮಾನತೆಯ ಇಳಿಕೆಯನ್ನು ಸೂಚಿಸುತ್ತದೆ ಎಂದು ಪರಿಗಣಿಸಿ ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುತ್ತದೆ. ಹೀಗೆ ಖಾಸಗಿ ವೆಚ್ಚಗಳ ಅಸಮಾನತೆಗಳ ಇಳಿಕೆಯು ಒಂದು ವೇಳೆ ನಿಜವೇ ಆಗಿದ್ದರೂ ಸಹ, ಇದರ ತಳದಲ್ಲಿ ಅಗತ್ಯ ಸೇವೆಗಳ ಖಾಸಗೀಕರಣದಿಂದಾಗಿ ಕೈಗೊಳ್ಳಲೇಬೇಕಾದ ದುಬಾರಿ ಖರ್ಚುಗಳಿಂದ ಬಳಲುತ್ತಿರುವ ಜನರ ಅಪಾರ ಸಂಕಟವಿದೆ. ಆದ್ದರಿಂದ, ಈ ಬಗ್ಗೆ ಹೆಮ್ಮೆಪಡುವುದು ನಿರ್ದಯತೆಯ ಪರಮಾವಧಿಯಾಗುತ್ತದೆ.

ವರಮಾನಗಳ ಅಸಮತೆಗಳಿಗೆ ಸಂಬಂಧಿಸಿದಂತೆ 61 ದೇಶಗಳ ಜಿನಿ ಗುಣಾಂಕ (Gini coefficient –ವರಮಾನಗಳ ಅಸಮತೆಯನ್ನು ಅಳೆಯುವ ವಿಧಾನ) ಪಟ್ಟಿಯನ್ನು ವಿಶ್ವ ಬ್ಯಾಂಕ್ ಇತ್ತೀಚೆಗೆ ಪ್ರಕಟಿಸಿದೆ. ಈ ಪಟ್ಟಿಯನ್ನು ಸಿದ್ಧಪಡಿಸುವಾಗ ಕೆಲವು ದೇಶಗಳಿಗೆ ಸಂಬಂಧಿಸಿದಂತೆ ವರಮಾನಗಳ ವಿವರಗಳನ್ನು ಮತ್ತು ಈ ವಿವರಗಳು ಲಭ್ಯವಿಲ್ಲದ ದೇಶಗಳ ಸಂದರ್ಭದಲ್ಲಿ ಆ ದೇಶಗಳ ಬಳಕೆಯ ಖರ್ಚುಗಳ ವಿವರಗಳನ್ನು ಪರಿಗಣಿಸಲಾಗಿದೆ. ವರ್ಷ 2022ರ ಜಿನಿ ಗುಣಾಂಕ ಪಟ್ಟಿಯಲ್ಲಿ ಭಾರತವು ನಾಲ್ಕನೇ ಅತಿ ಕೆಳಗಿನ ಜಿನಿ ಗುಣಾಂಕವನ್ನು ಪಡೆದಿದೆ (0 ಇಂದ 100 ವರೆಗಿನ ಈ ಗುಣಾಂಕದಲ್ಲಿ, ಗುಣಾಂಕ ಸಂಖ್ಯೆಯು 0 ಆಗಿದ್ದರೆ ಅತಿ ಹೆಚ್ಚು ಸಮಾನವೆಂದು ಮತ್ತು 100 ಇದ್ದರೆ ಅತಿ ಹೆಚ್ಚು ಅಸಮಾನವೆಂದು ಸೂಚಿಸುತ್ತದೆ; ಉದಾ: ಭಾರತದ ಗುಣಾಂಕವು 25.5 ಮತ್ತು ಅಮೆರಿಕದ ಗುಣಾಂಕವು 41.3). ಜಿನಿ ಗುಣಾಂಕದ ಆಧಾರದ ಮೇಲೆ ಮೋದಿ ಸರ್ಕಾರವು ಭಾರತವನ್ನು ವಿಶ್ವದ ನಾಲ್ಕನೇ ಅತ್ಯಂತ ಸಮಾನತಾ ಅರ್ಥವ್ಯವಸ್ಥೆ ಎಂದು ಹೇಳಿಕೊಳ್ಳುತ್ತಿದೆ. ಈ ದಾವೆಯ ನಗೆಪಾಟಲನ್ನು ಹಲವಾರು ಸಂಶೋಧಕರು ಈಗಾಗಲೇ ಬಹಿರಂಗಪಡಿಸಿದ್ದಾರೆ. ಹಾಗಾಗಿ, ಈ ದಾವೆಯ ಅಸಂಬದ್ಧತೆಯ ಬಗ್ಗೆ ಹೆಚ್ಚು ಸಮಯ ಕಳೆಯುವುದು ಸತ್ತ ಕುದುರೆಯನ್ನು ಹೊಡೆಯುವ ವ್ಯರ್ಥ ಪ್ರಯತ್ನವಾಗುತ್ತದೆ. ಆದ್ದರಿಂದ, ಅರ್ಥವ್ಯವಸ್ಥೆಯಲ್ಲಿ ಏನಾಗುತ್ತಿದೆ ಎಂಬುದರ ಬಗ್ಗೆ ಕೆಲವು ಅಂಶಗಳನ್ನು ಹೇಳಬೇಕಾಗುತ್ತದೆ.

ಮೊದಲಿಗೆ, ಈ ದಾವೆಯ ಅಸಂಬದ್ಧತೆಯನ್ನು ಬಯಲುಮಾಡಿದ ವಾದಗಳ ಸಾರಾಂಶವನ್ನು ಗಮನಿಸೋಣ. ಈ 61 ದೇಶಗಳು ಮಾತ್ರವೇ ಇಡೀ ಜಗತ್ತನ್ನು ಪ್ರತಿನಿಧಿಸುವುದಿಲ್ಲ ಎಂಬ ಅಂಶವಷ್ಟೇ ಅಲ್ಲ, ಸರ್ಕಾರದ ಈ ಸಲೀಸು ಹೇಳಿಕೆಯ ವಿರುದ್ಧವಾಗಿ ಮೂರು ಪ್ರಮುಖ ವಾದಗಳನ್ನು ಮಾಡಲಾಗಿದೆ. ಅವೆಲ್ಲವೂ ಒಪ್ಪಬಹುದಾಗಿವೆ. ಮೊದಲನೆಯದು, ವರಮಾನಗಳ ಹಂಚಿಕೆಯಲ್ಲಿರುವ ಅಸಮಾನತೆಯು ಬಳಕೆ ವೆಚ್ಚಗಳ ಹಂಚಿಕೆಯಲ್ಲಿರುವ ಅಸಮಾನತೆಗಿಂತಲೂ ಬಹಳ ಹೆಚ್ಚಿನ ಮಟ್ಟದ್ದಾಗಿದೆ. ಏಕೆಂದರೆ, ವರಮಾನದ ಮಟ್ಟವು ಮೇಲೆ ಮೇಲೆ ಹೋದಂತೆಯೇ, ಜೀವನ ವೆಚ್ಚಗಳಿಗೆ ಬಳಕೆಮಾಡುವ ವರಮಾನದ ಪ್ರಮಾಣವು ಕಡಿಮೆಯಾಗುತ್ತಾ ಹೋಗುತ್ತದೆ ಮತ್ತು "ಉಳಿತಾಯ"ಕ್ಕೆ ಹೋಗುವ ವರಮಾನದ ಪ್ರಮಾಣವು ಹೆಚ್ಚುತ್ತಾ ಹೋಗುತ್ತದೆ. ಆದ್ದರಿಂದ, ಹಂಚಿಕೆಯ ವಿಷಯದಲ್ಲಿ ಯಾವ ದೇಶವನ್ನು ನೋಡಿದರೂ ಸಹ, ಬಳಕೆ ವೆಚ್ಚದ ಹಂಚಿಕೆಯು ವರಮಾನದ ಹಂಚಿಕೆಗಿಂತ ಸದಾ ಕಡಿಮೆ ಅಸಮಾನವಾಗಿರುತ್ತದೆ. ಕೆಲವು ದೇಶಗಳ ವರಮಾನ ಹಂಚಿಕೆಯ ದತ್ತಾಂಶವನ್ನು ಮತ್ತು ಭಾರತವೂ ಸೇರಿದಂತೆ ಇತರ ದೇಶಗಳ ಬಳಕೆ ವೆಚ್ಚಗಳ ದತ್ತಾಂಶವನ್ನು ಪರಿಗಣಿಸಿ ಲೆಕ್ಕಹಾಕಿರುವ ಜಿನಿ ಗುಣಾಂಕಗಳನ್ನು ಎಲ್ಲ ದೇಶಗಳಿಗೂ ಅನ್ವಯಿಸಿ ಹೋಲಿಕೆ ಮಾಡುವುದು ತಪ್ಪೇ ತಪ್ಪು. ಆದ್ದರಿಂದ, ಈ ಕಲಬೆರಕೆ ದತ್ತಾಂಶಗಳ ಆಧಾರದ ಮೇಲೆ ವರಮಾನಗಳ ಹಂಚಿಕೆಯು ಯಾವ ದೇಶದಲ್ಲಿ ಹೆಚ್ಚು ಅಸಮಾನವಾಗಿದೆ ಎಂದು ತೀರ್ಮಾನಿಸುವುದು ತಪ್ಪಾಗುತ್ತದೆ.



ಜೀವನ ನಿರ್ವಹಣೆಗಾಗಿ ಸಾಲ ಮಾಡಬೇಕಾದಾಗ

ಈ ಸಂದರ್ಭದಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ, ವರಮಾನ ಹಂಚಿಕೆಯ ಕೆಳ ತುದಿಯಲ್ಲಿ ಉಳಿತಾಯಗಳೇ ಇರುವುದಿಲ್ಲ (ಶೂನ್ಯ ಉಳಿತಾಯಗಳು) ಎಂಬುದು ಮಾತ್ರವಲ್ಲ, ವಾಸ್ತವವಾಗಿ ಉಳಿತಾಯಗಳು ನಕಾರಾತ್ಮಕವಾಗಿರುತ್ತವೆ; ಅಂದರೆ, ಜನರು ಗಳಿಸುವ ವರಮಾನಗಳಿಗಿಂತಲೂ ಹೆಚ್ಚು ಹಣವನ್ನು ಜೀವನ ನಿರ್ವಹಣೆಗಾಗಿ ಖರ್ಚುಮಾಡುತ್ತಾರೆ ಮತ್ತು ಅದಕ್ಕಾಗಿ ಸಾಲ ಪಡೆಯುತ್ತಾರೆ. ಈ ಅಂಶವು ವೈದ್ಯಕೀಯ ತುರ್ತು ಪರಿಸ್ಥಿತಿಗಳಿಂದಾಗಿ ಉಂಟಾಗುವ ಅಗತ್ಯ ಬಳಕೆ ವೆಚ್ಚಗಳಿಗೆ ಬಹಳವಾಗಿ ಅನ್ವಯಿಸುತ್ತದೆ. ಹಾಗಾಗಿ, ಬಳಕೆ ವೆಚ್ಚದ ಅಸಮಾನತೆಗಳು ವರಮಾನ ಅಸಮಾನತೆಗಳಿಗಿಂತ ಕಡಿಮೆ ಇರುವುದಕ್ಕೆ ಇದೊಂದು ಅಧಿಕ ಕಾರಣವಾಗಿದೆ. ಆದ್ದರಿಂದ, ಕಲಬೆರಕೆ ದತ್ತಾಂಶದಿಂದ ಕೂಡಿದ ಜಿನಿ ಗುಣಾಂಕಗಳನ್ನು ಹೋಲಿಸುವ ಮೂಲಕ ತೆಗೆದುಕೊಳ್ಳುವ ತೀರ್ಮಾನಗಳು ಇನ್ನಷ್ಟು ದೋಷಭರಿತವಾಗುತ್ತವೆ.

ಆದಾಯ ವಿತರಣೆಯ ಕೆಳಗಿನ ತುದಿಯಲ್ಲಿರುವವರು ಉಳಿತಾಯ ಮಾಡದಿರುವುದು ಒಂದು ಸತ್ಯ ಸಂಗತಿಯೇ ಹೌದು. ಸಾಂದರ್ಭಿಕವಾಗಿ ಒಂದು ವಾಸ್ತವಾಂಶವನ್ನು ಹೇಳುವುದಾದರೆ, ಕೇರಳದ ಎಡರಂಗ ಸರ್ಕಾರವು ರೈತರ ಆತ್ಮಹತ್ಯೆಗಳನ್ನು ತಡೆಗಟ್ಟಲು ರೈತರ ಸಾಲ ಪರಿಹಾರ ಮಸೂದೆಯನ್ನು 2006ರಲ್ಲಿ ತಂದಾಗ, ಸಂಕಷ್ಟದಲ್ಲಿದ್ದ ರೈತರ ಸಾಲದ ಗಮನಾರ್ಹ ಪಾಲು ವೈದ್ಯಕೀಯ ಉದ್ದೇಶಗಳಿಗಾಗಿ ಉಂಟಾಗಿದೆ ಎಂಬುದು ಕಂಡುಬಂದಿತ್ತು (ಉತ್ಪಾದನಾ ಸಾಲ ಹೊಂದಿರುವವರಿಗೆ ಮಾತ್ರ ಪರಿಹಾರ ಒದಗಿಸಬೇಕು, ಬಳಕೆ ಸಾಲವನ್ನು ಹೊಂದಿರುವವರಿಗೆ ಅಲ್ಲ ಎಂಬ ನೆಲೆಯಲ್ಲಿ ಕೆಲವರು ಈ ವಾದವನ್ನು ಮಸೂದೆಯ ವಿರುದ್ಧವಾಗಿ ಬಳಸಿದ್ದರು ಕೂಡ).

ಎರಡನೆಯದಾಗಿ, ವರಮಾನಗಳ ವಿತರಣೆಗೆ ಸಂಬಂಧಿಸಿದ ಮಾದರಿ ಸಮೀಕ್ಷೆಯಲ್ಲೇ ಇರಲಿ, ಆದಾಯ ಅಥವಾ ಬಳಕೆ ವಿತರಣೆಗೆ ಸಂಬಂಧಿಸಿದ ಮಾದರಿ ಸಮೀಕ್ಷೆಯಲ್ಲೇ ಇರಲಿ, ಮೇಲ್ತುದಿಯ ಅತಿ ಶ್ರೀಮಂತರ ಮತ್ತು ಕಡು ಬಡವರ ಪ್ರಾತಿನಿಧ್ಯವು ಬಹಳ ಕಡಿಮೆ ಇರುತ್ತದೆ (ಏಕೆಂದರೆ, ಪ್ರಾಮುಖ್ಯತೆಯ ಹೊರತಾಗಿಯೂ ಅವರ ಸಂಖ್ಯೆ ಬಹಳ ಸಣ್ಣದೇ ಇರುತ್ತದೆ). ಆದ್ದರಿಂದ ಸಂಶೋಧಕರು ಈ ದೋಷವನ್ನು ಸರಿಪಡಿಸಲು ವಿವಿಧ ವಿಧಾನಗಳನ್ನು ಅಳವಡಿಸಿಕೊಳ್ಳುತ್ತಾರೆ. ಆದರೆ, ರಾಷ್ಟ್ರೀಯ ಮಾದರಿ ಸಮೀಕ್ಷೆಯು ಪ್ರಸ್ತುತಪಡಿಸಿದ ದತ್ತಾಂಶವನ್ನು ಆಧರಿಸಿ ಭಾರತದ ಜಿನಿ ಗುಣಾಂಕವನ್ನು ಲೆಕ್ಕ ಹಾಕಿರುವ ವಿಶ್ವ ಬ್ಯಾಂಕ್ ಈ ದೋಷವನ್ನು ಸರಿಪಡಿಸಿಲ್ಲ. ಇತರ ದೇಶಗಳ ವಿಷಯದಲ್ಲೂ ಈ ಮಾತು ನಿಜ.

ಅಸಮಾನತೆ ಮತ್ತು ಜಿನಿ ಗುಣಾಂಕ

ಇಡೀ ಹಂಚಿಕೆಗೆ ಸಂಬಂಧಿಸಿದ ಜಿನಿ ಗುಣಾಂಕದ ಬಳಕೆಯ ಬಗ್ಗೆಯೇ ಮೂರನೇ ಆಕ್ಷೇಪಣೆ ವ್ಯಕ್ತವಾಗಿದೆ. ಉದಾಹರಣೆಗೆ, ಒಟ್ಟು ವರಮಾನದಲ್ಲಿ ಮೇಲ್ತುದಿಯ ಶೇ. ಒಂದರಷ್ಟು ಮಂದಿಯ ಪಾಲು ಏರಿಕೆಯಾದರೆ, ಮತ್ತು ಅದೇ ಸಮಯದಲ್ಲಿ ವರಮಾನವು ಕೆಳಗಿನಿಂದ ಮೂರನೇ ದಶಮಾಂಶ ಭಾಗದಿಂದ ಐದನೇ ದಶಮಾಂಶಕ್ಕೆ ಸ್ವಲ್ಪ ಹೊರಳಿದರೆ, ಮತ್ತು, ಉಳಿದವರಿಗೆ ನಷ್ಟವನ್ನುಂಟುಮಾಡಿ ಶ್ರೀಮಂತರು ಇನ್ನೂ ಹೆಚ್ಚು ಶ್ರೀಮಂತರಾದರೂ ಸಹ, ಜಿನಿ ಗುಣಾಂಕವು ಒಂದು ಇಳಿಕೆಯನ್ನು ತೋರಿಸಬಹುದು. ಅಂತಹ ಒಂದು ಪರಿಸ್ಥಿತಿಯನ್ನು ವರಮಾನಗಳ ಅಸಮತೆಯ ಏರಿಕೆ ಎಂದು ಹೆಚ್ಚಿನವರು ಪರಿಗಣಿಸುತ್ತಾರೆ. ಆದರೆ, ಜಿನಿ ಗುಣಾಂಕವು ವರಮಾನಗಳ ಅಸಮತೆಯ ಇಳಿಕೆಯನ್ನು ತೋರಿಸುತ್ತದೆ.

ಅಸಮಾನತೆಯನ್ನು ಅಳತೆಮಾಡಲು ಜಿನಿ ಗುಣಾಂಕವನ್ನು ತೆಗೆದುಕೊಳ್ಳುವ ಕ್ರಮದ ಅಸಂಬದ್ಧತೆಯನ್ನು ಒಂದು ಸರಳ ಪರಿಗಣನೆಯ ಮೂಲಕ ಸ್ಪಷ್ಟಪಡಿಸಬಹುದು. ಜಿನಿ ಗುಣಾಂಕವು ಒಂದು ಅಳತೆಯಾಗಿ ಅದು ಒಂದು ವೇಳೆ ತೃಪ್ತಿಕರವಾಗಿದ್ದರೆ ಮತ್ತು ಭಾರತದಲ್ಲಿ ವರಮಾನಗಳ ಅಸಮಾನತೆಯು ನಿಜಕ್ಕೂ ತುಂಬಾ ಕೆಳಮಟ್ಟದಲ್ಲಿದ್ದರೆ, ಆಗ ದೇಶದಲ್ಲಿ ಹಸಿವು ಮತ್ತು ಅಪೌಷ್ಟಿಕತೆಗಳು ಹೆಚ್ಚುತ್ತಿದೆ ಎಂಬ ಅಂಶವನ್ನು ವಿವರಿಸುವುದು ಕಷ್ಟವಾಗುತ್ತದೆ. ದೇಶದಲ್ಲಿ ಜಿಡಿಪಿ ಬೆಳವಣಿಗೆಯ ದರವು ಉನ್ನತವಾಗಿದೆ ಎಂದು ಸರ್ಕಾರ ಹೇಳಿಕೊಳ್ಳುತ್ತಿರುವುದರಿಂದ, ಅದೂ ಸಹ ಎಲ್ಲ ಪ್ರಮುಖ ದೇಶಗಳಲ್ಲಿ ಇರುವುದಕ್ಕಿಂತಲೂ ಅತ್ಯಧಿಕ ದರದಲ್ಲಿ ಜಿಡಿಪಿ ಬೆಳೆಯುತ್ತಿದೆ ಎಂದು ತೋರುತ್ತಿರುವುದರಿಂದ, ಭಾರತದಲ್ಲಿ ಅಸಮಾನತೆಯು ನಿಜಕ್ಕೂ ಇಳಿಕೆಯಾಗಿದ್ದರೆ, ಜನಸಂಖ್ಯೆಯ ಬಡ ವಿಭಾಗಗಳ ವರಮಾನಗಳೂ ಸಹ ಗಮನಾರ್ಹವಾಗಿ ಏರಿಕೆಯಾಗಬೇಕಿತ್ತು. ಮತ್ತು, ವರಮಾನಗಳ ಏರಿಕೆಯೊಂದಿಗೆ ನೇರ ಸೇವನೆಯ ಮೂಲಕ ಮತ್ತು ಪಶು ಆಹಾರಗಳ ಮೂಲಕ ಆಹಾರ ಧಾನ್ಯಗಳ ಬಳಕೆಯು ಏರಿಕೆಯಾಗುವುದರಿಂದ

ಪುಟ 6 ಕ್ಕೆ

ವಿಶ್ವವಿದ್ಯಾನಿಲಯವು ಕೇಸರಿ ತೋಟವಲ್ಲ

ವಿಶ್ವವಿದ್ಯಾನಿಲಯಗಳಲ್ಲಿ ಕೈಗೊಂಬೆ ಕುಲಪತಿಗಳನ್ನು ಸ್ಥಾಪಿಸುವ ಮೂಲಕ ಉನ್ನತ ಶಿಕ್ಷಣ ಕ್ಷೇತ್ರವನ್ನು ಕೇಸರಿಕರಣಗೊಳಿಸುವ ವಂಚಕ ಹಾದಿಯಲ್ಲಿ ಸಂಘಪರಿವಾರ ಸಾಗುತ್ತಿದೆ. ಕೇರಳದ ವಿಶ್ವವಿದ್ಯಾಲಯಗಳಲ್ಲಿ SFI ಮತ್ತು ಎಡಪಂಥೀಯ ಜಾತ್ಯತೀತ ಸಂಘಟನೆಗಳು ಇದನ್ನು ವಿರೋಧಿಸಿ ಆಂದೋಲನ ನಡೆಸುತ್ತಿವೆ. ಸಂಘಿಸಂಗೆ ಮತ್ತು ತಟಸ್ಥ ಮುಖವಾಡಗಳನ್ನು ಧರಿಸಿದ ಸಂಘಪರಿವಾರ ಪ್ರಾಯೋಜಿತ ರಾಜಕೀಯ ವೀಕ್ಷಕರಿಗೆ ತಲೆಬಾಗುವ ಮಾಧ್ಯಮಗಳು ಇದನ್ನು 'ಅಧಿಕಾರ ಹೋರಾಟ' ಎಂದು ಹೇಳುತ್ತಿವೆ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಅಡಗಿರುವ ಉಗ್ರ ಹಿಂದುತ್ವದ ಕಾರ್ಯಸೂಚಿಯನ್ನು ಇಲ್ಲಿ ಮರೆಮಾಡಲಾಗುತ್ತಿದೆ. ಸಂಘ ಪರಿವಾರವು ವಿಶ್ವವಿದ್ಯಾನಿಲಯಗಳಲ್ಲಿ ತಮಗೆ ನೀಡಿರುವ ಸ್ಥಾನಗಳನ್ನು ಕಾಂಗ್ರೆಸ್ ಮತ್ತು ಲೀಗ್ ನಾಚಿಕೆಯಿಲ್ಲದೆ ಒಪ್ಪಿಕೊಂಡು ಅವರ ಮುಂದೆ ಮಂಡಿಯೂರಿ ಕುಳಿತಿವೆ.

ಕೇರಳದ ಶಿಕ್ಷಣ ಕ್ಷೇತ್ರದ ದೊಡ್ಡ ವೈಶಿಷ್ಟ್ಯವೆಂದರೆ ಅದರ ಜಾತ್ಯತೀತ–ಪ್ರಗತಿಪರ ವಿಷಯ, ವೈಜ್ಞಾನಿಕ ಪ್ರಜ್ಞೆ ಮತ್ತು ಇತಿಹಾಸಕ್ಕೆ ಸರಿಯಾದ ವಿಧಾನ. ಆದ್ದರಿಂದ, ದೇಶದ ಶಿಕ್ಷಣ ಕ್ಷೇತ್ರವನ್ನು ಕೇಸರಿಕರಣಗೊಳಿಸುವ ಸಂಘಪರಿವಾರದ ಕಾರ್ಯಸೂಚಿಗೆ ಕೇರಳ ಇನ್ನೂ ಸ್ಥಳಾವಕಾಶ ನೀಡಿಲ್ಲ ಮತ್ತು ಅದನ್ನು ನೀಡುವುದಿಲ್ಲ. ವಿಶ್ವವಿದ್ಯಾನಿಲಯಗಳಲ್ಲಿ ಕೈಗೊಂಬೆ ಕುಲಪತಿಗಳನ್ನು ಸ್ಥಾಪಿಸುವ ಮೂಲಕ ಉನ್ನತ ಶಿಕ್ಷಣ ಕ್ಷೇತ್ರವನ್ನು ಕೇಸರಿಕರಣಗೊಳಿಸುವ ವಂಚಕ ಹಾದಿಯಲ್ಲಿ ಸಂಘಪರಿವಾರ ಸಾಗುತ್ತಿದೆ. ವಿಶ್ವವಿದ್ಯಾಲಯಗಳಲ್ಲಿ SFI ಮತ್ತು ಎಡಪಂಥೀಯ ಜಾತ್ಯತೀತ ಸಂಘಟನೆಗಳು ಇದನ್ನು ವಿರೋಧಿಸಿ ಆಂದೋಲನ ನಡೆಸುತ್ತಿವೆ. ಇದು ದೇಶಕ್ಕೆ ನೀಡುವ ದೊಡ್ಡ ಸಂದೇಶವಾಗಿದೆ. ಆದರೆ, ಸಂಘಿಸಂಗೆ ಮತ್ತು ತಟಸ್ಥ ಮುಖವಾಡಗಳನ್ನು ಧರಿಸಿದ ಸಂಘಪರಿವಾರ ಪ್ರಾಯೋಜಿತ ರಾಜಕೀಯ ವೀಕ್ಷಕರಿಗೆ ತಲೆಬಾಗುವ ಮಾಧ್ಯಮಗಳು ಇದನ್ನು 'ಅಧಿಕಾರ ಹೋರಾಟ' ಎಂದು ಹೇಳುತ್ತಿವೆ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಅಡಗಿರುವ ಉಗ್ರ ಹಿಂದುತ್ವದ ಕಾರ್ಯಸೂಚಿಯನ್ನು ಇಲ್ಲಿ ಮರೆಮಾಡಲಾಗುತ್ತಿದೆ. ಒಂದೆಡೆ, NCERT ಮೂಲಕ ಶಾಲಾ ಪಠ್ಯಕ್ರಮವನ್ನು ಹಿಂದುತ್ವೀಕರಣಗೊಳಿಸುತ್ತಿರುವ ಕೇಂದ್ರ ಸರ್ಕಾರವು, UGC ಮತ್ತು ICHR ನಂತಹ ಸಂಸ್ಥೆಗಳನ್ನು ಬಳಸಿಕೊಂಡು ಉನ್ನತ ಶಿಕ್ಷಣ ಮತ್ತು ಸಂಶೋಧನಾ ವಲಯವನ್ನು ಕೇಸರಿಮಯಗೊಳಿಸುತ್ತಿದೆ. ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ಮತ್ತು ಪ್ರಭಾರ ಉಪಕುಲಪತಿ ಮೋಹನನ್ ಕುನ್ನುಮ್ಮಲ್ ಅವರುಗಳು ಕೇರಳ ವಿಶ್ವವಿದ್ಯಾಲಯದಲ್ಲಿ ಇದಕ್ಕಾಗಿ ಪೂರ್ವಾಭ್ಯಾಸ ನಡೆಸುತ್ತಿದ್ದಾರೆ. ಆದರೆ, ನಮ್ಮ ಮಾಧ್ಯಮಗಳು ಇದನ್ನು ನೋಡುವುದಿಲ್ಲ.

'ಯುವಕರನ್ನು ಸೆಳೆಯಿರಿ' ಎಂಬುದು ಫ್ಯಾಸಿಸಂನ ಪ್ರಮುಖ ತಂತ್ರ. ಇದಕ್ಕಾಗಿಯೇ ಭಾರತದಲ್ಲಿ ಫ್ಯಾಸಿಸಂನ ನಿಜವಾದ ಮಾಲೀಕರಾದ RSS, ಮಕ್ಕಳನ್ನು ತಮ್ಮ ಉಗ್ರ ಹಿಂದುತ್ವದ ಆತ್ಮಹತ್ಯಾ ಬಾಂಬರ್‌ಗಳಾಗಲು ತರಬೇತಿ ನೀಡುತ್ತಿದೆ. ಕ್ರೀಡಾ ತರಬೇತಿಯ ಮೂಲಕ ಮಕ್ಕಳಲ್ಲಿ ಆಕ್ರಮಣಶೀಲತೆಯನ್ನು ಬೆಳೆಸಲು, ವಿಷಕಾರಿ ವಿಚಾರಗಳನ್ನು ಅವರೊಳಗೆ ತುಂಬುವ ಉದ್ದೇಶದಿಂದಲೇ ಆರ್‌ಎಸ್‌ಎಸ್ ಶಿಕ್ಷಣ ಕ್ಷೇತ್ರದಲ್ಲಿ ಹಸ್ತಕ್ಷೇಪ ಮಾಡುತ್ತಿದೆ. ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳಲ್ಲಿ ನಿರಂತರ



ಕಡಿತ ಮತ್ತು ಸೇರ್ಪಡೆಗಳು ನಡೆಯುತ್ತಿದ್ದರೂ, ಕೇರಳದ ವಿಶ್ವವಿದ್ಯಾಲಯಗಳ ನಿಯಂತ್ರಣವನ್ನು ತೆಗೆದುಕೊಳ್ಳುವ ಕ್ರಮವನ್ನು ಸಹ ಈ ಸಂದರ್ಭದಲ್ಲಿ ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಸಂಘಪರಿವಾರದ ಸಂಪರ್ಕ ಹೊಂದಿರುವವರು ಉಪಕುಲಪತಿಗಳಾಗಿ

ಸಂಘ ಪರಿವಾರದ ಪ್ರಮುಖ ಗುರಿ ಉನ್ನತ ಶಿಕ್ಷಣ ಕ್ಷೇತ್ರವನ್ನು ಭೇದಿಸುವುದು. ಜೆಎನ್‌ಯು ಸೇರಿದಂತೆ ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಸಂಘಪರಿವಾರದ ಸಂಪರ್ಕ ಹೊಂದಿರುವ ಜನರನ್ನು ಉಪಕುಲಪತಿಗಳಾಗಿ ನೇಮಿಸಲಾಗಿದೆ. 2018 ರಲ್ಲಿ ವಿಶ್ವವಿದ್ಯಾಲಯಗಳ ನಿಯಂತ್ರಣವನ್ನು ತೆಗೆದುಕೊಳ್ಳಲು ಸಂಘಪರಿವಾರವು ಬಹಿರಂಗವಾಗಿ ಕ್ರಮ ಕೈಗೊಳ್ಳಲು ಸಿದ್ಧವಾಗಿತ್ತು. ಇದರ ಭಾಗವಾಗಿ, ಆರ್ ಎಸ್ ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರ ಸಮ್ಮುಖದಲ್ಲಿ ಉಪಕುಲಪತಿಗಳಿಗಾಗಿ ಅಧ್ಯಯನ ಶಿಬಿರವನ್ನು ನಡೆಸಲಾಯಿತು. ಮಾರ್ಚ್ 2018 ರಲ್ಲಿ ದೆಹಲಿಯಲ್ಲಿ ನಡೆದ 'ಜ್ಞಾನ ಸಂಘ' ಶಿಬಿರದಲ್ಲಿ 51 ವಿಶ್ವವಿದ್ಯಾಲಯಗಳ ಉಪಕುಲಪತಿಗಳು ಸೇರಿದಂತೆ ಏಳುನೂರಕ್ಕೂ ಹೆಚ್ಚು 'ಶಿಕ್ಷಣ ತಜ್ಞರು' ಭಾಗವಹಿಸಿದ್ದರು. ಯುಜಿಸಿ, ಐಸಿಎಸ್‌ಎಸ್‌ಆರ್, ಐಸಿಎಚ್‌ಆರ್‌ನಂತಹ ಸಂಸ್ಥೆಗಳನ್ನು ಸಹ ಆರ್‌ಎಸ್‌ಎಸ್ ಸ್ವಾಧೀನಪಡಿಸಿಕೊಂಡಿದೆ. ಆದಾಗ್ಯೂ, ಈ ಸಂಘಪರಿವಾರದ ದಬ್ಬಾಳಿಕೆಗೆ ಮಣಿಯದೆ ಎಲ್ಲಾ ಕ್ಯಾಂಪಸ್‌ಗಳಲ್ಲಿ ವಿದ್ಯಾರ್ಥಿಗಳು ಹೋರಾಡುತ್ತಿದ್ದಾರೆ. ಕೇರಳದಲ್ಲಿಯೂ ಇದೇ ರೀತಿಯ ಹೋರಾಟ ನಡೆಯುತ್ತಿದೆ. ಅದರೊಂದಿಗೆ ಕಾನೂನು ಹೋರಾಟ ನಡೆಯುತ್ತಿದೆ. ಆರಿಫ್ ಮೊಹಮ್ಮದ್ ಖಾನ್ ಅವರು ರಾಜ್ಯಪಾಲರಾಗಿದ್ದಾಗ ಕೇರಳ ಸೆನೆಟ್‌ಗೆ ನಾಮನಿರ್ದೇಶನಗೊಂಡ ನಾಲ್ವರು ಎಬಿವಿಪಿ ಸದಸ್ಯರನ್ನು ಹೊರಹಾಕುವ ನ್ಯಾಯಾಲಯದ ನಿರ್ಧಾರವು ಕಾನೂನು ಹೋರಾಟದ ಯಶಸ್ಸಾಗಿದೆ. ಇನ್ನೊಂದೆಡೆ, ನ್ಯಾಯಾಲಯವು ಇಬ್ಬರು ಸಂಘದ ಉಪಕುಲಪತಿಗಳನ್ನು ಹೊರಹಾಕಿತು.

ಮೊದಲ ಪ್ರಯತ್ನ ಯುಪಿ, ರಾಜಸ್ಥಾನ ಮತ್ತು ಮಧ್ಯಪ್ರದೇಶ ರಾಜ್ಯಗಳಲ್ಲಿ

ಶಿಕ್ಷಣ ಕ್ಷೇತ್ರದಲ್ಲಿ ಆರ್‌ಎಸ್‌ಎಸ್‌ನ ಪಾಲ್ಗೊಳ್ಳುವಿಕೆ ದಶಕಗಳಷ್ಟು ಹಿಂದಿನದು. 1999ರಲ್ಲಿ, ಪ್ರಧಾನಿ ಎ.ಬಿ.ವಾಜಪೇಯಿ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಮುರಳಿ ಮನೋಹರ್ ಜೋಶಿ ಇದನ್ನು ಮಾಡಲು ಸಂಘಟಿತ ಪ್ರಯತ್ನ ಮಾಡಿದರು. ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಶಾಲಾ ಶಿಕ್ಷಣವನ್ನು ಕೇಸರಿಕರಣಗೊಳಿಸುವ ಮೂಲಕ ಇದು ಪ್ರಾರಂಭವಾಯಿತು. ಮೊದಲ ಪ್ರಯತ್ನ ಯುಪಿ, ರಾಜಸ್ಥಾನ ಮತ್ತು ಮಧ್ಯಪ್ರದೇಶ ರಾಜ್ಯಗಳಲ್ಲಿತ್ತು. ಅಲ್ಲಿನ ಪಠ್ಯಕ್ರಮವನ್ನು ಹಿಂದುತ್ವೀಕರಣಗೊಳಿಸಲಾಯಿತು. ಆರ್‌ಎಸ್ ಎಸ್ ಸಮಾನಾಂತರ ಶಾಲೆಗಳನ್ನು ಪ್ರಾರಂಭಿಸಿತು. ಸರ್ಕಾರಿ ನಿಧಿಗಳು ಈ ವಲಯಕ್ಕೆ ಹರಿಯಿತು. ಮೊಘಲರನ್ನು ವಂಚಕರು ಮತ್ತು ದರೋಡೆಕೋರರು ಎಂದು ಚಿತ್ರಿಸಲಾಗಿದೆ. ವಿಜ್ಞಾನವನ್ನು ಪುರಾಣಗಳು ಮತ್ತು ಪುರೋಹಿತಶಾಹಿ ಕಲ್ಪನೆಗಳಿಂದ ಬದಲಾಯಿಸಲಾಯಿತು. ಜಾತ್ಯತೀತತೆ, ಸಾಂವಿಧಾನಿಕ ಮೌಲ್ಯಗಳು, ಬಹುತ್ವ, ಬಹುಭಾಷಾವಾದ ಮತ್ತು ಸಮಾನತೆಯನ್ನು ಪಠ್ಯಕ್ರಮದಿಂದ ತೆಗೆದುಹಾಕಲಾಯಿತು. ಗುಜರಾತ್‌ನ ಇತಿಹಾಸ ಪಠ್ಯಪುಸ್ತಕದಲ್ಲಿ, ಹಿಂದೂಗಳನ್ನು ಅಲ್ಪಸಂಖ್ಯಾತರನ್ನಾಗಿ ಮಾಡಲು ಪ್ರಯತ್ನಿಸುತ್ತಿರುವ 'ವಿದೇಶಿಯರು' ಎಂದು ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರನ್ನು ಚಿತ್ರಿಸಲಾಗಿದೆ.

ಆರ್‌ಎಸ್‌ಎಸ್ ಸಿದ್ಧಾಂತವಾದಿ ದೀನನಾಥ್ ಬಾತ್ರಾ ಅವರ ಸುಮಾರು ಎಂಟು ಪುಸ್ತಕಗಳನ್ನು ಪ್ರಾಥಮಿಕ ಶಾಲೆಗಳಲ್ಲಿ ವಿತರಿಸಲಾಗಿದೆ. ಶಾಲೆಗಳು ಮತ್ತು ಮದರಸಾಗಳಲ್ಲಿ ಭಗವದ್ಗೀತೆಯನ್ನು ಕಲಿಸಲು ಮಧ್ಯಪ್ರದೇಶ ಸರ್ಕಾರ ಆದೇಶ ಹೊರಡಿಸಿದೆ. ಆರ್‌ಎಸ್‌ಎಸ್ ಪ್ರಕಟಣೆ 'ದೇವಪುತ್ರ' ಪತ್ರಿಕೆಯಲ್ಲಿ, ಮೊಘಲ್ ದೊರೆ ಅಕ್ಬರ್ ಅವರನ್ನು ಹಿಂಸಾತ್ಮಕ ವ್ಯಕ್ತಿಯನ್ನಾಗಿ ಮಾಡಲಾಯಿತು. ವಿದ್ಯಾರ್ಥಿಗಳಲ್ಲಿ ದೇಶಭಕ್ತಿ ಮತ್ತು ಧೈರ್ಯವನ್ನು ತುಂಬಲು, ಸರ್ಕಾರವು ಕಾಲೇಜುಗಳಿಗೆ ಉದಯಪುರದ ಆರ್‌ಎಸ್‌ಎಸ್ ಸಂಸ್ಥೆ ಪ್ರತಾಪ್ ಗೌರವ್ ಕೇಂದ್ರಕ್ಕೆ ಭೇಟಿ ನೀಡುವಂತೆ ಸೂಚಿಸಿತು. ಕೇರಳ ಸೇರಿದಂತೆ ಬಿಜೆಪಿಯೇತರ ರಾಜ್ಯಗಳಲ್ಲಿ ಈ ಕಾರ್ಯಸೂಚಿ ಯಶಸ್ವಿಯಾಗಲು ಸಾಧ್ಯವಾಗಲಿಲ್ಲ.

ಶಿಕ್ಷಣವು ಕೇಸರಿ ಬಣ್ಣಕ್ಕೆ ತಿರುಗಿದೆ

ಭಾರತದಲ್ಲಿ ಶಾಲಾ ಶಿಕ್ಷಣ ಮತ್ತು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಅನೇಕ ಪ್ರತಿಷ್ಠಿತ ಸಂಸ್ಥೆಗಳಿವೆ. ಯುಜಿಸಿ ಮತ್ತು ಎನ್‌ಸಿಇಆರ್‌ಟಿ ಮುಖ್ಯ. ಮುರಳಿ ಮನೋಹರ್ ಜೋಶಿ ಮೊದಲು ಆರ್‌ಎಸ್‌ಎಸ್ ಸದಸ್ಯರನ್ನು ಈ ಸಂಸ್ಥೆಗಳ ಮುಖ್ಯಸ್ಥರನ್ನಾಗಿ ನೇಮಿಸುವ ಮೂಲಕ ಆಟವನ್ನು ಪ್ರಾರಂಭಿಸಿದರು. ಜಾತ್ಯತೀತತೆ, ಸಾಂವಿಧಾನಿಕ ಮೌಲ್ಯಗಳು ಮತ್ತು ವೈಜ್ಞಾನಿಕ ಮತ್ತು ಪ್ರಗತಿಪರ ವಿಚಾರಗಳನ್ನು ಎತ್ತಿಹಿಡಿದ ಶೈಕ್ಷಣಿಕ ದಿಗ್ಗಜರನ್ನು ಈ ಸಂಸ್ಥೆಗಳ ಮುಖ್ಯಸ್ಥರಿಂದ ತೆಗೆದುಹಾಕಲಾಯಿತು. ಆರ್‌ಎಸ್‌ಎಸ್‌ನ ಶೈಕ್ಷಣಿಕ ಚಟುವಟಿಕೆಗಳ ಉಸ್ತುವಾರಿ ವಹಿಸಿದ್ದ ಜೆ.ಎಸ್. ರಜಪೂತ್ NCERTಯ ನಿರ್ದೇಶಕರಾದರು. ಆರ್‌ಎಸ್‌ಎಸ್ ಸಿದ್ಧಾಂತಿಗಳಾದ ದೀನನಾಥ್ ಬಾತ್ರಾ, ಅತುಲ್ ರಾವತ್ ಮತ್ತು ಆರ್‌ಎಸ್‌ಎಸ್ ಮುಖವಾಣಿ ಪಾಂಚಜನ್ಯದ ಉಸ್ತುವಾರಿ ತರುಣ್ ವಿಜಯ್ ಅವರು ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಮುಖ ಸ್ಥಾನಗಳನ್ನು ತಲುಪಿದ್ದಾರೆ. ಪ್ರಸ್ತುತ NCERT ಅಧ್ಯಕ್ಷ ಸಿ.ಐ.ಐಸಾಕ್ ಕೂಡ ಸಂಘ ಪರಿವಾರದ ಕಟ್ಟಾ ಸದಸ್ಯರಾಗಿದ್ದಾರೆ.

ಜಗತ್ತು ವೇಗವಾಗಿ ಬೆಳೆಯುತ್ತಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ದೊಡ್ಡ ಬದಲಾವಣೆಗಳು ಬರುತ್ತಿವೆ. ರೊಬೊಟಿಕ್ಸ್ ಮತ್ತು ಕೃತಕ ಬುದ್ಧಿಮತ್ತೆಯೊಂದಿಗೆ ವಿಜ್ಞಾನವು ವೇಗವಾಗಿ ಬೆಳೆಯುತ್ತಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಈ ಸ್ಫೋಟವನ್ನು ಅಳವಡಿಸಿಕೊಳ್ಳುವ ಮೂಲಕ ಹೊಸ ಪೀಳಿಗೆ ಮುಂದುವರಿಯಲು ಅನುವು ಮಾಡಿಕೊಡುವುದು ಶಿಕ್ಷಣದ ಹೊಸ ತತ್ವಶಾಸ್ತ್ರವಾಗಿದೆ. ಮನುಷ್ಯ ಒಂದೇ ಜಗತ್ತಿನ ದೃಷ್ಟಿಕೋನದ ಕಡೆಗೆ ಬದಲಾದಂತೆ, ಶಿಕ್ಷಣವನ್ನೂ ಆಧುನೀಕರಿಸಬೇಕಾಗಿದೆ. ಆದಾಗ್ಯೂ, ದೇಶವನ್ನು ಆಳುವವರು ಶಿಕ್ಷಣವನ್ನು ಪ್ರಾಚೀನ ಯುಗಕ್ಕೆ ಹಿಂತಿರುಗಿಸಲು ಪ್ರಯತ್ನಿಸುತ್ತಿದ್ದಾರೆ. ಇದಕ್ಕಾಗಿ ಕೇರಳದಲ್ಲಿ ಯುಡಿಎಫ್ ಬೆಂಬಲ ನೀಡುತ್ತಿದೆ.

ಕಾಂಗ್ರೆಸ್ ಮತ್ತು ಲೀಗ್‌ಗೆ ಸ್ಥಾನಗಳು

ಕಾಂಗ್ರೆಸ್ ಶಿಕ್ಷಕರ ಸಂಘದ ನಾಯಕರಾಗಿದ್ದ ಡಾ.ಪಿ.ರವೀಂದ್ರನ್ ಅವರನ್ನು ಆರ್‌ಎಸ್‌ಎಸ್ ಕ್ಯಾಲಿಕಟ್ ವಿಶ್ವವಿದ್ಯಾಲಯದ ತಾತ್ಕಾಲಿಕ ಕುಲಪತಿಯನ್ನಾಗಿ ಮಾಡಲಾಯಿತು. ಆರ್‌ಎಸ್‌ಎಸ್ ಪ್ರಾಯೋಜಿತ ಸ್ಥಾನಕ್ಕೆ ಕಾಂಗ್ರೆಸ್ ಇಲ್ಲ ಎಂದು ಹೇಳಲು ಅವರು ಸಿದ್ಧರಿರಲಿಲ್ಲ. ಸಂಘಪರಿವಾರವು ವಿಶ್ವವಿದ್ಯಾನಿಲಯಗಳಲ್ಲಿ ತಮಗೆ ನೀಡಿರುವ ಸ್ಥಾನಗಳನ್ನು ಕಾಂಗ್ರೆಸ್ ಮತ್ತು ಲೀಗ್ ನಾಚಿಕೆಯಿಲ್ಲದೆ ಒಪ್ಪಿಕೊಂಡು ಅವರ ಮುಂದೆ ಮಂಡಿಯೂರಿ ಕುಳಿತಿವೆ. ಇತಿಹಾಸದಲ್ಲಿ ಮೊದಲ ಬಾರಿಗೆ, ಆರ್‌ಎಸ್‌ಎಸ್ ವ್ಯಕ್ತಿಗೆ ವಿಸಿ ಕಚೇರಿಯಲ್ಲಿ ಕುರ್ಚಿಯೂ ಸಿಕ್ಕಿದೆ. ಅಂತಿಮವಾಗಿ, ವಿಸಿ ಡಾ.ರವೀಂದ್ರನ್ ಸೇವಾ ಭಾರತಿ ಸಮ್ಮೇಳನವನ್ನು ಉದ್ಘಾಟಿಸುವ ಮೂಲಕ ತಮ್ಮ ನಿಷ್ಠೆಯನ್ನು ಸಾಬೀತುಪಡಿಸಿದರು. ಇಲ್ಲಿಯವರೆಗೆ, ಕಾಂಗ್ರೆಸ್, ಲೀಗ್ ಅಥವಾ ವಿರೋಧ ಪಕ್ಷದ ನಾಯಕ ವಿ.ಡಿ. ಸತೀಸನ್ ಇದರ ವಿರುದ್ಧ ಒಂದೇ ಒಂದು ಮಾತನ್ನೂ ಹೇಳಿಲ್ಲ. ಇದು ಇಂದು ಕ್ಯಾಲಿಕಟ್ ವಿಶ್ವವಿದ್ಯಾಲಯದಲ್ಲಿ ಕಣ್ಣಿಗೆ ಕಾಣುವ ಮೈತ್ರಿಯಾಗಿದೆ. ಆದಾಗ್ಯೂ, ವಿಶ್ವವಿದ್ಯಾಲಯಗಳಲ್ಲಿ ಕೇಸರೀಕರಣವನ್ನು ವಿರೋಧಿಸುತ್ತಿರುವ ಎಸ್‌ಎಫ್‌ಐ ಕಾರ್ಯಕರ್ತರನ್ನು ಗೂಂಡಾಗಳು ಎಂದು ಕರೆಯಲು ಸತೀಸನ್ ಮಣಿದಿದ್ದಾರೆ. ಅವರು ಎಷ್ಟೇ ಮುಚ್ಚಿಟ್ಟರೂ, ಎಸ್‌ಎಫ್‌ಐ ಕೇಸರೀಕರಣ ಪ್ರಯತ್ನಗಳ ವಿರುದ್ಧ ತನ್ನ ಆಂದೋಲನವನ್ನು ಮುಂದುವರಿಸುತ್ತದೆ.

(ಕೃಪೆ: ದೇಶಾಭಿಮಾನಿ– ಕನ್ನಡಕ್ಕೆ: ಸಿ.ಚಿ)

ಕೆಲಸದ ಸಮಯದ ಮೇಲಿನ ವರ್ಗ ಹೋರಾಟ! ಹಿಂದಿನ ಸಂಚಿಕೆ ಇಂದ...

–ಆರ್.ಕರುಮಲೈಯನ್
(ಅನು: ನಾಗರಾಜ ನಂಜುಂಡಯ್ಯ)

ಈ ಆಕ್ರಮಣಕಾರಿ ಚಾಲನೆ ಏಕೆ?

ಹಾಗಾದರೆ ಭಾರತದಲ್ಲಿ ಕೆಲಸದ ಸಮಯವನ್ನು ಹೆಚ್ಚಿಸಲು ಈ ಆಕ್ರಮಣಕಾರಿ ಚಾಲನೆ ಏಕೆ? ಕಾರ್ಮಿಕರು/ನೌಕರರು ಉತ್ತಮವಾಗಿ ಕೆಲಸ ಮಾಡುತ್ತಿಲ್ಲವೇ? ಇಂತಹ ಪ್ರಶ್ನೆಗಳಿಗೆ ಉತ್ತರ ಏನೆಂದರೆ, ವಾಸ್ತವವಾಗಿ, ಭಾರತೀಯ ಉದ್ಯೋಗಿಗಳು ಹೆಚ್ಚು ಕೆಲಸ ಮಾಡುತ್ತಿದ್ದಾರೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಮಾಹಿತಿಯ ಪ್ರಕಾರ, ಭಾರತದಲ್ಲಿ ಶೇ. 50.5ರಷ್ಟು ಕಾರ್ಮಿಕರು ವಾರಕ್ಕೆ 49 ಅಥವಾ ಅದಕ್ಕಿಂತ ಹೆಚ್ಚು ಗಂಟೆಗಳ ಕಾಲ ಕೆಲಸ ಮಾಡುತ್ತಾರೆ. ಇದಲ್ಲದೆ, ಶೇ. 88ರಷ್ಟು ಭಾರತೀಯ ಉದ್ಯೋಗಿಗಳು ಕೆಲಸದ ಸಮಯದ ಹೊರಗೆ ತಮ್ಮ ಉದ್ಯೋಗದಾತರು ತಮ್ಮನ್ನು ಸಂಪರ್ಕಿಸುತ್ತಿದ್ದಾರೆ ಎಂದು ವರದಿ ಮಾಡಿದ್ದಾರೆ. ಆಘಾತಕಾರಿಯಾಗಿ, ಈ ಉದ್ಯೋಗಿಗಳಲ್ಲಿ ಶೇ. 85ರಷ್ಟು ಜನರು ಅನಾರೋಗ್ಯ ರಜೆ ಅಥವಾ ಸಾರ್ವಜನಿಕ ರಜಾ ದಿನಗಳಲ್ಲಿ ಕೆಲಸಕ್ಕೆ ಸಂಬಂಧಿಸಿದ ಸಂದೇಶಗಳು/ ಇಮೇಲ್ಗಳನ್ನು ಸ್ವೀಕರಿಸುತ್ತಲೇ ಇದ್ದಾರೆ. ಬಿಜೆಪಿ ಆಡಳಿತವಿರುವ ಎಲ್ಲಾ ರಾಜ್ಯಗಳಲ್ಲಿ, ಕರೋನಾ ಸಾಂಕ್ರಾಮಿಕ ದಿನಗಳ ನಂತರ,ಪ್ರಾಯೋಗಿಕವಾಗಿ ಕೆಲಸದ ಸಮಯದ ಬಗ್ಗೆ ಯಾವುದೇ ಕಾನೂನು ಜಾರಿಯಲ್ಲಿ ಇಲ್ಲ, ಬದಲಿಗೆ ಜಂಗಲ್ ಕಾನೂನು ಅಂದರೆ, ಕಾಡಿನ ಕಾನೂನು ಮಾತ್ರ ಜಾರಿಯಲ್ಲಿವೆ.

ತಮಿಳುನಾಡಿನಲ್ಲಿ ವ್ಯಾಪಕವಾಗಿ ಹರಡುತ್ತಿರುವ ಹೋರಾಟ

ತಮಿಳುನಾಡಿನಲ್ಲಿ ಕೆಲಸದ ಸಮಯವನ್ನು ಹೆಚ್ಚಿಸುವ ಇಂತಹ ಪ್ರಯತ್ನ ಆರಂಭವಾದಾಗ, ಅಲ್ಲಿನ ಕಾರ್ಮಿಕ ವರ್ಗದ ಸಾಮೂಹಿಕ ಹೋರಾಟಗಳ ಕ್ರಮಗಳಿಂದ ಅದು ಯಶಸ್ವಿಯಾಗಿ ಸ್ಥಗಿತಗೊಂಡಿತ್ತು. ತಮಿಳುನಾಡಿನಲ್ಲಿ ಈ ಕಾನೂನು ವಿಜಯದ ಹೊರತಾಗಿಯೂ, ಕಾರ್ಮಿಕರು ಶಾಸನಬದ್ಧ ಕೆಲಸದ ಸಮಯಕ್ಕಿಂತ ಹೆಚ್ಚು ಕೆಲಸ ಮಾಡಲು ಒತ್ತಾಯಿಸಿದ ಯೋಜನೆಗಳಿಗೇನೂ ಕೊರತೆಯಿರಲಿಲ್ಲ, ಆದಾಗ್ಯೂ ಹೋರಾಟ ರಾಜ್ಯಾದ್ಯಂತ ಹೆಚ್ಚು ವ್ಯಾಪಕವಾಗಿ ಹರಡುತ್ತಿರುವುದನ್ನು ಕಾಣಬಹುದು.

ಹೆಚ್ಚುವರಿ ಮೌಲ್ಯವನ್ನು ಉತ್ಪಾದಿಸಲು...

ಆದಾಗ್ಯೂ, ನಮ್ಮ ದೇಶದಲ್ಲಿ, ಬಂಡವಾಳಶಾಹಿ ಸಮಾಜದಲ್ಲಿ ಇಂತಹ ಭಯಾನಕ ಪರಿಸ್ಥಿತಿ ಏಕೆ ಚಾಲ್ತಿಯಲ್ಲಿದೆ? ಕೆಲಸದ ಸಮಯದ ವಿಶ್ಲೇಷಣೆಯು ಮೂಲತಃ ಬಂಡವಾಳಶಾಹಿಯ ಅಡಿಯಲ್ಲಿ ಕೆಲಸದ ರೂಪಾಂತರದ ತಿಳುವಳಿಕೆಯಿಂದ ಬೇರೂರಿದೆ ಎಂದು ನಾವು ತಿಳಿದಿರಬೇಕು. ಬಂಡವಾಳಶಾಹಿ ಉದ್ಯೋಗದಾತರು ಕೆಲಸದ ಸಮಯವನ್ನು ಹೆಚ್ಚಿಸುವ ಮೂಲಕ ಸಂಪೂರ್ಣ ಹೆಚ್ಚುವರಿ ಮೌಲ್ಯವನ್ನು ಹೆಚ್ಚಿಸಿಕೊಳ್ಳಲು ಹೇಗೆ ಪ್ರಯತ್ನಿಸಿದರು ಎಂಬುದನ್ನು ಮಾರ್ಕ್ಸ್ ತೋರಿಸಿದ್ದಾರೆ. ಈ ಸಂದರ್ಭದಲ್ಲಿ ಅವರ ಉದ್ದೇಶ ಹೆಚ್ಚುವರಿ ಮೌಲ್ಯವನ್ನು ಉತ್ಪಾದಿಸುವ ಹೆಚ್ಚುವರಿ ಕಾರ್ಮಿಕರ ದುಡಿಯುವ ಸಮಯವನ್ನು ಹೆಚ್ಚಿಸುವುದು.

ಹೀಗಾಗಿಯೇ, ಕಾರ್ಮಿಕರನ್ನು ಶೋಷಿಸುವ ಈ ಪ್ರಯತ್ನವು ತೀವ್ರ ವಿರೋಧವನ್ನು ಎದುರಿಸಿತು ಮತ್ತು ಉತ್ಪಾದನಾ ಪ್ರಕ್ರಿಯೆಯಲ್ಲಿ ಬದಲಾವಣೆಗಳಿಗೆ ಕಾರಣವಾಯಿತು. ಗಮನಾರ್ಹವಾಗಿ, ಒಂದೆಡೆ ಬಂಡವಾಳಶಾಹಿ ಉದ್ಯೋಗದಾತರು ಉತ್ಪಾದನೆಯ ಸಾಪೇಕ್ಷ ಹೆಚ್ಚುವರಿ ಮೌಲ್ಯವನ್ನು ಹೆಚ್ಚಿಸುವ ಸಲುವಾಗಿ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದರು. ಕಾರ್ಮಿಕರ ಜೀವನಾಧಾರದ ಅವಶ್ಯಕತೆಗಳನ್ನು ಪೂರೈಸಲು ಅಗತ್ಯವಾದ ಕಾರ್ಮಿಕ ಸಮಯವನ್ನು ಕಡಿತಗೊಳಿಸುವ ಮೂಲಕ, ಬಂಡವಾಳಶಾಹಿ ಉದ್ಯೋಗದಾತರು ಹೆಚ್ಚುವರಿ ಕಾರ್ಮಿಕ ಸಮಯದಿಂದ ಲೆಕ್ಕಹಾಕಲ್ಪಟ್ಟ ಒಟ್ಟು ಸಮಯದ ಅನುಪಾತವನ್ನು ಹೆಚ್ಚಿಸಿದ್ದರು. ಕಾರ್ಮಿಕ ವರ್ಗವು ತನ್ನ ಹೋರಾಟ– ಕಾರ್ಯಗಳಲ್ಲಿ ತನ್ನ ಉಗ್ರಗಾಮಿತ್ವದ ಮೂಲಕ ಕೆಲಸದ ಸಮಯದ ಮಿತಿಯನ್ನು ಗಳಿಸಿಕೊಂಡಿದೆ. ಕೆಲವೊಮ್ಮೆ ತನ್ನ ಅಳಿವು–ಉಳಿವಿನ ಪರಿಸ್ಥಿತಿಯನ್ನು ಎದುರಿಸಿ, ಬೆಲೆತೆತ್ತು ಧಕ್ಕಿಸಿಕೊಂಡಿದೆ

ಭಾರತದ ಕಾರ್ಮಿಕ ಕಾನೂನುಗಳ ಉಲ್ಲಂಘನೆ

1919 ರಲ್ಲಿ ಅಂಗೀಕರಿಸಲ್ಪಟ್ಟ ಮೊದಲ ಐಎಲ್ ಒ ಸಮಾವೇಶವು ರಷ್ಯಾದಲ್ಲಿ ನಡೆದ ಗ್ರೇಟ್ ಅಕ್ಟೋಬರ್ ಕ್ರಾಂತಿಯ ಪರಿಣಾಮವಾಗಿ ಕೆಲಸದ ಸಮಯವನ್ನು ದಿನಕ್ಕೆ 8 ಗಂಟೆಗೆ ಸೀಮಿತಗೊಳಿಸುವ ಬಗ್ಗೆ ಪ್ರಸ್ತಾಪಿಸಿತು, ಇದು ಪ್ರಪಂಚದಾದ್ಯಂತ ಕೆಲಸದ ಸಮಯದ ಮೇಲೆ ಕ್ರಮೇಣ ಪರಿಣಾಮ ಬೀರಿತು. ಅದರಂತೆ ರಾಷ್ಟ್ರೀಯ ಕಾನೂನುಗಳನ್ನು ಜಾರಿಗೆ ತರಲಾಯಿತು. ನಿಮಗೆಲ್ಲರಿಗೂ ತಿಳಿದಿರುವಂತೆ, 70 ಅಥವಾ 90 ಗಂಟೆಗಳ ಕೆಲಸದ ವಾರದ ರಕ್ತ ಹೀರುವ ಪ್ರಸ್ತಾಪವು ಭಾರತದ ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸುತ್ತದೆ. ಇದು 1948 ರ ಕಾರ್ಖಾನೆಗಳ ಕಾಯ್ದೆ ಮತ್ತು ಅಂಗಡಿಗಳು ಮತ್ತು ಸ್ಥಾಪನೆ ಕಾಯ್ದೆಯಡಿಯಲ್ಲಿ ವಾರದ ಕೆಲಸದ ಸಮಯವನ್ನು 48 ಗಂಟೆಗಳಿಗೆ ಸೀಮಿತಗೊಳಿಸುತ್ತದೆ. ಓವರ್ ಟೈಮ್ ಅನ್ನು ಅನುಮತಿಸಲಾಗಿದೆ, ಆದರೆ ನಿಯಮಿತ ವೇತನಕ್ಕಿಂತ ಎರಡು ಪಟ್ಟು ಪಾವತಿಸಬೇಕು. ಹಾಗೆಯೇ ಓವರ್ ಟೈಮ್ ಸೇರಿದಂತೆ ಒಟ್ಟು ದೈನಂದಿನ ಕೆಲಸದ ಸಮಯ 12 ಮೀರಬಾರದು.

ಕಾರ್ಮಿಕರ ತೀವ್ರ ಪ್ರತಿರೋಧದಿಂದಾಗಿ 2020 ರ ಔಖಉ ಸಂಹಿತೆ ಕೂಡ ಅನುಷ್ಠಾನವನ್ನು ತಿಳಿಸಲು ಸಾಧ್ಯವಾಗಲಿಲ್ಲ, ಆದಾಗ್ಯೂ, ಕಾನೂನುಗಳ ಮಿತಿಗಳಿಗೆ ಬದ್ಧವಾಗಿದೆ, ಆದರೆ ತ್ರೈಮಾಸಿಕ ಅಧಿಕಾವಧಿಯನ್ನು 50 ರಿಂದ 125 ಗಂಟೆಗಳಿಗೆ ಮಾತ್ರ ಹೆಚ್ಚಿಸುತ್ತದೆ. ಸಂಹಿತೆಗಳ ಅಡಿಯಲ್ಲಿ ವಿರಾಮವಿಲ್ಲದೆ 5 ಗಂಟೆಗಳಿಗಿಂತ ಹೆಚ್ಚಿನ ನಿರಂತರ ಕೆಲಸವನ್ನು ನಿಷೇಧಿಸಲಾಗಿದೆ. ಹೀಗಾಗಿ, ಅಂತಹ ದೀರ್ಘ ಕೆಲಸದ ವಾರಗಳು ರಾಷ್ಟ್ರೀಯ ಕಾನೂನುಗಳು ಮತ್ತು ಅಂತರರಾಷ್ಟ್ರೀಯ ಕಾರ್ಮಿಕ ಮಾನದಂಡಗಳನ್ನು ಉಲ್ಲಂಘಿಸುತ್ತವೆ.

ಸಾಧ್ಯವಾದಷ್ಟು ಹೆಚ್ಚುವರಿ ಶ್ರಮವನ್ನು ಹೀರಿಕೊಳ್ಳುವ ಬಯಕೆ

ಬಂಡವಾಳಶಾಹಿಗೆ, ಕೆಲಸಗಾರನು ಕಳೆಯುವ ಎಲ್ಲಾ ಸಮಯವು ವಾಸ್ತವವಾಗಿ ಕೆಲಸದ ಸಮಯವಲ್ಲ. ಏಕೆಂದರೆ ಕೆಲಸಗಾರನಿಗೆ ನೀಡಲಾಗುವ ಎಲ್ಲಾ ವಿರಾಮ ಸಮಯವು ಅವನಿಗೆ ವ್ಯರ್ಥ ಹಣದಂತೆ ತೋರುತ್ತದೆ. ಮುಖ್ಯವಾಗಿ, ಅಂತಹ ಸಮಯದಲ್ಲಿ, ಬಂಡವಾಳಶಾಹಿ ಪಾವತಿಸಿದ ಯಂತ್ರೋಪಕರಣಗಳು ಮತ್ತು ಮೂಲಸೌಕರ್ಯಗಳು – ಸ್ಥಿರ ಬಂಡವಾಳವೂ ಸಹ ನಿಷ್ಕ್ರಿಯವಾಗಿರುತ್ತದೆ. ಆದ್ದರಿಂದ, ಬಂಡವಾಳಶಾಹಿಯ ಆಕ್ರಮಣಕಾರಿ ಚಾಲನೆಯು ಕೆಲಸದ ದಿನದ ಉದ್ದವನ್ನು ಹೆಚ್ಚಿಸುವುದಾಗಿದೆ.

"ಒಬ್ಬ ಬಂಡವಾಳಗಾರನಾಗಿ, ಅವನು ಕೇವಲ ಬಂಡವಾಳದ ವ್ಯಕ್ತಿತ್ವ ಹೊಂದಿರುವ ಜೊತೆಗೆ, ಅವನ ಆತ್ಮವು ಕೂಡ ಬಂಡವಾಳದ ಆತ್ಮವಾಗಿರುತ್ತದೆ. "ಆದರೆ ಬಂಡವಾಳವು ಒಂದೇ ಪ್ರೇರಕ ಶಕ್ತಿಯನ್ನು ಹೊಂದಿದೆ, ಅದು ತನ್ನನ್ನು ತಾನು ಮೌಲ್ಯೀಕರಿಸಿಕೊಳ್ಳುವ, ಹೆಚ್ಚುವರಿ ಮೌಲ್ಯವನ್ನು ಸೃಷ್ಟಿಸುವ, ಅದರ ಸ್ಥಿರ ಭಾಗವಾದ ಉತ್ಪಾದನಾ ಸಾಧನವನ್ನಾಗಿ ಮಾಡುವ, ಸಾಧ್ಯವಾದಷ್ಟು ಹೆಚ್ಚಿನ ಹೆಚ್ಚುವರಿ ಶ್ರಮವನ್ನು ಹೀರಿಕೊಳ್ಳುವ ಬಯಕೆ ಹೊಂದಿದೆ. ಬಂಡವಾಳವು ಸತ್ತ ಶ್ರಮವಾಗಿದ್ದು, ರಕ್ತಪಿಶಾಚಿಯಂತೆ, ಜೀವಂತ ಶ್ರಮವನ್ನು ಹೀರುವ ಮೂಲಕ ಮಾತ್ರ ಬದುಕುತ್ತದೆ ಮತ್ತು ಹೆಚ್ಚು ಹೆಚ್ಚು ಶ್ರಮವನ್ನು ಹೀರಿಕೊಳ್ಳುತ್ತದೆ". ಕೆಲಸಗಾರ ಕೆಲಸ ಮಾಡುವ ಸಮಯವು ಬಂಡವಾಳಶಾಹಿ ತನ್ನಿಂದ ಖರೀದಿಸಿದ ಶ್ರಮ ಶಕ್ತಿಯನ್ನು ಸೇವಿಸುವ ಸಮಯವಾಗಿದೆ. ಕೆಲಸಗಾರನು ತನ್ನ ಬಿಸಾಡಬಹುದಾದ ಸಮಯವನ್ನು ತನಗಾಗಿ ಬಳಸಿಕೊಂಡಾಗ, ಆಗ ಬಂಡವಾಳಶಾಹಿ ಅದಕ್ಕೆ ಅನುಮತಿ ನೀಡುವುದಿಲ್ಲ, ಆಗ ಕೆಲಸಗಾರನು ಬಂಡವಾಳಶಾಹಿಯನ್ನು ದೂಷಿಸುತ್ತಾನೆ!

ಆಗ ಸ್ವಾಭಾವಿಕ ಹಗಲಿನ ಮಿತಿಗಳನ್ನು ಮೀರಿ ರಾತ್ರಿಯೊಳಗೆ ದುಡಿಯುವ ಅಗೆಯುವಿಕೆಯನ್ನು ಹಾಗೆಯೇ, ಈ ಪ್ರವೃತ್ತಿಯನ್ನು ಮುಂದುವರಿಸುತ್ತಾ, ಉಪಶಮನಕಾರಿಯಾಗಿ ಕಾರ್ಯನಿರ್ವಹಿಸುತ್ತದೆ. ಇದು ರಕ್ತಪಿಶಾಚಿಯ ಬಾಯಾರಿಕೆಯನ್ನು ಸ್ವಲ್ಪಮಟ್ಟಿಗೆ ತಣಿಸುತ್ತದೆ. ಆದ್ದರಿಂದ ಬಂಡವಾಳಶಾಹಿ ಉತ್ಪಾದನೆಯು ಅದರ ಅಂತರ್ಗತ ಸ್ವಭಾವದಿಂದ, ದಿನದ 24 ಗಂಟೆಗಳ ಕಾಲ ಶ್ರಮವನ್ನು ಸ್ವಾಧೀನಪಡಿಸಿಕೊಳ್ಳುವ ಕಡೆಗೆ ಚಲಿಸುತ್ತದೆ.

ಸ್ಪರ್ಧಾತ್ಮಕ ನಿಯಮಗಳು ಬಂಡವಾಳಶಾಹಿಯ ನಿಯಮಗಳಾಗಿವೆ

ಆ ವ್ಯವಹಾರದಲ್ಲಿ, ಮಾಲೀಕರ ಅಥವಾ ಅವರ ವೈಯಕ್ತಿಕ ನೈತಿಕತೆ ಏನೇ ಇರಲಿ, ಸ್ಪರ್ಧಾತ್ಮಕ ನಿಯಮಗಳು ಬಂಡವಾಳಶಾಹಿಯ ನಿಯಮಗಳಾಗಿವೆ. ಇಂತಹ ಚಾಲನೆಯನ್ನು ಬಂಡವಾಳಶಾಹಿಯ ಮೇಲೆ ಹೇರುತ್ತವೆ. ಪ್ರತಿಯೊಬ್ಬ ಬಂಡವಾಳಶಾಹಿಯೂ ಈ ಓಟದಲ್ಲಿ ಕೆಳಮಟ್ಟಕ್ಕೆ ಭಾಗವಹಿಸಬೇಕು ಅಥವಾ ಬೇರೆಯವರಿಗಾಗಿ ತಮ್ಮ ಲಾಭವನ್ನು ಕಳೆದುಕೊಳ್ಳಬೇಕಾಗುತ್ತದೆ. ಮಾರ್ಕ್ಸ್ ಹೇಳಿದಂತೆ: "ಬಂಡವಾಳವು ಕೆಲಸಗಾರನ ಆರೋಗ್ಯ ಮತ್ತು ಜೀವಿತಾವಧಿಯನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ." ಸಮಾಜವು ಅದನ್ನು ಹಾಗೆ ಮಾಡಲು ಒತ್ತಾಯಿಸದ ಹೊರತು, ದೈಹಿಕ ಮತ್ತು ಮಾನಸಿಕ ಅವನತಿ, ಅಕಾಲಿಕ ಮರಣ, ಅತಿಯಾದ ಕೆಲಸದ ಹಿಂಸೆಯ ಬಗ್ಗೆ ಅದರ ಉತ್ತರ ಹೀಗಿದೆ: ಆ ನೋವು ನಮಗೆ ತೊಂದರೆ ಕೊಡಬೇಕೇ, ಏಕೆಂದರೆ ಅದು ನಮ್ಮ ಸಂತೋಷವನ್ನು (ಲಾಭ) ಹೆಚ್ಚಿಸುತ್ತದೆಯೇ? ಆದರೆ ಒಟ್ಟಾರೆಯಾಗಿ ಈ ವಿಷಯಗಳನ್ನು ನೋಡಿದಾಗ, ಇದು ವೈಯಕ್ತಿಕ ಬಂಡವಾಳಶಾಹಿಯ ಒಳ್ಳೆಯದು ಅಥವಾ ಕೆಟ್ಟದು ಎಂಬ ಇಚ್ಛೆಯನ್ನು ಅವಲಂಬಿಸಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಮುಕ್ತ ಸ್ಪರ್ಧೆಯ ಅಡಿಯಲ್ಲಿ, ಬಂಡವಾಳಶಾಹಿ ಉತ್ಪಾದನೆಯ ಅಂತರ್ಗತ ಕಾನೂನುಗಳು ವೈಯಕ್ತಿಕ ಬಂಡವಾಳಶಾಹಿಯನ್ನು ಅವನಿಗೆ ಹೊರಗಿನ ಬಲವಂತದ ಶಕ್ತಿಯಾಗಿ ಎದುರಿಸುತ್ತವೆ."

ಇದು ಮಾರ್ಕ್ಸ್ ಮತ್ತು ಎಂಗೆಲ್ಸ್ಗಿಂತ ಮೊದಲಿನ ರಾಬರ್ಟ್ ಓವನ್ ರಂತಹ ಯುಟೋಪಿಯನ್ ಸಮಾಜವಾದಿಗಳು ಎದುರಿಸಿದ ಸಮಸ್ಯೆಗಳನ್ನು ಎತ್ತಿ ತೋರಿಸುತ್ತದೆ ಮತ್ತು ಅವರು ಸಮಾಜವಾದವನ್ನು ಶಿಕ್ಷಣದ ಮೂಲಕ ಮತ್ತು "ನೈತಿಕತೆಯ ಶಾಶ್ವತ ಸತ್ಯಗಳು, ನ್ಯಾಯ ಮತ್ತು ಕಾರಣ"ಗಳಿಗೆ ಮನವಿ ಮಾಡುವ ಮೂಲಕ ಮಾತ್ರ ತರಬಹುದು ಎಂದು ಭಾವಿಸಿದ್ದರು. ಅದೇ ರೀತಿ, ಓವನ್ ಸ್ವತಃ ಸಾಧಿಸಲು ಪ್ರಯತ್ನಿಸಿದಂತೆ ಒಂದೇ ಕಾರ್ಖಾನೆಯಲ್ಲಿ ಸಮಾಜವಾದವನ್ನು ನಿರ್ಮಿಸಲು ಪ್ರಯತ್ನಿಸುವ ಮಿತಿಗಳನ್ನು ಇದು ವಿವರಿಸುತ್ತದೆ. ಒಬ್ಬ ವೈಯಕ್ತಿಕ ವ್ಯವಹಾರ ಮಾಲೀಕರು ದಯೆ ಮತ್ತು ಪರೋಪಕಾರಿ ಆಗಿರಬಹುದು ಅಥವಾ ತಮ್ಮ ಕಾರ್ಮಿಕರನ್ನು ದಯೆಯಿಂದ ನಡೆಸಿಕೊಳ್ಳಬಹುದು ಮತ್ತು ಅವರಿಗೆ ಉತ್ತಮ ವೇತನ ನೀಡಬಹುದು, ಆದರೆ ಅಂತಹ ಮಾಲೀಕರು ಇನ್ನೂ ಸ್ಪರ್ಧೆ ಮತ್ತು ಲಾಭಕ್ಕಾಗಿ ಉತ್ಪಾದನೆಯ ನಿಯಮಗಳಿಗೆ ಒಳಪಟ್ಟಿರುತ್ತಾರೆ ಮತ್ತು ಹೀಗಾಗಿ ಅವನ/ಅವಳ ಪ್ರತಿಸ್ಪರ್ಧಿಗಳ ಕಾರ್ಮಿಕ ವೆಚ್ಚವನ್ನು ಕಡಿತಗೊಳಿಸಲು ಅಥವಾ ವ್ಯವಹಾರದಿಂದ ಹೊರಹಾಕಲ್ಪಡುವ ಅಪಾಯವನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ, ಬಂಡವಾಳಶಾಹಿಯ ಸಮಸ್ಯೆಗಳು ಕೇವಲ ವೈಯಕ್ತಿಕ ಬಂಡವಾಳಶಾಹಿಗಳ ದುರಾಸೆಯ ಪರಿಣಾಮವಲ್ಲ, ಆದರೆ ಬಂಡವಾಳಶಾಹಿಯ ಕಾನೂನುಗಳಲ್ಲಿಯೇ ಅಂತರ್ಗತವಾಗಿರುವ ವಿರೋಧಾಭಾಸಗಳಾಗಿವೆ.

ವರ್ಗ ಹೋರಾಟದ ನಿರ್ಣಾಯಕ ಪಾತ್ರ ಇಲ್ಲಿದೆ

ಕೆಲಸದ ಸಮಯದ ಉದ್ದವನ್ನು ನಿರ್ಧರಿಸುವಲ್ಲಿ ವರ್ಗ ಹೋರಾಟದ ನಿರ್ಣಾಯಕ ಪಾತ್ರ ಇಲ್ಲಿದೆ. ಬಂಡವಾಳಶಾಹಿ ಉದ್ಯೋಗದಾತರು ನಿರಂತರವಾಗಿ ಕೆಲಸದ ಸಮಯವನ್ನು ಹೆಚ್ಚಿಸಲು ಶ್ರಮಿಸುತ್ತಾರೆ, ಆದರೆ ಕಾರ್ಮಿಕರು ಸಹ ಅದನ್ನು ಕಡಿಮೆ ಮಾಡಲು ಗುರಿಯಿಟ್ಟು ಹೋರಾಡಬೇಕು. ಮಾರ್ಕ್ಸ್‌ಗೆ, ಕೆಲಸದ ಸಮಯದ ವಿವಾದವು ಬಂಡವಾಳಶಾಹಿಯ ಕೇಂದ್ರ ಚಲನಶೀಲತೆಯಾಗಿತ್ತು ಮತ್ತು ಬಂಡವಾಳಶಾಹಿ ಸಮಾಜದಲ್ಲಿ ವ್ಯಾಪಕ ವರ್ಗ ಸಂಘರ್ಷವನ್ನು ರೂಪಿಸಿತು.

ಹೀಗಾಗಿ, ಆರ್ಥಿಕತೆಯ ಸುತ್ತ 'ಕೆಲಸದ ಸಮಯ'ವನ್ನು ಕಡಿತಗೊಳಿಸುವ ನಿಟ್ಟಿನಲ್ಲಿ, ನಿರ್ಣಾಯಕ ಪ್ರಗತಿ ಸಾಧಿಸಲು, ಕಾರ್ಮಿಕ ಸಂಘಗಳು ಸಾಮೂಹಿಕವಾಗಿ ಸಂಘಟಿಸಿ ಕಾರ್ಮಿಕರನ್ನು ಒಗ್ಗೂಡಿಸಿ ನಡೆಸುವ ಹೋರಾಟದ ಮೇಲೆ ಅವಲಂಬಿತವಾಗಿರುತ್ತದೆ. ಕಾರ್ಮಿಕರ ಸಾಮೂಹಿಕ ಹೋರಾಟವು ಬಂಡವಾಳಶಾಹಿಗೆ ನಿರಂತರವಾಗಿ ಬೆದರಿಕೆಯನ್ನು ಒಡ್ಡುತ್ತದೆ. ದೀರ್ಘಾವಧಿಯ ಕೆಲಸದ ಸಮಯದ ಸಂಘರ್ಷಗಳಿಂದ ಈ ಹೋರಾಟವು ವಿಕಸನಗೊಳ್ಳುತ್ತದೆ ಮತ್ತು ಬಂಡವಾಳಶಾಹಿಯನ್ನು ಸ್ವತಃ ಬಗ್ಗುಬಡಿಯಲು ವಿಶಾಲವಾದ ಅನ್ವೇಷಣೆಯಾಗಿ ಅದನ್ನು ಹೆಚ್ಚಿಸಬೇಕು. ಈ ಪ್ರಕ್ರಿಯೆಯಲ್ಲಿ, ಕಾರ್ಮಿಕ ವರ್ಗವು ಬಂಡವಾಳಶಾಹಿಯನ್ನು ಉರುಳಿಸಲು ಅವರ ನೇತೃತ್ವದ ಸಾಮಾಜಿಕ ಕ್ರಾಂತಿಯ ಯೋಜನೆಯನ್ನು ದೃಶ್ಯೀಕರಿಸಬೇಕು. ಸಮಾಜವಾದವು ಅಂತಿಮವಾಗಿ ಬಂಡವಾಳಶಾಹಿಯನ್ನು ಬದಲಾಯಿಸಬೇಕು, ಅಲ್ಲಿ ಕಾರ್ಮಿಕರು (ಮತ್ತು ಸಮಾಜದ ಉಳಿದವರು) ವಿಭಿನ್ನ ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳಲ್ಲಿ ಬದುಕಲು ಮತ್ತು ಕೆಲಸ ಮಾಡಲು ಎದುರು ನೋಡಬಹುದು. ಮುಖ್ಯವಾಗಿ, ಆದರ್ಶ ಕೆಲಸ–ಜೀವನ ಸಮತೋಲನವನ್ನು ಖಚಿತಪಡಿಸಿಕೊಳ್ಳಲು, ಇವು ಮಾತ್ರವೇ ಜನರಿಗೆ ಕಡಿಮೆ ಕೆಲಸದ ಸಮಯವನ್ನು ಒಳಗೊಂಡಿರುತ್ತವೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE July 28- 03 August, 2025 Price: Rs. 10/- Date of Publication: 25 July 2025 RNI No. KARKAN/2006/17926 Posted on 28-07-2025
Posted at BG PSO, BG - 560026 **Posted at Periodical Rate -** Rs. 2

ಇಸ್ರೇಲ್ ಮೇಲೆ ಶಸ್ತ್ರಾಸ್ತ್ರ ಮತ್ತು ಆರ್ಥಿಕ ದಿಗ್ಬಂಧನ ಹೇರಲು 12 ದೇಶಗಳ ನಿರ್ಧಾರ

ಇತ್ತೀಚೆಗೆ ಕೊಲಂಬಿಯಾ ರಾಜಧಾನಿ ಬೊಗೊಟಾದಲ್ಲಿ ಹೇಗ್ ಗುಂಪು ಸಂಘಟಿಸಿದ್ದ ಶೃಂಗಸಭೆಯಲ್ಲಿ ಇಸ್ರೇಲ್ ಮೇಲೆ ಶಸ್ತ್ರಾಸ್ತ್ರ ಮತ್ತು ಆರ್ಥಿಕ ದಿಗ್ಬಂಧನ ಹೇರುವ ನಿರ್ಣಯ ಕೈಗೊಳ್ಳಲಾಗಿದೆ. ಈ ಐತಿಹಾಸಿಕ ಒಪ್ಪಂದ ಗಾಜಾದಲ್ಲಿ ಇಸ್ರೇಲ್ ನಡೆಸುತ್ತಿರುವ ನರಮೇಧದ ವಿರುದ್ಧ ಮೊದಲ ಬಹುಪಕ್ಷೀಯ ಒತ್ತಡದ ಪ್ರಯತ್ನವಾಗಿದೆ.



ಎನ್.ಕೆ.ವಸಂತರಾಜ್

ಗಾಜಾದಲ್ಲಿ ಪ್ಯಾಲೆಸ್ಟೀನ್ ಜನತೆಯ ಮೇಲೆ ದೌರ್ಜನ್ಯ ದಿನೇ ದಿನೇ ಭೀಕರ ಸ್ವರೂಪ ಪಡೆಯುತ್ತಿದೆ. ಗಾಜಾದ ಹಲವಾರು ಪ್ರದೇಶಗಳಿಂದ ತಕ್ಷಣವೇ ಖಾಲಿ ಮಾಡಬೇಕೆಂಬ ಫರ್ಮಾನು ಮತ್ತು ಕದನ ವಿರಾಮ ಲೆಕ್ಕಿಸದೆ, ನಿರಾಶ್ರಿತ ಕ್ಯಾಂಪ್, ಆಸ್ಪತ್ರೆಗಳೂ ಸೇರಿದಂತೆ ಎಲ್ಲ ಮಾಲಸೌಕರ್ಯಗಳನ್ನು ನಾಶಪಡಿಸಿದ ಇಸ್ರೇಲಿ ಸೈನ್ಯದ ಅವಿರತ ಬಾಂಬ್ ದಾಳಿಯ ಮೂಲಕ ನಡೆಸುವ ನರಮೇಧಕ್ಕೆ 22 ತಿಂಗಳುಗಳು ಕಳೆದಿವೆ. ಇದರಿಂದ ಸುಮಾರು 60 ಸಾವಿರ ಜನರು ಸಾವಿಗೀಡಾಗಿದ್ದು, ಅವರಲ್ಲಿ ಶೇ.70 ಮಹಿಳೆಯರು ಮತ್ತು ಮಕ್ಕಳು. 1.5 ಲಕ್ಷ ಜನರು ತೀವ್ರವಾಗಿ ಗಾಯಗೊಂಡಿದ್ದಾರೆ. ವಿಶ್ವಸಂಸ್ಥೆ ಸೇರಿದಂತೆ ಎಲ್ಲ ಮಾನವೀಯ ಸಂಸ್ಥೆಗಳ ಆಹಾರ, ಔಷಧಿಯಂತಹ ಅಗತ್ಯ ಸಾಮಗ್ರಿಗಳು ಪೂರೈಕೆಯನ್ನು ತಡೆಹಿಡಿದು ಹಲವು ವಾರಗಳೇ ಆಗಿದ್ದು, ಸಾಮೂಹಿಕ ಹಸಿವು–ಸಾವುಗಳ ಅಪಾಯ ಕಾದಿದೆ. ಯುಎಸ್–ಇಸ್ರೇಲಿ ಪ್ರಾಯೋಜಿತ 'ಗಾಜಾ ಮಾನವೀಯ ಫೌಂಡೇಶನ್' ಮಾತ್ರ ಆಹಾರ ಪೂರೈಕೆ ಮಾಡಬೇಕು ಎಂದು ಷರತ್ತು ಹಾಕಿ, ಅದನ್ನು ಪಡೆಯಲು ಬಂದವರ ಮೇಲೆ ಇಸ್ರೇಲಿ ಸೈನ್ಯ ಗುಂಡಿನ ದಾಳಿಮಾಡುವ ಮೂಲಕ ನರಮೇಧದ ಇನ್ನೊಂದು ಭೀಕರ ರೂಪದ ಅಧ್ಯಾಯ ತೆರೆದಿದೆ. ಕಳೆದ 8 ವಾರಗಳಲ್ಲಿ ಸಾವಿರಕ್ಕೂ ಹೆಚ್ಚು ಜನ ಇಂತಹ ದಾಳಿಗಳಲ್ಲಿ ಸತ್ತಿದ್ದಾರೆ.

ಆದರೂ ಇಸ್ರೇಲಿನ ಮೇಲೆ ಹಿಡಿತವಿರುವ ಯುಎಸ್ ಆಗಲಿ, ಯುರೋ ಕೂಟವಾಗಲಿ ಕಿರುಬೆರಳೆತ್ತಿಲ್ಲ. ವಿಶ್ವಸಂಸ್ಥೆ ಮತ್ತು ಮಾನವೀಯ ನೆರವು ಗುಂಪುಗಳು ಈ ಬೀಕರ ಪರಿಸ್ಥಿತಿಯನ್ನು ಖಂಡಿಸುತ್ತಿದ್ದರೂ, ನೆರೆಯ ಅರಬ್ ದೇಶಗಳಾಗಲಿ, ಅಂತರರಾಷ್ಟ್ರೀಯ ಸಂಘಟನೆಗಳು ಖಂಡನೆ ಮಾಡುತ್ತಿದ್ದರೂ ಯಾವುದೇ ಕಾರ್ಯಾಚರಣೆ ಮಾಡುತ್ತಿಲ್ಲ. ಈ ನಿರಾಶೆಯ ಕಾರ್ಮೋಡಗಳ ನಡುವೆ ಬೆಳ್ಳಿ ಗೆರೆಯಂತೆ, ದಕ್ಷಿಣ ಅಮೆರಿಕಾದ ಕೊಲಂಬಿಯ ರಾಜಧಾನಿ ಬೊಗೊಟಾದಲ್ಲಿ 30 ದೇಶಗಳ ಪ್ರತಿನಿಧಿಗಳು ಜುಲೈ 15–16ರಂದು ಒಂದು ಶೃಂಗ ಸಭೆಯಲ್ಲಿ ಸೇರಿದ್ದರು.

"ಹೇಗ್ ಗುಂಪು" ಅಂತರರಾಷ್ಟ್ರೀಯ ಕಾನೂನಿನ ರಕ್ಷಣೆ ಮತ್ತು ಪ್ಯಾಲೆಸ್ಟೈನ್ ಜನರಿಗೆ ಸೌಹಾರ್ದ ಬೆಂಬಲ ನೀಡುವ ಕಾನೂನು ಮತ್ತು ರಾಜತಾಂತ್ರಿಕ ಕ್ರಮಗಳನ್ನು ಸಂಘಟಿಸಲು ಬದ್ಧವಾಗಿರುವ ದೇಶಗಳ ಜಾಗತಿಕ ಗುಂಪಾಗಿದೆ. ಈ ಸಭೆಯನ್ನು "ಹೇಗ್ ಗುಂಪು" ಕೊಲಂಬಿಯ ಮತ್ತು ದಕ್ಷಿಣ ಆಫ್ರಿಕಾದ ಸರಕಾರಗಳ ಸಹಕಾರದೊಂದಿಗೆ ಸಂಘಟಿಸಿದ್ದು, ಜನವರಿ 2025ರಲ್ಲಿ ಸ್ಥಾಪಿಸಲಾದ ಹೇಗ್ ಗುಂಪಿನ ಸದಸ್ಯ ದೇಶಗಳು ಸೇರಿದಂತೆ ಹಲವು (ಪ್ರಮುಖವಾಗಿ ಜಾಗತಿಕ ದಕ್ಷಿಣ ಅಂದರೆ ಅಭಿವೃದ್ಧಿಶೀಲ) ದೇಶಗಳನ್ನು ಆಹ್ವಾನಿಸಲಾಗಿತ್ತು.

ಈ ಶೃಂಗಸಭೆಯಲ್ಲಿ ಏಷ್ಯಾ ಖಂಡದ ಬಾಂಗ್ಲಾದೇಶ, ಚೀನಾ, ಇಂಡೋನೇಷಿಯಾ, ಇರಾಕ್, ಲೆಬನಾನ್, ಮಲೇಷಿಯಾ, ಓಮಾನ್, ಪಾಕಿಸ್ತಾನ್, ಪ್ಯಾಲೆಸ್ಟೈನ್, ಖತಾರ್; ಆಫ್ರಿಕಾ ಖಂಡದ ದಕ್ಷಿಣಆಫ್ರಿಕಾ, ಅಲ್ಜೀರಿಯಾ, ಲಿಬಿಯಾ, ನಮಿಬಿಯಾ ಈಜಿಪ್ಟ್, ದಿಬೌಟಿ, ಅಮೆರಿಕಾ ಖಂಡದ ಕ್ಯೂಬಾ, ಕೊಲಂಬಿಯ, ಮೆಕ್ಸಿಕೋ, ಬ್ರೆಜಿಲ್, ಬೋಟ್ಸ್ವಾನಾ, ಚಿಲಿ, ಹೊಂಡುರಾಸ್, ನಿಕಾರಾಗುವಾ, ಉರುಗ್ವೆ, ವೆನೆಜುವೆಲಾ, ಸೈಂಟ್ ವಿನ್‌ಸೆಂಟ್ ಮತ್ತು ಗ್ರೆನೆಡೈನ್ಸ್; ಯುರೋಪ್ ಖಂಡದ ಸ್ಲೋವೀನಿಯಾ, ಸ್ಪೇನ್, ಐರ್ಲೆಂಡ್, ನಾರ್ವೆ ದೇಶಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಈ ಸಭೆಯನ್ನು ಕೊಲಂಬಿಯಾ ಮತ್ತು ದಕ್ಷಿಣ ಆಫ್ರಿಕಾ ಸರ್ಕಾರಗಳು ಆಯೋಜಿಸಿದ್ದವು ಮತ್ತು 30 ದೇಶಗಳು ಭಾಗವಹಿಸಿದ್ದವು. ಈ ಸಭೆಯಲ್ಲಿ ಇಸ್ರೇಲಿನ "ದಂಡನೆಯಿಂದ ವಿನಾಯಿತಿಯ ಯುಗ ಕೊನೆಗೊಳ್ಳಬೇಕು. (ಇಸ್ರೇಲಿಗೆ ಸಂಬಂಧಿಸಿದ) ಅಂತಾರಾಷ್ಟ್ರೀಯ ಕಾನೂನನ್ನು ಯಾವ ಭಯ ಅಥವಾ ಪಕ್ಷಪಾತ ಇಲ್ಲದೆ ರಾಷ್ಟ್ರೀಯ ನೀತಿಗಳು ಮತ್ತು ಕಾನೂನುಗಳ ಮೂಲಕ ಕಡ್ಡಾಯವಾಗಿ ಜಾರಿಗೆ ತರಬೇಕು. ಇದರ ಜತೆಗೆ ತಕ್ಷಣದ ಯುದ್ಧ ವಿರಾಮಕ್ಕೆ ಒಟ್ಟುಗೂಡಿದ ಒತ್ತಾಯ ತರಬೇಕು." ಎಂಬ ನಿರ್ಣಯಕ್ಕೆ ಬರಲಾಯಿತು.

ಗಾಜಾದಲ್ಲಿನ ಜನಾಂಗ ಹತ್ಯೆಯನ್ನು ತಡೆಯಲು ಕೆಳಕಂಡ ಕ್ರಮಗಳನ್ನು ಈ ಶೃಂಗಸಭೆಯಲ್ಲಿ ರೂಪಿಸಲಾಗಿದೆ:

* ಇಸ್ರೇಲ್‌ಗೆ ಶಸ್ತ್ರಾಸ್ತ್ರಗಳು, ಮದ್ದು–ಗುಂಡುಗಳು, ಇಂಧನ, ಮಿಲಿಟರಿ ಉಪಕರಣಗಳು ಮತ್ತು ಉಭಯ (ಅಂದರೆ ನಾಗರಿಕ ಮತ್ತು ಮಿಲಟರಿ) ಬಳಕೆ ಸಾಮಗ್ರಿಗಳನ್ನು ನೀಡುವುದು ಅಥವಾ ವರ್ಗಾವಣೆ ಮಾಡುವುದನ್ನು ತಡೆಯುವುದು.

* ಇಸ್ರೇಲ್‌ಗೆ ಇಂತಹ ನಿರ್ಬಂಧಿತ ಸಾಮಗ್ರಿಗಳನ್ನು ಸಾಗಿಸಲು ಬಳಸಬಹುದಾದ ಹಡಗುಗಳನ್ನು ಯಾವುದೇ ಬಂದರುಗಳಲ್ಲಿ ನಿಲುಗಡೆ ಅಥವಾ ಸೇವೆಗೊಳಪಡಿಸುವುದನ್ನು ತಡೆಯುವುದು.

* ನಮ್ಮ (ಅಂದರೆ ಸಹಿ ಹಾಕಿರುವ ದೇಶಗಳ) ಧ್ವಜವನ್ನು ಹೊತ್ತಿರುವ ಹಡಗುಗಳು ಇಸ್ರೇಲ್‌ಗೆ ಈ ಸಾಮಗ್ರಿಗಳನ್ನು ಸಾಗಿಸುವುದನ್ನು ತಡೆಯುವುದು ಮತ್ತು ಈ ನಿಷೇಧ ಉಲ್ಲಂಘನೆಯಾಗುವಲ್ಲಿ ಹೊಣೆಗಾರಿಕೆಯನ್ನು ನಿಶ್ಚಿತಗೊಳಿಸುವುದು (ಉದಾ: ಧ್ವಜ ವಾಪಸ್ಸು).

* ಸಾರ್ವಜನಿಕ ಸಂಸ್ಥೆಗಳು (ಅಥವಾ ಸಾರ್ವಜನಿಕ ಬೆಂಬಲದೊಂದಿಗೆ ಇತರರು) ಪ್ಯಾಲೆಸ್ಟೈನಿನ ಭೂಮಿಯಲ್ಲಿ ಇಸ್ರೇಲ್‌ನ ಆಕ್ರಮಣವನ್ನು ಬೆಂಬಲಿಸುವ ಯಾವುದೇ ಸಾರ್ವಜನಿಕ ಒಪ್ಪಂದಗಳನ್ನು ತಕ್ಷಣ ಮೌಲ್ಯಮಾಪನ ಮಾಡುವುದು

* ಅಂತಾರಾಷ್ಟ್ರೀಯ ಕಾನೂನಿನ ಅಡಿಯಲ್ಲಿ ಗಂಭೀರ ಅಪರಾಧಗಳ ವಿರುದ್ಧ ನ್ಯಾಯ ಒದಗಿಸಲು ಬದ್ಧತೆ, ದೇಶೀಯ ಅಥವಾ ಅಂತರರಾಷ್ಟ್ರೀಯ ಮಟ್ಟದಲ್ಲಿ ಗಟ್ಟಿಯಾದ, ಪಕ್ಷಪಾತರಹಿತ ಮತ್ತು ಸ್ವತಂತ್ರ ತನಿಖೆ ಮತ್ತು ನ್ಯಾಯಾಂಗ ಕ್ರಮಗಳನ್ನು ಕೈಗೊಳ್ಳುವುದು

* ಆಕ್ರಮಿತ ಪ್ಯಾಲೆಸ್ಟೈನಿನ ಭೂ ಪ್ರದೇಶದಲ್ಲಿ ನಡೆದ ಅಂತರಾಷ್ಟ್ರೀಯ ಅಪರಾಧಗಳಿಗೆ ನ್ಯಾಯ ಒದಗಿಸಲು, ರಾಷ್ಟ್ರೀಯ ಚೌಕಟ್ಟಿನಲ್ಲಿ ಸೂಕ್ತವಾಗಿ "ಸಾರ್ವತ್ರಿಕ ನ್ಯಾಯಾಧಿಕಾರ"ವನ್ನು ಸೇರಿಸುವುದು.

ಶೃಂಗಸಭೆಯಲ್ಲಿ ಬಾಗವಹಿಸಿದ 30 ದೇಶಗಳು, ಮುಂದೆ ಕಾಣಿಸಿದ 12 ದೇಶಗಳು ಮಾತ್ರ ತಕ್ಷಣವೇ ಈ ಒಪ್ಪಂದಗಳನ್ನು ಅನುಸರಿಸಲು ಒಪ್ಪಿಕೊಂಡವು: ಬೊಲಿವಿಯಾ, ಕ್ಯೂಬಾ, ಕೊಲಂಬಿಯಾ, ಇಂಡೋನೇಷಿಯಾ, ಇರಾಕ್, ಲಿಬಿಯಾ, ಮಲೇಷಿಯಾ, ನಮಿಬಿಯಾ, ನಿಕಾರಾಗುವಾ, ಓಮಾನ್, ಸೈಂಟ್ ವಿನ್‌ಸೆಂಟ್ ಮತ್ತು ಗ್ರೆನೆಡೈನ್ಸ್ ಮತ್ತು ದಕ್ಷಿಣ ಆಫ್ರಿಕಾ. ಇತರ ದೇಶಗಳು 2025ರ ಸೆಪ್ಟೆಂಬರ್ 20ರಂದು ನಡೆಯುವ 80ನೇ ಯುಎನ್ ಸಾಮಾನ್ಯ ಸಭೆಯ ಒಳಗೆ ಈ ಒಪ್ಪಂದಕ್ಕೆ ಸೇರಲಿದ್ದಾರೆ ಎಂಬ ನಿರೀಕ್ಷೆಯಿದೆ. ಇಸ್ರೇಲ್ ವಿರುದ್ಧದ ಈ ಕ್ರಮಗಳಲ್ಲಿ ಇತರ ರಾಷ್ಟ್ರಗಳನ್ನು ಸೇರಿಸಿಕೊಳ್ಳಲು ಹೇಗ್ ಗುಂಪು ಮುಂದುವರಿದು ಮಾತುಕತೆ ನಡೆಸಲಿದೆ.

ಗುಂಪಿನ ನಿರ್ಣಯಗಳನ್ನು ಘೋಷಿಸುತ್ತಾ ಕೊಲಂಬಿಯಾದ ಅಧ್ಯಕ್ಷ ಗಸ್ತಾವೋ ಪೆಟ್ರೊ ಹೇಳಿದರು:

"ನಾವು ಇತಿಹಾಸವನ್ನು ನಿರ್ಮಿಸಲು ಬೊಗೋಟಾಕ್ಕೆ ಬಂದೆವು? ಮತ್ತು ನಾವು ಇತಿಹಾಸವನ್ನು ನಿರ್ಮಿಸಿದ್ದೇವೆ... ಈಗ ನಾವು (ಇಸ್ರೇಲಿನ) ದಂಡನೆಯಿಂದ ವಿನಾಯಿತಿಯ ಯುಗವನ್ನು ಅಂತ್ಯಗೊಳಿಸುವ ಕೆಲಸವನ್ನು ಪ್ರಾರಂಭಿಸಿದ್ದೇವೆ. ಈ ಕ್ರಮಗಳು ಅಂತಾರಾಷ್ಟ್ರೀಯ ಕಾನೂನನ್ನು ಹೆಚ್ಚು ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ತೋರಿಸುತ್ತವೆ."

ದಕ್ಷಿಣ ಆಫ್ರಿಕಾದ ಕಾರ್ಯದರ್ಶಿ ರೋನಾಲ್ಡ್ ಲಮೊಲಾ ಗುಂಪಿನ ನಿರ್ಣಯದ ನಂತರ ಮಾತನಾಡುತ್ತಾ ಹೀಗೆ ಹೇಳಿದರು:

"ಇಲ್ಲಿ ನಾವು ಸಾಧಿಸಿದದ್ದೆಂದರೆ ಯಾವುದೇ ರಾಷ್ಟ್ರವೂ ಕಾನೂನಿಗೆ ಮೇಲ್ಪಟ್ಟದ್ದಲ್ಲ ಎಂಬ ಸಾಮೂಹಿಕ ದೃಢೀಕರಣ. ಹೇಗ್ ಗುಂಪು (ಇಸ್ರೇಲಿನ) ದಂಡನೆಯಿಂದ ವಿನಾಯಿತಿಯ ಯುಗದಲ್ಲಿ ಅಂತಾರಾಷ್ಟ್ರೀಯ ಕಾನೂನನ್ನು ಮುಂದಕ್ಕೆ ಒಯ್ಯಲು ಹುಟ್ಟಿಕೊಂಡದ್ದು. ಬೊಗೋಟಾದಲ್ಲಿ ಅಂಗೀಕರಿಸಿದ ಕ್ರಮಗಳು ನಾವು ಈ ಬಗ್ಗೆ ಗಂಭೀರರಾಗಿದ್ದೇವೆ ಎಂಬುದನ್ನು ತೋರಿಸುತ್ತವೆ."

ಈ ಒಪ್ಪಂದ ಐತಿಹಾಸಿಕವಾಗಿದೆ, ಏಕೆಂದರೆ ಇದು ಗಾಜಾದಲ್ಲಿ ಇಸ್ರೇಲ್ ನಡೆಸುತ್ತಿರುವ ನರಮೇಧದ ವಿರುದ್ಧ ಮೊದಲ ಬಹುಪಕ್ಷೀಯ ಒತ್ತಡದ ಪ್ರಯತ್ನವಾಗಿದೆ. ಇದು ಅಂತರರಾಷ್ಟ್ರೀಯ ಕಾನೂನುಗಳ ಉಲ್ಲಂಘನೆಗೆ ಇಸ್ರೇಲ್‌ಗೆ ಎಂದಿನಿಂದ ದೊರಕುತ್ತಿದ್ದ ದಂಡನೆಯಿಂದ ರಿಯಾಯಿತಿಗೆ ಹಲವು ದೇಶಗಳು ಜಂಟಿಯಾಗಿ ಸವಾಲು ಹಾಕುವ ಮೊದಲ ಪ್ರಯತ್ನವಾಗಿದೆ. ಇದಕ್ಕೆ ರಾಜತಾಂತ್ರಿಕ ಮಹತ್ವವಿದೆ. ಇದು ಇತರ ರಾಷ್ಟ್ರಗಳು ಸಹ ಗಾಜಾದಲ್ಲಿನ ಹಿಂಸೆಗೆ ತಡೆಯಹಾಕಲು ಒಟ್ಟಾಗಿ ಮುಂದಾಗಬಹುದಾದ ಆರಂಭ ಬಿಂದುವೂ ಇದಾಗಬಹುದು.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**